ಸಂಪುಟ: 05 ಸಂಚಿಕೆ: 189 ಪುಟಗಳು: 08 ಸೋಮವಾರ 22 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಸೂರ್ಯನಂತೆ ಹೊಳೆಯುವ ಆಸೆ ನಿಮಗಿದ್ದರೆ ಮೊದಲು ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ.


## ಗಣಪತಿ ವಿಗ್ರಹದ ಮೇಲೆ ಚಪ್ಪಲಿ ಮಾನಸಿಕ ಅಸ್ವಸ್ಥೆ ಲೀಲಮ್ಮ ಬಂಧನ

• ಉದಯವಾಹಿನಿ, ಹಾಸನ

ಬೇಲೂರಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನದ ವಿಜಯನಗರ ಬಡಾವಣೆಯ ಮಹಿಳೆ ಲೀಲಮ್ಮ ಎಂಬಾಕೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಆಕೆಗೆ ಮಾನಸಿಕ ಸ್ಥಿಮಿತ ಇಲ್ಲ ಎನ್ನುವ ಮಾಹಿತಿ ಇದೆ. ಈ ಬಗ್ಗೆ ಕೂಲಂಕಷ ತನಿಖೆ ನಡೆಸಲಾಗುತ್ತಿದೆ' ಎಂದು ಎಸ್‌ಪಿ ಮೊಹಮ್ಮದ್ ಸುಜೀತಾ ಅವರು ತಿಳಿಸಿದ್ದಾರೆ. ರಾತ್ರಿ 8.30ಕ್ಕೆ ಲೀಲಮ್ಮ ಹಾಸನದಿಂದ ಹೊರಟು ಬೇಲೂರು ಬಸ್ ಹತ್ತಿದ್ದಾರೆ. ನಂತರ ಚಿಕ್ಕಮಗಳೂರಿಗೆ ಹೋಗಿ ವಾಪಸ್ ಬೇಲೂರಿಗೆ ಬಂದಿದ್ದಾರೆ. ಬೇಲೂರಿನಲ್ಲಿ ಇಳಿದು ಪುರಸಭೆ ಆವರಣಕ್ಕೆ ಬಂದಿದ್ದು, ಮಹಿಳೆಯ ಸಂಪೂರ್ಣ ಚಲನವಲನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ದೇಗುಲಕ್ಕೆ ಹೋಗಿ ಬಂದ ಬಳಿಕ ಮರಳಿ ಹಾಸನಕ್ಕೆ ಬಂದಿದ್ದಾರೆ' ಎಂದು ಮಾಹಿತಿ ನೀಡಿದರು. 'ಹಾಸನದ ವಿಜಯನಗರದ ಆಕೆಯ ಮನೆ ಬಳಿಯೇ ಮಹಿಳೆಯನ್ನು ವಶಕ್ಕೆ ಪಡೆದಿದ್ದು, ಆಕೆಗೆ ವೈದ್ಯಕೀಯ ಪರೀಕ್ಷೆ ಅಗತ್ಯ ಇದೆ. ಈ ಹಿಂದೆ ಮನೆಯಲ್ಲೂ ಇದೇ ರೀತಿ ವರ್ತಿಸಿದ್ದ ಬಗ್ಗೆ ಕುಟುಂಬ ಸದಸ್ಯರಿಂದ ಮಾಹಿತಿ ಇದೆ' ಎಂದು ತಿಳಿಸಿದರು.

## ಸಿಎಂ ಸಿದ್ದರಾಮಯ್ಯಗೆ ದುರ್ಬುದ್ಧಿ, ವಿಕೃತ ಮನಸ್ಸು

• ಉದಯವಾಹಿನಿ, ಬೆಂಗಳೂರು



ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವದ ಕಾಂಗ್ರೇಸ್ ಸರ್ಕಾರದ ವಿರುದ್ಧ ಹಿಂದೂ ಸಮುದಾಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ.

ಧರ್ಮಸ್ಥಳದ ಬುರುಡೆ ಪ್ರಕರಣದ ಆರೋಪಗಳು, ಚಾಮುಂಡೇಶ್ವರಿ ದೇವಸ್ಥಾನದ ವಿವಾದ, ಗಣಪತಿ ಹಬ್ಬಕ್ಕೆ ಸಂಬಂಧಿಸಿದ ಕೆಲಸಗಳು ಸೇರಿ ಅನೇಕ ಹಿಂದೂ ವಿರೋಧಿ ಚುಟುವಟಿಕೆಗಳು ಸರ್ಕಾರದ ವಿರುದ್ಧ ಹಿಂದೂಗಳನ್ನು ಕೆರಳುವಂತೆ ಮಾಡಿದೆ. ಇದೇ ವಿಚಾರವಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸಿಎಂ ಸಿದ್ದರಾಮಯ್ಯ ವಿರುದ್ಧ ಕಿಡಿ ಕಾರಿದ್ದಾರೆ. ಸರ್ಕಾರದ ಹಿಂದೂ ವಿರೋಧಿ ಚಟುವಟಿಕೆಗಳು ಗರಿಗೆದರುತ್ತಿದೆ. ಇದರ ಮೇಲೆ ಜಾತಿ ಜನಗಣತಿ ಯೋಜನೆಯ ಮೂಲಕ ಸಮಾಜದಲ್ಲಿ ವಿಷಬೀಜ ಬಿತ್ತುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಆರೋಪಿಸಿದ್ದಾರೆ. ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂಳಲಾಗಿದೆ ಎಂಬ ಆರೋಪಗಳು ಕೂಡ ರಾಜ್ಯದಲ್ಲಿ ದೊಡ್ಡ ಗೊಂದಲಕ್ಕೆ ಕಾರಣವಾಗಿದೆ. ಈ ಆರೋಪದ ಮೇಲೆ ಸ್ಪೆಷಲ್ ಇನ್ವೆಸ್ಟಿಗೇಷನ್ ಟೀಮ್ (ಎಸ್‌ಐಟಿ) ರಚಿಸಲ್ಪಟ್ಟಿದ್ದು, ಉತ್ಖನನದಲ್ಲಿ ಹೆಚ್ಚಿನ ಅಸ್ಥಿಪಂಜರಗಳು ದೊರೆತಿಲ್ಲ. ಹೀಗಾಗಿ ಬಿಜೆಪಿ ನಾಯಕರು ಮತ್ತು ಹಿಂದೂ ಸಂಘಟನೆಗಳು ಇದನ್ನು ಕಾಂಗ್ರೇಸ್ ಇದನ್ನು ರಾಜಕೀಯಗೊಳಿಸಿದ್ದಾರೆ. ಹಿಂದೂ ಧಾರ್ಮಿಕ ಸ್ಥಳಗಳಿಗೆ ಅಪಮಾನ ಎಂದು ಆರೋಪಿಸಿದ್ದಾರೆ.

## ಶಾಲಾ ಅವಧಿ ಬದಲು ರಜೆ ವೇಳೆ ಸರ್ವೆಗೆ ಶಿಕ್ಷಕರ ಬಳಕೆ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ, ಆರ್ಥಿಕ ಸಮೀಕ್ಷೆ ಕಾರ್ಯವನ್ನು ಶಿಕ್ಷಕ ವರ್ಗ ಉತ್ತಮವಾಗಿ ನಡೆಸಿಕೊಡಲಿದೆ. ಶಿಕ್ಷಕರ ವಿಚಾರದಲ್ಲಿ ಬಿಜೆಪಿ ಗೊಂದಲ ಮೂಡಿಸುವ ಕೆಲಸ ಮಾಡಬಾರದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು. ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸಮೀಕ್ಷೆ ಮಾಡುವುದು ಅಗತ್ಯ. ವಿವಿಧ ಸಮುದಾಯಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ತಿಳಿದುಕೊಳ್ಳಬೇಕಾಗುತ್ತದೆ. ಶಿಕ್ಷಕರನ್ನು ಬಳಸದ ಹೊರತು ಬೇರೆ ಪರ್ಯಾಯ ವ್ಯವಸ್ಥೆ ಇಲ್ಲ. ಅದಕ್ಕಾಗಿಯೇ ಶಾಲಾ ಅವಧಿ ಬದಲು ರಜೆ ವೇಳೆ ಶಿಕ್ಷಕರನ್ನು ಸರ್ವೆಗೆ ಬಳಸಿಕೊಳ್ಳುತ್ತಿದ್ದೇವೆ. ಬಿಜೆಪಿಯವರು ಗಣೇಶ ಹಬ್ಬದಲ್ಲಿ ಗಲಾಟೆ ಹಬ್ಬ ಮಾಡ್ತಾರೆ, ಬಿಜೆಪಿಯವರು ಹೇಳೋದೆಲ್ಲವೂ ಸುಳ್ಳು ಎಂದು ಹೇಳಿದರು.

## ವಿಚಾರಣೆಗೆ 15 ದಿನಗಳ ಕಾಲಾವಕಾಶ ಕೋರಿದ ಜೋಶಿ

• ಉದಯವಾಹಿನಿ, ಬೆಂಗಳೂರು

ಅಧಿಕಾರ ದುರ್ಬಳಕೆ ಸೇರಿ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಸಹಕಾರ ಇಲಾಖೆ ನೀಡಿದ ನೋಟಿಸ್ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ 15 ದಿನಗಳ ಕಾಲಾವಕಾಶ ಕೇಳಿದ್ದಾರೆ. ಈ ಸಂಬಂಧ ಅವರು ಸಹಕಾರ ಇಲಾಖೆ ಕಾರ್ಯದರ್ಶಿ ಸಂಜಯ ಶೆಟ್ಟಣ್ಣನವರ್ ಅವರಿಗೆ ಪತ್ರ ಬರೆದಿದ್ದಾರೆ. ''ಸಹೋದರಿ ಪತಿ ಲಿಂಗರಾಜ ಕುರ್ತಕೋಟಿ ಅವರು ಮೃತಪಟ್ಟ ಕಾರಣ, ಲಿಖಿತ ಹೇಳಿಕೆ ನೀಡಲು ಹಾಗೂ ವಿಚಾರಣೆಗೆ ಹಾಜರಾಗಲು 15 ದಿನಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

'ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗಿರುವುದರಿಂದ ಏಕೆ ಆಡಳಿತಾಧಿಕಾರಿ ನೇಮಿಸಬಾರದು' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಿದ್ದ ಸಹಕಾರ ಇಲಾಖೆ ಕಾರ್ಯದರ್ಶಿ, ಇದೇ 22ರಂದು ಬೆಳಿಗ್ಗೆ 11.30ರೊಳಗೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಿದ್ದರು. ಒಂದು ವೇಳೆ ಹೇಳಿಕೆ ಸಲ್ಲಿಸಲು ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮಕ್ಕೆಗೊಳ್ಳುವುದಾಗಿ ಎಚ್ಚರಿಸಿದ್ದರು.

# ಪಾಕ್ ಪಕ್ಕೆಲುಬು ಮುರಿದ ಭಾರತ

## 18.5 ಓವರ್‌ಗಳಲ್ಲಿ 174 ರನ್ ಬಾರಿಸಿ 6 ವಿಕೆಟ್‌ಗಳ ಭರ್ಜರಿ ಜಯ

• ಉದಯವಾಹಿನಿ, ಬೆಂಗಳೂರು

ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಏಷ್ಯಾಕಪ್‌ನ 14ನೇ ಪಂದ್ಯದಲ್ಲಿ ಭಾರತ ತಂಡ ಭರ್ಜರಿ ಜಯ ಸಾಧಿಸಿದೆ. ಅದು ಕೂಡ ಬದ್ಧವೈರಿ ಪಾಕಿಸ್ತಾನ್ ತಂಡವನ್ನು ಹೀನಾಯವಾಗಿ ಬಗ್ಗು ಬಡಿಯುವ ಮೂಲಕ ಎಂಬುದು ವಿಶೇಷ. ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ದುಕೊಂಡಿದ್ದರು.

**ಅಂಪೈರ್ ತೀರ್ಪಿನ ವಿರುದ್ಧ ಸಿಡಿದ ಫಖರ್ ಝಮಾನ್**

ಅದರಂತೆ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ಪರ ಆರಂಭಿಕ ದಾಂಡಿಗ ಸಾಹಿಬ್‌ಝಾದ ಫರ್ಹಾನ್ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದರು. 45 ಎಸೆತಗಳನ್ನು ಎದುರಿಸಿದ ಫರ್ಹಾನ್ 3 ಸಿಕ್ಸ್ ಹಾಗೂ 5 ಫೋರ್‌ಗಳೊಂದಿಗೆ 58 ರನ್ ಬಾರಿಸಿ ಔಟಾದರು. ಇನ್ನು ಸೈಮ್ ಅಯ್ಯೂಬ್ 21 ರನ್‌ಗಳ ಕೊಡುಗೆ ನೀಡಿದರೆ, ಕೊನೆಯ ಹಂತದಲ್ಲಿ ಫಹೀಮ್ ಅಶ್ರಫ್ 20 ರನ್ ಬಾರಿಸಿದರು. ಈ ಮೂಲಕ ಪಾಕಿಸ್ತಾನ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 171 ರನ್ ಕಲೆಹಾಕಿತು.

**ಭಾರತದ ಇತರ ಬ್ಯಾಟ್ಸ್‌ಮನ್‌ಗಳ ದಾಖಲೆ**

ಭಾರತ ತಂಡದ ಒಟ್ಟು ನಾಲ್ಕು ಬ್ಯಾಟ್ಸ್‌ಮನ್‌ಗಳು ಟಿ20ಯಲ್ಲಿ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿ ಸಿಕ್ಸರ್ ಬಾರಿಸಿದ್ದಾರೆ, ಆದರೆ ಅಭಿಷೇಕ್ ಶರ್ಮಾ ಮಾತ್ರ ಎರಡು ಬಾರಿ ಈ ಸಾಧನೆ ಮಾಡಿದ್ದಾರೆ. ಇತರ ಮೂವರೆಂದರೆ, ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್ ಹಾಗೂ ಸಂಜು ಸ್ಯಾಮ್ಸನ್ ಈ ಸಾಧನೆ ಮಾಡಿದ್ದರು.

**ಟೀಮ್ ಇಂಡಿಯಾ ಆರಂಭಿಕರ ಅರ್ಭಟ:** 172 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾಗೆ ಶುಭ್‌ಮನ್ ಗಿಲ್ ಹಾಗೂ ಅಭಿಷೇಕ್ ಶರ್ಮಾ ಸ್ಫೋಟಕ ಆರಂಭ ಒದಗಿಸಿದ್ದರು. ಮೊದಲ ಓವರ್‌ನ ಮೊದಲ ಎಸೆತದಲ್ಲೇ ಸಿಕ್ಸ್ ಸಿಡಿಸಿ ಶುಭಾರಂಭ ಮಾಡಿದ ಅಭಿಷೇಕ್ ಕೇವಲ 24 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅತ್ತ ಶುಭ್‌ಮನ್ ಗಿಲ್ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದರು. ಈ ಮೂಲಕ ಗಿಲ್ ಕೂಡ 28 ಎಸೆತಗಳಲ್ಲಿ 47 ರನ್ ಬಾರಿಸಿದರು. ಆರಂಭಿಕರಿಬ್ಬರ ತೂಫಾನ್ ಬ್ಯಾಟಿಂಗ್‌ನೊಂದಿಗೆ ಟೀಮ್ ಇಂಡಿಯಾ ಕೇವಲ 10 ಓವರ್‌ಗಳಲ್ಲಿ 109 ರನ್ ಕಲೆಹಾಕಿತು.

ಅತ್ತ ಶುಭ್‌ಮನ್ ಗಿಲ್ (47) ಔಟಾದ ಬೆನ್ನಲ್ಲೇ ಸೂರ್ಯಕುಮಾರ್ ಯಾದವ್ (0) ಕೂಡ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಆರ್ಭಟ ಮುಂದುವರೆಸಿದ ಅಭಿಷೇಕ್ ಶರ್ಮಾ 39 ಎಸೆತಗಳಲ್ಲಿ 5 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ 74 ರನ್ ಚಚ್ಚಿದರು. ಈ ಹಂತದಲ್ಲಿ ಬಿರುಸಿನ ಹೊಡೆತಕ್ಕೆ ಮುಂದಾಗಿ ಕ್ಯಾಚ್ ನೀಡಿದರು. ಆ ಬಳಿಕ ಬಂದ ಸಂಜು ಸ್ಯಾಮ್ಸನ್ 13 ರನ್‌ಗಳಿಸಿ ಔಟಾದರು. ಈ ಹಂತದಲ್ಲಿ ಜೊತೆಗೂಡಿದ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಉತ್ತಮ ಜೊತೆಯಾಟದೊಂದಿಗೆ ಭಾರತ ತಂಡವನ್ನು 18.5 ಓವರ್‌ಗಳಲ್ಲಿ ಗುರಿ ಮುಟ್ಟಿಸಿದರು. ಈ ಮೂಲಕ ಪಾಕಿಸ್ತಾನ್ ವಿರುದ್ಧ ಟೀಮ್ ಇಂಡಿಯಾ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.




**ಭಾರತಕ್ಕೆ ಭರ್ಜರಿ ಜಯ**

**ಶಾಹೀನ್ ಆಫ್ರಿದಿಗೆ ಮೊದಲ ಸಿಕ್ಸರ್‌ನ ಆಘಾತ!**
ಪಾಕಿಸ್ತಾನದ ವೇಗದ ಬೌಲರ್ ಶಾಹೀನ್ ಶಾ ಆಫ್ರಿದಿ ಟಿ20ಯಲ್ಲಿ 70 ಬಾರಿ ಮೊದಲ ಓವರ್ ಎಸೆದಿದ್ದಾರೆ, ಇದು ಪೂರ್ಣ ಸದಸ್ಯ ತಂಡದ ಬೌಲರ್‌ಗಳಲ್ಲಿ ಎರಡನೇ ಅತಿ ಹೆಚ್ಚು. ಆದರೆ, ಅವರ ವಿರುದ್ಧ ಇದೇ ಮೊದಲ ಬಾರಿಗೆ ಇನ್ನಿಂಗ್ಸ್‌ನ ಮೊದಲ ಎಸೆತವನ್ನು ಬ್ಯಾಟ್ಸ್‌ಮನ್ ಸಿಕ್ಸರ್ ಹೊಡಿಸಿಕೊಂಡಿದ್ದಾರೆ. ಶಾಹೀನ್ ಅಫ್ರಿದಿ ಬೌಲಿಂಗ್‌ನಲ್ಲಿ ಈ ದಾಖಲೆ ಮಾಡಿದ ಮೊದಲ ಬ್ಯಾಟರ್ ಎಂಬ ದಾಖಲೆಗೆ ಅಭಿಷೇಕ್ ಶರ್ಮಾ ಪಾತ್ರರಾಗಿದ್ದಾರೆ. ಈ ಸಿಕ್ಸರ್ ಭಾರತದ ಚೇಸ್‌ಗೆ ದಿಟ್ಟ ಆರಂಭವನ್ನು ನೀಡಿತು.



**ಬೇಸರ ತರಿಸಿದ ತಿಲಕ್-ಸಂಜು ಜೊತೆಯಾಟ**

ಸೂರ್ಯ ಔಟ್ ಆದ 17 ರನ್‌ಗಳ ಅಂತರದಲ್ಲಿ ಅಭಿಷೇಕ್ ಶರ್ಮಾ ಕೂಡ ವಿಕೆಟ್ ಒಪ್ಪಿಸಿದರು. ಅಭಿಷೇಕ್ ಶರ್ಮಾ 39 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸರ್‌ಗಳ ಸಹಿತ 74 ರನ್‌ಗಳಿಸಿ ಅಬ್ರಾರ್‌ಗೆ ವಿಕೆಟ್ ಒಪ್ಪಿಸಿದರು. ಬ್ಯಾಕ್ ಟು ಬ್ಯಾಕ್ ಸಿಕ್ಸರ್ ಹೊಡೆಯಲು ಯತ್ನಿಸಿ ಕ್ಯಾಚ್ ಔಟ್ ಆದರು. ಅಭಿಷೇಕ್ ನಂತರ ಭಾರತ ರನ್‌ಗಳಿಸುವ ವೇಗಕ್ಕೆ ಕಡಿವಾಣ ಬಿದ್ದಿತು. ಸಂಜು ಸ್ಯಾಮ್ಸನ್ ಹಾಗೂ ತಿಲಕ್ ವರ್ಮಾ 26 ಎಸೆತಗಳನ್ನಾಡಿ ಕೇವಲ 25 ರನ್‌ಗಳಿಸಿದರು. ಸಂಜು 17 ಎಸೆತಗಳನ್ನಾಡಿ 1 ಬೌಂಡರಿಯೊಂದಿಗೆ ಕೇವಲ 13 ರನ್‌ಗಳಿಸಿ ರೌಫ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.


**ಪಾಕಿಸ್ತಾನದ ಇನ್ನಿಂಗ್ಸ್**

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡ ಆರಂಭಿಕ ಬ್ಯಾಟರ್ ಸಾಹಿಬ್ಜಾದಾ ಫರ್ಹಾನ್ 56 ರನ್, ಫಖರ್ ಜಮಾನ್ 15, ಸೈಮ್ ಆಯುಬ್ 21, ಹುಸೈನ್ ತಲಾತ್ 10, ಮೊಹಮ್ಮದ್ ನವಾಜ್ 21, ಸಲ್ಮಾನ್ ಅಲಿ ಆಘಾ ಅಜೇಯ 17, ಫಹೀಮ್ ಅಶ್ರಫ್ ಅಜೇಯ 20(8 ಎಸೆತ) ರನ್‌ಗಳ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 171 ರನ್‌ಗಳಿಸಿತ್ತು.

**ಕೊನೆಯಲ್ಲಿ ಅಬ್ಬರಿಸಿದ ತಿಲಕ್**

ಹಾರ್ದಿಕ್ ಪಾಂಡ್ಯ ಹಾಗೂ ತಿಲಕ್ ವರ್ಮಾ ಮುರಿಯದ 5ನೇ ವಿಕೆಟ್‌ಗೆ ಜೊತೆಯಾಟದಲ್ಲಿ 26 ರನ್‌ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ತಿಲಕ್ ವರ್ಮಾ 19 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸಹಿತ ಅಜೇಯ 30 ರನ್‌ಗಳಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಹಾರ್ದಿಕ್ ಅಜೇಯ 7 ರನ್ ಗಳಿಸಿದರು. ಪಾಕಿಸ್ತಾನದ ಪರ ಹಾರಿಸ್ ರೌಫ್ 26ಕ್ಕೆ 2, ಅಬ್ರಾರ್ ಅಹ್ಮದ್ ಹಾಗೂ ಫಹೀಮ್ ಅಶ್ರಫ್ ತಲಾ 1 ವಿಕೆಟ್ ಪಡೆದರು.

**ಪಾಕ್ ನಾಯಕನನ್ನು ನಿರ್ಲಕ್ಷಿಸಿ ಹೊರನಡೆದ ಸೂರ್ಯಕುಮಾರ್**



ಏಷ್ಯಾಕಪ್‌ನ 14ನೇ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಮುಖಾಮುಖಿಯಾಗಿದೆ. ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಈ ಪಂದ್ಯದ ಟಾಸ್ ವೇಳೆ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಅಘಾ ಅವರನ್ನು ನಿರ್ಲಕ್ಷಿಸಿದ್ದಾರೆ. ಅದು ಸಹ ಮತ್ತೊಮ್ಮೆ ಶೇಕ್ ಹ್ಯಾಂಡ್ ನೀಡದಿರುವ ಮೂಲಕ..! ಸೆಪ್ಟೆಂಬರ್ 14 ರಂದು ನಡೆದ ಪಂದ್ಯದ ವೇಳೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪಾಕ್ ನಾಯಕನೊಂದಿಗೆ ಶೇಕ್ ಹ್ಯಾಂಡ್ ಮಾಡಿರಲಿಲ್ಲ. ಅಷ್ಟೇ ಅಲ್ಲದೆ ಈ ಪಂದ್ಯದ ಬಳಿಕ ಟೀಮ್ ಇಂಡಿಯಾ ಆಟಗಾರರು ಕೂಡ ಪಾಕ್ ಆಟಗಾರರಿಗೆ ಹಸ್ತಲಾಘವ ನೀಡದೇ ಹೊರ ನಡೆದಿದ್ದರು. ಈ ಅವಮಾನವನ್ನು ಮುಂದಿಟ್ಟು ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಏಷ್ಯಾಕಪ್ ಟೂರ್ನಿಯಿಂದ ಹೊರನಡೆಯುವ ಗೊಡ್ಡು ಬೆದರಿಕೆಯೊಡ್ಡಿದ್ದರು. ಆದರೀಗ ಮತ್ತೊಮ್ಮೆ ಸೂರ್ಯಕುಮಾರ್ ಯಾದವ್ ಪಾಕಿಸ್ತಾನ್ ತಂಡದ ನಾಯಕನಿಗೆ ಶೇಕ್ ಹ್ಯಾಂಡ್ ನೀಡದೇ ಹೊರನಡೆದು ದಿಟ್ಟ ನಿಲುವು ಪ್ರದರ್ಶಿಸಿದ್ದಾರೆ. ಜಮ್ಮು-ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರು ನಡೆಸಿದ ಭಯೋತ್ಪಾದಕ ದಾಳಿಯಿಂದಾಗಿ 26 ಮಂದಿ ಸಾವನ್ನಪ್ಪಿದ್ದರು. ಈ ದಾಳಿಯನ್ನು ಖಂಡಿಸಿ ಭಾರತೀಯ ಆಟಗಾರರು ಪಾಕ್ ಆಟಗಾರರೊಂದಿಗೆ ಹಸ್ತಲಾಘವ ಮಾಡಲು ನಿರಾಕರಿಸಿದ್ದಾರೆ.

# ಕೆಎಸ್‌ಆರ್‌ಟಿಸಿ ಸೇರಿ 4 ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ನಿಗದಿಗೆ ಸಮಿತಿ ರಚನೆ

## 8 – 10 ವರ್ಷಗಳಿಗೊಮ್ಮೆ ದರ ಪರಿಷ್ಕರಣೆ ಮಾಡುವುದರಿಂದ ಸಾರ್ವಜನಿಕರಿಗೂ ಹೊರೆ ಹಿನ್ನೆಲೆ ಕ್ರಮ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಮಾದರಿಯಲ್ಲೇ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಪ್ರಯಾಣ ದರವನ್ನು ವೈಜ್ಞಾನಿಕವಾಗಿ ನಿಗದಿಪಡಿಸುವ ಸಲುವಾಗಿ ಸರಕಾರ, ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ (ಪಿಟಿಎಫ್‌ಆರ್‌ಸಿ) ರಚಿಸಿ ಅಧಿಸೂಚನೆ ಹೊರಡಿಸಿದೆ. ಸಾರಿಗೆ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸುವ ಉದ್ದೇಶದಿಂದ ಸಮಿತಿ ರಚಿಸಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ವೈಜ್ಞಾನಿಕವಾಗಿ ಪ್ರಯಾಣ ದರ ನಿಗದಿಪಡಿಸಲು ಈ ಮೊದಲು ಯಾವುದೇ ಸಮಿತಿಗಳನ್ನು ರಚಿಸಿರಲಿಲ್ಲ. ಈಗ ಕಾಲಕಾಲಕ್ಕೆ ಹೆಚ್ಚಳವಾಗುವ ಡೀಸೆಲ್ ಬೆಲೆ ಮತ್ತು ಇತರೆ ವೆಚ್ಚ ಸರಿದೂಗಿಸಲು ಪ್ರಯಾಣ ದರ ಪರಿಷ್ಕರಣೆ ಅಗತ್ಯವಾಗಿದೆ. ಇಲ್ಲವಾದಲ್ಲಿ ಸಾರಿಗೆ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಲಿವೆ. ಈ ಹಿನ್ನೆಲೆಯಲ್ಲಿ ಸರಕಾರ ಕರ್ನಾಟಕ ಮೋಟಾರು ವಾಹನ ನಿಯಮ-1989 ರಡಿಯಲ್ಲಿ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.




ಸಮಿತಿಯು ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಹೊಂದಿರಲಿದೆ. ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ಇಬ್ಬರು ಸದಸ್ಯರಲ್ಲಿಒಬ್ಬರು ಕಾನೂನಿನ ಶೈಕ್ಷಣಿಕ ಅರ್ಹತೆ ಹೊಂದಿರುವ ನಿವೃತ್ತ ಪ್ರಧಾನ ಕಾರ್ಯದರ್ಶಿ ಅಥವಾ ಸರಕಾರದ ಕಾರ್ಯದರ್ಶಿಯಾಗಿರಬೇಕು. ಇನ್ನೊಬ್ಬ ಸದಸ್ಯರು ಕೈಗಾರಿಕಾ ತಜ್ಞ ಅಥವಾ ಹಣಕಾಸು ತಜ್ಞರಾಗಿರಬಹುದು ಎಂದು ಸೂಚಿಸಲಾಗಿದೆ.

**ಸಾರಿಗೆ ನಿಗಮಗಳ ವೆಚ್ಚ ಏರಿಕೆ**

2014 ಕ್ಕೆ ಹೋಲಿಸಿದರೆ ಸಾರಿಗೆ ನಿಗಮದ ವೆಚ್ಚಗಳು ಸುಮಾರು ಶೇಕಡಾ 100ರಷ್ಟು ಏರಿಕೆಯಾದೆ. 8 - 10 ವರ್ಷಗಳಿಗೊಮ್ಮೆ ದರ ಪರಿಷ್ಕರಣೆ ಮಾಡುವುದರಿಂದ ಸಾರ್ವಜನಿಕರಿಗೂ ಹೊರೆಯಾಗುತ್ತದೆ. ಕಾಲ ಕಾಲಕ್ಕೆ ಅತ್ಯಲ್ಪ ಪ್ರಯಾಣ ದರ ಏರಿಕೆಯು ವೈಜ್ಞಾನಿಕವಾಗಿ ಸಮಂಜಸವಾಗಿರುತ್ತದೆ. ಪ್ರಯಾಣ ದರ ನಿರ್ವಹಣಾ ಸಮಿತಿಯು ರಾಜಕೀಯ ಇಚ್ಛಾಶಕ್ತಿಗಳಿಂದ ದೂರವಿದ್ದು, ಕೆಇಆರ್‌ಸಿ ಮಾದರಿಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲಿದೆ.

**ನೇಮಕಗೊಂಡ ಸದಸ್ಯರ ಮರು ಆಯ್ಕೆಗೆ ಅವಕಾಶ ಇಲ್ಲ;** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಸಮಿತಿಯ ಅಧಿಕಾರಾವಧಿಯನ್ನು ಮೂರು ವರ್ಷಗಳ ಅವಧಿಗೆ ಸೀಮಿತಗೊಳಿಸಲಾಗಿದೆ. ಈ ಸಮಿತಿಗೆ ನೇಮಕಗೊಂಡ ಸದಸ್ಯರ ಮರು ಆಯ್ಕೆಗೆ ಅವಕಾಶ ಇರುವುದಿಲ್ಲ. ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಲಿಖಿತ ಪತ್ರದ ಮೂಲಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಹುದು.

ಇದನ್ನು ಅಂಗೀಕರಿಸುವ ಅಧಿಕಾರ ರಾಜ್ಯ ಸರಕಾರಕ್ಕಿರುತ್ತದೆ. ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು.

**ವಾರ್ಷಿಕ ವರದಿ:** ರಸ್ತೆ ಸಾರಿಗೆ ನಿಗಮಗಳಿಗೆ ನೀಡುವ ಶಿಫಾರಸುಗಳ ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ರಾಜ್ಯ ಸರಕಾರಕ್ಕೆ ಪ್ರತಿ ವರ್ಷ ಏಪ್ರಿಲ್ 1 ರ ನಂತರ ಸಾಧ್ಯವಾದಷ್ಟು ಬೇಗ ಮತ್ತು ಡಿಸೆಂಬರ್ 31ರೊಳಗೆ ವಾರ್ಷಿಕ ವರದಿ ಸಲ್ಲಿಸಬೇಕೆಂಬ ಷರತ್ತು ವಿಧಿಸಲಾಗಿದೆ.


# 57 ಕ್ರಿಶ್ಚಿಯನ್ ಉಪ-ಜಾತಿಗಳ ಹೆಸರನ್ನು ಕೈಬಿಟ್ಟ ಹಿಂದುಳಿದ ವರ್ಗಗಳ ಆಯೋಗ

## ● ಸಚಿವ ಸಂಪುಟ ಸಭೆಯಲ್ಲಿ ಜಾತಿ ಸಮೀಕ್ಷೆ ಗೊಂದಲ ಬಗ್ಗೆ ತೀವ್ರ ಆಕ್ರೋಶ ● ಸಮೀಕ್ಷೆ ಆರಂಭವಾಗಲು 2 ದಿನಗಳಷ್ಟೇ ಬಾಕಿ

• ಉದಯವಾಹಿನಿ, ಬೆಂಗಳೂರು

ಸೆ.22 ರಿಂದ ಆರಂಭವಾಗಲಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯ ವೇಳೆ ಕ್ರಿಶ್ಚಿಯನ್ ಉಪ ಜಾತಿಗಳ ಹೆಸರನ್ನು ನಮೂದಿಸಿರುವುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ ಉಪಜಾತಿಗಳನ್ನು ಕೈಬಿಡುವ ನಿರ್ಧಾರಕ್ಕೆ ಬಂದಿದೆ. ಸಚಿವರ ಆಕ್ಷೇಪಣೆಗಳು, ಎಸ್ಸಿ/ಎಸ್ಟಿ ಮತ್ತು ಒಬಿಸಿ ಗುಂಪುಗಳ ಪ್ರತಿಭಟನೆ ಮತ್ತು ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರ ಸಲಹೆಯ ಮೇರೆಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೋಮವಾರದಿಂದ ಪ್ರಾರಂಭವಾಗುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯಿಂದ 57 ಕ್ರಿಶ್ಚಿಯನ್ ಉಪ-ಜಾತಿಗಳನ್ನು ತೆಗೆದುಹಾಕಿದೆ. ಈ ಮೂಲಕ ಕ್ರಿಶ್ಚಿಯನ್ ಉಪ ಜಾತಿ ವಿವಾದಕ್ಕೆ ರಾಜ್ಯ ಸರ್ಕಾರ ತೆರೆ ಎಳೆದಿದೆ.

ಈ ನಿರ್ಧಾರದಿಂದಾಗಿ ಸಮೀಕ್ಷೆಯ ಪ್ರಶ್ನಾವಳಿಯಲ್ಲಿ ಉಪ-ಜಾತಿಗಳನ್ನು ಪಟ್ಟಿ ಮಾಡುವುದಿಲ್ಲ. ಸೆಪ್ಟೆಂಬರ್ 22 ಮತ್ತು ಅಕ್ಟೋಬರ್ 7 ರ ನಡುವೆ ಮೊಬೈಲ್ ತಂತ್ರಾಂಶವನ್ನು ಬಳಸುವ



ಎಣಿಕೆದಾರರು ಕ್ರಿಶ್ಚಿಯನ್ ಉಪ ಜಾತಿಗಳನ್ನು ''ಇತರರು'' ಕಾಲಂನಲ್ಲಿ ದಾಖಲಿಸಲಿದ್ದಾರೆ. ಮತಪರಿವರ್ತನೆಯ ಮೊದಲು ಪ್ರತಿವಾದಿಗಳು ತಮ್ಮ ಮೂಲ ಜಾತಿಯನ್ನು ಬಹಿರಂಗಪಡಿಸಬಹುದು, ಆದರೆ ಆ ನಮೂದುಗಳನ್ನು ಇತರರು ಅಡಿಯಲ್ಲಿ ಸಹ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

**ಉಪಜಾತಿ ವಿಚಾರವಾಗಿ ಬಿಜೆಪಿ-ಕಾಂಗ್ರೇಸ್ ಜಟಾಪಟಿ**

ವಿರೋಧ ಪಕ್ಷವಾದ ಬಿಜೆಪಿ, ಈ ಸಮೀಕ್ಷೆಯು ಮತಾಂತರ ವಿರೋಧಿ ಕಾನೂನನ್ನು ದುರ್ಬಲಗೊಳಿಸಲು ಮತ್ತು ಪರಿವರ್ತನೆಗೊಂಡ ಕ್ರಿಶ್ಚಿಯನ್ನರಿಗೆ ಮೀಸಲಾತಿ ವಿಸ್ತರಿಸಲು ಕಾಂಗ್ರೇಸ್ ಸರ್ಕಾರದ ಪಿತೂರಿ ಎಂದು ಆರೋಪಿಸಿತ್ತು.. ಕರ್ನಾಟಕ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷ ಅನಿಲ್ ಥಾಮಸ್, ಕ್ರಿಶ್ಚಿಯನ್ ಉಪಜಾತಿಗಳನ್ನು ನಮೂದಿಸುವುದು ಮತಾಂತರವನ್ನು ಸಾಮಾನ್ಯಗೊಳಿಸುತ್ತದೆ ಮತ್ತು ಜನರು ತಮ್ಮ ಜಾತಿಯ ಗುರುತನ್ನು ಕಳೆದುಕೊಳ್ಳುವ ಭಯವಿಲ್ಲದೆ ಮತಾಂತರಗೊಳ್ಳಲು ಪ್ರೋತ್ಸಾಹಿಸುತ್ತದೆ ಎಂದು ಹೇಳಿದ್ದಾರೆ. ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಅಧ್ಯಕ್ಷ ಎಸ್. ಹರೀಶ್ ಅವರು ಕಾಂಗ್ರೇಸ್ ಸರ್ಕಾರವು ಕ್ರಿಶ್ಚಿಯನ್ನರನ್ನು ಹಿಂದೂ ಒಬಿಸಿ ಸಮುದಾಯಗಳೊಂದಿಗೆ ಸಂಯೋಜಿಸಲು ಮತ್ತು ಹಿಂದೂ ಸಮುದಾಯಗಳನ್ನು ಕ್ರಿಶ್ಚಿಯನ್ನರೆಂದು ಲೇಬಲ್ ಮಾಡಲು ಸಂಚು ನಡೆಸುತ್ತಿದೆ ಎಂದು ಆರೋಪಿಸಿದ್ದರು.

**ರಾಜ್ಯಪಾಲರ ಸಲಹೆಯ ಹಿನ್ನೆಯಲ್ಲಿ ಕ್ರಮ:** ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ ಉಪಜಾತಿಗಳನ್ನು ಪಟ್ಟಿಗೆ ಸೇರಿಸುವುದರಿಂದ ಸಮಾಜದಲ್ಲಿ ಬಿರುಕು ಮೂಡಿಸಬಹುದು ಎಂದು ರಾಜ್ಯಪಾಲರು ಎಚ್ಚರಿಕೆ ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಿಶ್ಚಿಯನ್ ಉಪಜಾತಿಗಳ ಹೆಸರುಗಳನ್ನು ಹೊರಗಿಡುವಂತೆ ಆಯೋಗಕ್ಕೆ ಸೂಚಿಸಿದ್ದಾರೆ.

ಈ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಅವರು, ಸರ್ಕಾರ ಯಾವುದೇ ಲೇಬಲ್‌ಗಳನ್ನು ನಿಗದಿಪಡಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹಿಂದಿನ ಕಾಂತರಾಜು ಆಯೋಗದ ಸಮೀಕ್ಷೆಯಲ್ಲಿ ಭಾಗವಹಿಸಿದವರು ಸ್ವಯಂಪ್ರೇರಿತವಾಗಿ ತಮ್ಮನ್ನು ಆ ರೀತಿ ಗುರುತಿಸಿಕೊಂಡಿದ್ದರು. ಈ ಗೊಂದಲವನ್ನು ನಿವಾರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಸಮೀಕ್ಷೆಯ ಉದ್ದೇಶವು ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗುರುತಿಸುವುದು. ಯಾರಾದರೂ ಕ್ರಿಶ್ಚಿಯನ್ ಆಗಿದ್ದರೆ, ಆ ವ್ಯಕ್ತಿಯನ್ನು ಕ್ರಿಶ್ಚಿಯನ್ ಎಂದು ಪಟ್ಟಿ ಮಾಡಲಾಗುತ್ತದೆ ಮತ್ತು ಜಾತಿಯ ದೃಷ್ಟಿಯಿಂದ ಅಲ್ಲ ಎಂದು ಹೇಳಿದ್ದರು. ಕರ್ನಾಟಕದ ಸಮೀಕ್ಷೆಯು ತೆಲಂಗಾಣದ ಮಾದರಿಯನ್ನು ಅನುಸರಿಸುತ್ತದೆ, ವಿಶಾಲ ನೀತಿಯಲ್ಲಿ ಯಾವುದೇ ಹಿಂತೆಗೆತವಿಲ್ಲ ಎಂದು ಕಾಂಗ್ರೇಸ್ ವಿಶ್ವಾಸ ಹೊಂದಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹11,215/Gram24ct ₹10,280/Gram22ct ಬೆಳ್ಳಿ: ₹133.60/Gram

## ಆಸ್ತಿ ಆಸೆಗೆ ಸ್ನೇಹಿತನೊಂದಿಗೆ ಸೇರಿ ತಂದೆಯನ್ನೇ ಕೊಂದ ಪಾಪಿ ಮಗ

• ಉದಯವಾಹಿನಿ, ಬೆಂಗಳೂರು

ನಗರದ ಬಗಲಗುಂಟೆಯಲ್ಲಿ ಆಸ್ತಿಯ ಆಸೆಗೆ ಸ್ನೇಹಿತನೊಂದಿಗೆ ಸೇರಿ ತಂದೆಯನ್ನೇ ಕೊಲೆ ಮಾಡಿದ ಮಗನ ಮರ್ಡರ್ ಮಿಸ್ಟ್ರಿ ಪೋಸ್ಟ್ ಮಾರ್ಟಂ ರಿಪೋರ್ಟ್‌ನಲ್ಲಿ ಬಯಲಾಗಿದೆ. ದಾಸರಹಳ್ಳಿಯ ಕೆಂಪೇಗೌಡ ನಗರದ ಉದ್ಯಮಿ ಮಂಜಣ್ಣ ಮೃತ ದುರ್ದೈವಿ. ಮಗ ಮನೋಜ್ ಹಾಗೂ ಆತನ ಸ್ನೇಹಿತ ಕೊಲೆ ಮಾಡಿದ ಆರೋಪಿಗಳು. ಸೆ.2 ರಂದು ದಾಸರಹಳ್ಳಿಯ ಕೆಂಪೇಗೌಡ ನಗರದಲ್ಲಿ ಉದ್ಯಮಿ ಮಂಜಣ್ಣ ಮನೆಯಲ್ಲಿ ಮಲಗಿದ್ದ ಜಾಗದಲ್ಲೇ ಮೃತಪಟ್ಟಿದ್ದರು. ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಅಂತಾ ಮನೆಯವರು ಕೂಡ ಅಂತ್ಯಕ್ರಿಯೆ ಮಾಡಿದ್ರು. ಇದೀಗ ಮರಣೋತ್ತರ ಪರೀಕ್ಷೆಯಲ್ಲಿ ಇದೊಂದು ಕೊಲೆ ಅನ್ನೋದು ಗೊತ್ತಾಗಿದೆ. ಮಂಜಣ್ಣ ಬಗಲುಗುಂಟೆಯಲ್ಲಿ ಒಳ್ಳೆಯ ಸ್ಥಿತಿವಂತರಾಗಿದ್ದರು. ಐದಾರು ಬಿಲ್ಡಿಂಗ್, ನಾಲ್ಕೈದು ಸೈಟ್, ಒಂದು ವುಡ್ ವರ್ಕ್ಸ್ ಫ್ಯಾಕ್ಟರಿ ಅನ್ನು ಹೊಂದಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದು, ದೊಡ್ಡ ಮಗ ಮನೋಜ್ ಕೆಲಸ ಕಾರ್ಯ ಮಾಡದೆ ಸುತ್ತಾಡಿ ಕೊಂಡಿರುತ್ತಿದ್ದ. ಹೀಗಾಗಿ ತಂದೆ, ಮಗನಿಗೆ ಆಗಾಗ ಬುದ್ಧಿ ಹೇಳ್ತಿದ್ದರು.

## 8 ತಿಂಗಳಲ್ಲಿ 50ಕ್ಕೂ ಹೆಚ್ಚು ಅಧಿಕಾರಿಗಳು ಬಲೆಗೆ: ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಕೇವಲ 8 ತಿಂಗಳಿನಲ್ಲಿ 50ಕ್ಕೂ ಹೆಚ್ಚು ಸರ್ಕಾರಿ ಅಧಿಕಾರಿಗಳು ಬಲೆಗೆ ಬಿದ್ದಿರುವುದು, ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಎಷ್ಟರ ಮಟ್ಟಿಗೆ ಬೇರೂರಿಗೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಲೋಕಾಯುಕ್ತ ವಿಶೇಷ ನ್ಯಾಯಾಲಯ ಕಿಡಿಕಾರಿದೆ. ವೈದ್ಯರ ಪತ್ನಿಯಿಂದ 25,000 ರೂ. ಲಂಚ ಪಡೆಯುವಾಗ ಸಿಕ್ಕಿಬಿದ್ದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಡಾ. ಎಸ್. ರಾಮಾನುಜ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ತಿರಸ್ಕರಿಸುವಾಗ ನ್ಯಾಯಾಲಯ ಈ ಅಭಿಪ್ರಾಯಗಳನ್ನು ನೀಡಿದೆ. ಲಂಚ ನೀಡದೆ ಯಾವುದೇ ಕೆಲಸವನ್ನು ಸರ್ಕಾರಿ ಕಚೇರಿಗಳಿಂಗ ಮಾಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬಂತಹ ಭಾವನೆ ಮೂಡತೊಡಗಿದೆ. ಕೆಲ ವ್ಯಕ್ತಿಗಳು ಇಂತಹ ಭ್ರಷ್ಟ ಅಧಿಕಾರಿಗಳ ಕುರಿತು ಸಹಾನುಭೂತಿ ವ್ಯಕ್ತಪಡಿಸುತ್ತಾರೆ.

## ಭರತನಾಟ್ಯ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು



ಮಲ್ಲೇಶ್ವರದ ಸಂಪಿಗೆ ರಸ್ತೆಯ 8ನೇ ಅಡ್ಡ ರಸ್ತೆಯಲ್ಲಿರುವ ಶ್ರೀ ಮಹೇಶ್ವರೀ ದೇವಸ್ಥಾನದಲ್ಲಿ ದಸರಾ ಮಹೋತ್ಸವದ ಪ್ರಯುಕ್ತ ಸೆಪ್ಟೆಂಬರ್ 23, ಮಂಗಳವಾರ ಸಂಜೆ 6-30ಕ್ಕೆ ವಿದುಷಿ ಶ್ರೀಮತಿ ನಿವೇದಿತಾ ಶರ್ಮಾ ನಾಡಿಗ್ ಅವರ ನಿರ್ದೇಶನದಲ್ಲಿ ನಿವೇದಿತಾ ಡ್ಯಾನ್ಸ್ ಎನ್ಸೆಂಬಲ್ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸರ್ವರಿಗೂ ಆತ್ಮೀಯ ಸುಸ್ವಾಗತ

## ಪತ್ನಿಯ ಕತ್ತು ಸೀಳಿ ಹತ್ಯೆಗೆ ಯತ್ನ; ಆರೋಪಿ ಬಂಧನ

• ಉದಯವಾಹಿನಿ, ಬೆಂಗಳೂರು

ಚಾಕುವಿನಿಂದ ಪತ್ನಿಯ ಕತ್ತು ಸೀಳಿ ಕೊಲೆ ಮಾಡಲು ಯತ್ನಿಸಿದ ಆರೋಪದ ಮೇಲೆ 35 ವರ್ಷದ ವ್ಯಕ್ತಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ. ಕಾಮಾಕ್ಷಿಪಾಳ್ಯ ಸಮೀಪದ ನಿವಾಸಿ ಪ್ರಸನ್ನ ಅಲಿಯಾಸ್ ಚಂದ್ರು ಬಂಧಿತನಾಗಿದ್ದು, ಎರಡು ದಿನಗಳ ಹಿಂದೆ ತನ್ನ ಪತ್ನಿ ದೇವಿಕಾ ಮೇಲೆ ಹಲ್ಲೆ ನಡೆಸಿ ಚಂದ್ರು ಕೊಲೆಗೆ ಯತ್ನಿಸಿದ್ದ. ಈ ಬಗ್ಗೆ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಆರೋಪಿ ಬಂಧನವಾಗಿದೆ.

11 ವರ್ಷಗಳ ಹಿಂದೆ ಮಂಡ್ಯ ಜಿಲ್ಲೆನಾಗಮಂಗಲ ತಾಲ್ಲೂಕಿನ ಚಂದ್ರು ಹಾಗೂ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ದೇವಿಕಾ ವಿವಾಹವಾಗಿದ್ದು, ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ಪತಿಯಿಂದ ಪ್ರತ್ಯೇಕವಾಗಿ ಲಿಂಗಧೀರನಹಳ್ಳಿಯ ಡಿಗ್ರೂಪ್ ಲೇಔಟ್‌ನಲ್ಲಿ ದೇವಿಕಾ ವಾಸವಾಗಿದ್ದರು. ಮದ್ಯ ಚಟ ಬೆಳೆಸಿಕೊಂಡಿದ್ದ ಆರೋಪಿ, ಪತ್ನಿಯ ಮೇಲೆ ಅನುಮಾನ ಹೊಂದಿದ್ದು, ಇದೇ ವಿಚಾರಕ್ಕೆ ಪತ್ನಿಯೊಂದಿಗೆ ಆಗಾಗ್ಗೆ ಜಗಳ ನಡೆಸುತ್ತಿದ್ದ ಎನ್ನಲಾಗಿದೆ. ಇದಲ್ಲದೆ ಪತ್ನಿಯ ಮಾರ್ಫ್ ಮಾಡಿದ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲೂ ಹಂಚಿಕೊಂಡಿದ್ದಾನೆ.

## ಕರಾವಳಿ ಜಾನಪದ ಕ್ರೀಡೆ ಕಂಬಳ: ರಾಜ್ಯ ಕ್ರೀಡೆ ಮಾನ್ಯತೆ ನೀಡಲು ಸರ್ಕಾರ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಕರಾವಳಿ ಭಾಗದ ಪ್ರಸಿದ್ಧ ಜಾನಪದ ಕ್ರೀಡೆ ಕಂಬಳ ಅಭಿಮಾನಿಗಳಿಗೆ ರಾಜ್ಯ ಸರ್ಕಾರದಿಂದ ಸಿಹಿ ಸುದ್ದಿ ಸಿಕ್ಕಿದೆ. ಕಂಬಳಕ್ಕೆ ರಾಜ್ಯ ಕ್ರೀಡೆಯಾಗಿ ಮಾನ್ಯತೆ ನೀಡಲು ನಿರ್ಧರಿಸಲಾಗಿದ್ದು, ಶೀಘ್ರವೇ ಅಧಿಕೃತ ಆದೇಶ ಹೊರಬೀಳಲಿದೆ. ರಾಜ್ಯ ಸರ್ಕಾರದಿಂದ ಕಂಬಳ ಕ್ರೀಡೆಗೆ ಅಧಿಕೃತ ಮಾನ್ಯತೆ ಘೋಷಣೆಯಾದರೆ ರಾಜ್ಯದ ಕ್ರೀಡಾ ಪ್ರಾಧಿಕಾರದಿಂದ ಉಳಿದ ಕ್ರೀಡೆಗಳಿಗೆ ಸಿಗುವ ಸೌಲಭ್ಯಗಳು ಕೂಡ ಕಂಬಳ ಕ್ರೀಡೆಗಳಿಗೂ ಸಿಗಲಿವೆ. ಕಂಬಳಕ್ಕೆ ರಾಜ್ಯ ಕ್ರೀಡೆಯ ಮಾನ್ಯತೆ ಅಂತಿಮ ಹಂತದಲ್ಲಿದ್ದು, ಕಂಬಳ ಅಸೋಸಿಯೇಷನ್ ನೇಮಕ ಪಟ್ಟಿಯನ್ನು ರಾಜ್ಯ ಸರ್ಕಾರ ಅಂತಿಮಗೊಳಿಸಿದೆ.

**ಕಂಬಳ ನಮ್ಮ ಕ್ರೀಡೆ, ಅಗತ್ಯ ಬಿದ್ದರೆ ಕಾನೂನು ರಚನೆಗೂ ಸಿದ್ಧ:** ಸಿಎಂ ಸಿದ್ದರಾಮಯ್ಯ ಸಮಿತಿಯ ಅಧ್ಯಕ್ಷರೇ ಕಂಬಳ ಅಸೋಸಿಯೇಷನ್‌ಗೆ ಅಧ್ಯಕ್ಷರಾಗಿದ್ದಾರೆ. ಕಂಬಳ ಕೋಣದ ಮಾಲೀಕರು, ಓಟಗಾರರು ಇತರರಿಗೆ, ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಧನ, ವಿಶೇಷ ಅನುದಾನ ಸೌಲಭ್ಯ ಸಿಗಲಿವೆ. ಈ ಬಗ್ಗೆ ಬೈಲಾ ಸಿದ್ದಪಡಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

## ಜಾತಿ ಜನಗಣತಿ, ಒಬ್ಬ ಸಮೀಕ್ಷಕರಿಗೆ ಕನಿಷ್ಠ 150 ಮನೆ ಹಂಚಿಕೆ: ಮಧುಸೂದನ್ ನಾಯ್ಕ್

• ಉದಯವಾಹಿನಿ, ಬೆಂಗಳೂರು

ಹಿಂದುಳಿದ ವರ್ಗಗಳ ಆಯೋಗದಿಂದ ಈಗಾಗಲೇ ಎರಡು ಕೋಟಿ ಮನೆಗಳ ಪಟ್ಟಿ ತಯಾರಿಸುವ, ಜಿಯೋ-ಟ್ಯಾಗಿಂಗ್, ಗಣತಿ ಬ್ಲಾಕ್‌ನ ನಕ್ಷೆ ಮಾಡುವ ಕಾರ್ಯವನ್ನು ಮಾಡಿ ಮುಗಿಸಿದ್ದೇವೆ. ಬ್ಲಾಕ್ ನಕ್ಷೆಗಳಲ್ಲಿ ಮನೆಗಳನ್ನು ಗುರುತಿಸುವುದಲ್ಲದೇ ರಸ್ತೆಗಳನ್ನೂ ನಮೂದಿಸಿದ್ದು, ಗಣತಿದಾರರು ಸಮೀಕ್ಷೆ ಮಾಡಬೇಕಾದ ಮನೆಯನ್ನು ತಲುಪಲು ಅನುಕೂಲವಾಗುವಂತೆ ಮಾಡಿದ್ದೇವೆ.

ಹಾಗಾಗಿ ಸೆ. 22ರಿಂದ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ನಡೆಯಲಿದೆ ಎಂದು ಆಯೋಗದ ಅಧ್ಯಕ್ಷರಾದ ಮಧುಸೂದನ್ ಆರ್. ನಾಯ್ಕ್ ಅವರು ತಿಳಿಸಿದರು. ವಸಂತನಗರದ ದೇವರಾಜು ಅರಸು ಭವನದಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದ ಸಮಸ್ತ ನಾಗರಿಕರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆ. 22ರಿಂದ ಪ್ರಾರಂಭಿಸುತ್ತಿದೆ. ಒಬ್ಬ ಸಮೀಕ್ಷಕರಿಗೆ ಸುಮಾರು 140 ರಿಂದ 150 ಮನೆಗಳನ್ನು ಹೊಂದಿರುವ ಬ್ಲಾಕ್‌ಗಳನ್ನ ಹಂಚಿಕೆ ಮಾಡಲಾಗಿದೆ. ಸುಮಾರು 2 ಲಕ್ಷ ಶಿಕ್ಷಕರು, ಇತರ ಸಿಬ್ಬಂದಿ ಸಮೀಕ್ಷೆ ಹಾಗೂ ಸಂಬಂಧಿತ ಕೆಲಸಗಳಲ್ಲಿ ನಿರತರಾಗಲಿದ್ದು, ಇಲಾಖಾ ಅಧಿಕಾರಿಗಳು ಮೇಲುಸ್ತುವಾರಿ ಮಾಡಲಿದ್ದಾರೆ. ಒಬ್ಬ ಸಮೀಕ್ಷಕರು 1 ದಿನಕ್ಕೆ ಅಂದಾಜು 7 ರಿಂದ 8 ಮನೆಗಳನ್ನು ಸಮೀಕ್ಷೆ ಮಾಡಿದಲ್ಲಿ ರಾಜ್ಯಾದ್ಯಂತ ಇರುವ ಸುಮಾರು 2 ಕೋಟಿ ಕುಟುಂಬಗಳ ಮಾಹಿತಿಯನ್ನು 16 ದಿನಗಳಲ್ಲಿ ಮೊಬೈಲ್ ಆಪ್‌ನಲ್ಲಿ ಸಂಗ್ರಹಿಸಬಹುದಾಗಿದೆ. ಸಮೀಕ್ಷೆಯಲ್ಲಿ ಕುಟುಂಬಗಳ ದತ್ತಾಂಶಗಳನ್ನು ವಿಶೇಷ ತಂತ್ರಾಂಶ ಹೊಂದಿರುವ ಮೊಬೈಲ್ ಆ್ಯಪ್ ಮೂಲಕ ಸಂಗ್ರಹಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

# ನಮ್ಮ ಮೆಟ್ರೋ ಹಳದಿ ಮಾರ್ಗ 11 ಕಿ.ಮೀ ವಿಸ್ತರಣೆಗೆ ಪ್ರಸ್ತಾವನೆ

### ನಮ್ಮ ಮೆಟ್ರೋ ಹಳದಿ ಮಾರ್ಗವನ್ನು ಅತ್ತಿಬೆಲೆವರೆಗೆ ವಿಸ್ತರಿಸಲು ಡಿಕೆ ಶಿವಕುಮಾರ್ ಒಪ್ಪಿಗೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಹಳದಿ ಮಾರ್ಗವನ್ನು ಅತ್ತಿಬೆಲೆವರೆಗೆ ವಿಸ್ತರಿಸಲು ಡಿಸಿಎಂ ಡಿಕೆ ಶಿವಕುಮಾರ್ ಅನುಮತಿ ನೀಡಿದ್ದು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳಿಸಲಾಗಿದೆ ಎಂದು ಆನೇಕಲ್ ಶಾಸಕ ಬಿ ಶಿವಣ್ಣ ತಿಳಿಸಿದ್ದಾರೆ.

ಸದ್ಯ ನಮ್ಮ ಮೆಟ್ರೋ ಹಳದಿ ಮಾರ್ಗದ ಸದ್ಯಕ್ಕೆ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೆ ಇದೆ. ಚಂದಾಪುರದಿಂದ ಅತ್ತಿಬೆಲೆ ಗಡಿಯವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ಡಿಕೆ ಶಿವಕುಮಾರ್ ಒಪ್ಪಿಗೆ ಸೂಚಿಸಿದ್ದಾರೆ. ಇದರಿಂದ ಆನೇಕಲ್ ತಾಲ್ಲೂಕಿನ ಕೈಗಾರಿಕಾ ಪ್ರದೇಶಗಳಿಗೆ ಅನುಕೂಲವಾಗಲಿದೆ. ಅಲ್ಲದೆ, ಸೂರ್ಯನಗರದಲ್ಲಿ ನಿರ್ಮಾಣವಾಗಲಿರುವ ಬೃಹತ್ ಕ್ರೀಡಾಂಗಣಕ್ಕೂ ಸಂಪರ್ಕ ಸಿಗಲಿದೆ ಎಂದು ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕರು ಮಾಹಿತಿ ನೀಡಿದರು.

ಗುಲಾಬಿ ಮಾರ್ಗ ಆನೇಕಲ್ವರೆಗು ವಿಸ್ತರಣೆಗೆ ಮನವಿ ಆನೇಕಲ್ ತಾಲ್ಲೂಕಿನಲ್ಲಿ ಐದು ಕೈಗಾರಿಕಾ ಪ್ರದೇಶಗಳಿವೆ. ಇಲ್ಲಿಗೆ ಪ್ರತಿದಿನ ಲಕ್ಷಾಂತರ ಜನರು ಓಡಾಡುತ್ತಾರೆ. ಬನ್ನೇರುಘಟ್ಟ ಮಾರ್ಗದಲ್ಲಿ ಗೊಟ್ಟಿಗೆರೆವರೆಗೂ ಮೆಟ್ರೋ



ಉದಯವಾಹಿನಿ ಚಿತ್ರ

ಕಾಮಗಾರಿ ನಡೆಯುತ್ತಿದೆ. ಇದನ್ನು ರಾಷ್ಟ್ರೀಯ ಉದ್ಯಾನವನ, ಬನ್ನೇರುಘಟ್ಟ, ಜಿಗಣಿ, ಆನೇಕಲ್‌ವರೆಗೆ ವಿಸ್ತರಿಸಲು ಕೋರಲಾಗಿದೆ ಎಂದು ತಿಳಿಸಿದರು.

**11 ಕಿ.ಮೀ ವಿಸ್ತರಣೆ:** ಕೇಂದ್ರ ಸರ್ಕಾರ ಪ್ರಸ್ತಾವನೆಗೆ ಒಪ್ಪಿಗೆ ನೀಡಿದರೆ ಬೊಮ್ಮಸಂದ್ರದಿಂದ ಅತ್ತಿಬೆಲೆವರೆಗೂ 11 ಕಿ.ಮೀ ಮಾರ್ಗ ವಿಸ್ತರಣೆಯಾಗಲಿದೆ. ಮಾರ್ಗ ಮಧ್ಯೆ ಚಂದಾಪುರ ಮಾರುಕಟ್ಟೆ, ಚಂದಾಪುರ, ರಮಣ ಮರ್ಹರ್ಷಿ ಆಶ್ರಮ, ನೆರಳೂರು, ಯಡವನಹಳ್ಳಿ, ಅತ್ತಿಬೆಲೆ, ಅತ್ತಿಬೆಲೆ ಟೋಲ್‌ನಲ್ಲಿ ಮೆಟ್ರೋ ನಿಲ್ದಾಣ ನಿರ್ಮಾಣವಾಗಬಹುದು.

ದೊಮ್ಮಸಂದ್ರದಲ್ಲಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣವಾಗುತ್ತಿದೆ. ಇದಕ್ಕೆ 17 ಕೋಟಿ ರೂ. ಬಿಡುಗಡೆಯಾಗಿದ್ದು, ಕಾಮಗಾರಿ ನಡೆಯುತ್ತಿದೆ. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಇಎಸ್‌ಐ ಆಸ್ಪತ್ರೆ ನಿರ್ಮಾಣದ ಪ್ರಸ್ತಾವನೆಯನ್ನು ಮಲ್ಲಿಕಾರ್ಜುನ ಖರ್ಗೆ ಅವರು ಮಂಜೂರು ಮಾಡಿದ್ದಾರೆ. ಇದು ಅಂದಾಜು 215 ಕೋಟಿ ರೂ. ವೆಚ್ಚದ ಯೋಜನೆ. ಇದರಿಂದ ಜನರಿಗೆ ವೈದ್ಯಕೀಯ ಚಿಕಿತ್ಸೆ ಸಿಗಲಿದೆ.

ವೈದ್ಯರ ಗ್ರಾಮೀಣ ಸೇವೆ ಕಡ್ಡಾಯವಾದರೆ, ಜನರಿಗೆ ಉತ್ತಮ ಆರೋಗ್ಯ ಸಿಗಲಿದೆ ಎಂದು ಶಿವಣ್ಣ ಹೇಳಿದ್ದಾರೆ.

**ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ 5ನೇ ರೈಲು**

ನಮ್ಮ ಮೆಟ್ರೋ ಹಳದಿ ಮಾರ್ಗವು 3 ರೈಲುಗಳೊಂದಿಗೆ ಕಾರ್ಯಾರಂಭಿಸಿತು. ಸೆಪ್ಟೆಂಬರ್ ಆರಂಭದಲ್ಲಿ ಮತ್ತೊಂದು ರೈಲು ಸೇರ್ಪಡೆಯಾಯಿತು. ಸದ್ಯ ಐದನೇ ರೈಲಿನ ಒಂದು ಬೋಗಿಯನ್ನು ಕೊಲ್ಕತ್ತಾದಿಂದ ಬೆಂಗಳೂರಿಗೆ ರವಾನಿಸುತ್ತಿದ್ದು, ಉಳಿದ ಬೋಗಿಗಳು ಶೀಘ್ರ ಬರಲಿವೆ. ಅಕ್ಟೋಬರ್ ಅಂತ್ಯದೊಳಗೆ ಈ ಐದನೇ ರೈಲು ಪ್ರಯಾಣಿಕರ ಸೇವೆಗೆ ಲಭ್ಯವಾಗಲಿದೆ.

**ದೇಶದಲ್ಲಿಯೇ ಅತಿ ದೊಡ್ಡ ಕ್ರೀಡಾಂಗಣ**

**ಸೂರ್ಯ ನಗರದಲ್ಲಿ 1650 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣವಾಗಲಿದೆ. ಇದು ದೇಶದಲ್ಲೇ ಅತಿ ದೊಡ್ಡ ಕ್ರೀಡಾಂಗಣವಾಗಲಿದೆ. ಸಚಿವ ಸಂಪುಟವು ಇದಕ್ಕೆ ಒಪ್ಪಿಗೆ ನೀಡಿದೆ. ಡಿಪಿಆರ್ ಸಿದ್ಧವಾಗುತ್ತಿದೆ. ಇಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು ಆಡಬಹುದು. ಕ್ರೀಡಾಪಟುಗಳು ತಂಗಲು ಮತ್ತು ತರಬೇತಿ ಪಡೆಯಲು ಕೊಠಡಿಗಳಿರುತ್ತವೆ. ಅಂತಾರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು ಅನುಕೂಲವಾಗುವಂತೆ ಇದನ್ನು ನಿರ್ಮಿಸಲಾಗುವುದು ಎಂದು ಹೇಳಿದರು.**

## ಶಾಲಾ ಅವಧಿ ಬದಲು ರಜೆ ವೇಳೆ ಸರ್ವೆಗೆ ಶಿಕ್ಷಕರ ಬಳಕೆ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ, ಆರ್ಥಿಕ ಸಮೀಕ್ಷೆ ಕಾರ್ಯವನ್ನು ಶಿಕ್ಷಕ ವರ್ಗ ಉತ್ತಮವಾಗಿ ನಡೆಸಿಕೊಡಲಿದೆ. ಶಿಕ್ಷಕರ ವಿಚಾರದಲ್ಲಿ ಬಿಜೆಪಿ ಗೊಂದಲಗಳನ್ನು ಮೂಡಿಸುವ ಕೆಲಸ ಮಾಡಬಾರದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸಮೀಕ್ಷೆ ಮಾಡುವುದು ಅಗತ್ಯ. ವಿವಿಧ ಸಮುದಾಯಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ತಿಳಿದುಕೊಳ್ಳಬೇಕಾಗುತ್ತದೆ. ಶಿಕ್ಷಕರನ್ನು ಬಳಸದ ಹೊರತು ಬೇರೆ ಪರ್ಯಾಯ ವ್ಯವಸ್ಥೆ ಇಲ್ಲ. ಅದಕ್ಕಾಗಿಯೇ ಶಾಲಾ ಅವಧಿ ಬದಲು ರಜೆ ವೇಳೆ ಶಿಕ್ಷಕರನ್ನು ಸರ್ವೆಗೆ ಬಳಸಿಕೊಳ್ಳುತ್ತಿದ್ದೇವೆ. ಬಿಜೆಪಿಯವರು ಗಣೇಶ ಹಬ್ಬದಲ್ಲಿ ಗಲಾಟೆ ಹಬ್ಬ ಮಾಡ್ತಾರೆ, ಬಿಜೆಪಿಯವರು ಹೇಳೋದೆಲ್ಲವೂ ಸುಳ್ಳು ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಎಲ್ಲಾ ಸರಿಯಿದೆ ಅಂದಾಗ ಬಿಜೆಪಿಯವ್ರು ಏನಾದ್ರೂ ಒಂದು ಹುಳಿ ಹಾಕಿಬಿಡುತ್ತಾರೆ. ಶಿಕ್ಷಕರಿಗೆ ಸಮೀಕ್ಷೆ ಚೆನ್ನಾಗಿ ಮಾಡಿಕೊಡಿ, ಸಹಕಾರ ಕೊಡಿ ಅಂತ ಮನವಿ ಮಾಡಿಕೊಂಡಿದ್ದೇವೆ. ಶಿಕ್ಷಕರು ಸಹ ಅವರ ಹಕ್ಕು ಎಂದು ಭಾವಿಸಿ ಸಮೀಕ್ಷೆ ಮಾಡಬೇಕು. ಹತ್ತು ಜನ ನಾವು ಸಮೀಕ್ಷೆ ಮಾಡಲ್ಲ ಅಂದರೆ ಅವರೇ ಅವರ ಹಕ್ಕು ಉಲ್ಲಂಘನೆ ಮಾಡಿದ ಹಾಗೆ. ಶಿಕ್ಷಕರಿಗೆ ಅಂತ ದಸರಾ ರಜೆ ಕೆಲ ದಿನ ವಿಸ್ತರಣೆ ಮಾಡುವುದು ಈ ಹಂತದಲ್ಲಿ ಕಷ್ಟ. ದಸರಾ ರಜೆ ವಿಸ್ತರಣೆ ಪ್ರಸ್ತಾಪ ಇಲ್ಲ. ದಸರಾ ರಜೆ ಮುಗಿಯುತ್ತಿದ್ದ ಹಾಗೆ ಶಾಲೆಗಳು ಆರಂಭ ಆಗುತ್ತವೆ ಎಂದು ತಿಳಿಸಿದರು.

**ಬಿಜೆಪಿ ಕಾಲದಲ್ಲೂ ಶಿಕ್ಷಕರ ವಲಯದ ಮೇಲೆ ಅನ್ಯ ಕೆಲಸಗಳ ಒತ್ತಡ ಇರಲಿಲ್ಲವಾ? ಶಿಕ್ಷಕರ ಮೇಲೆ ಅನ್ಯ ಕೆಲಸಗಳ ಒತ್ತಡ ಇದೆ ಎಂದು ಒಪ್ಪಿಕೊಳ್ಳುತ್ತೇವೆ, ಆದರೆ ಸಮೀಕ್ಷೆ ಅರ್ಥಪೂರ್ಣವಾಗಿ ಆಗಬೇಕು. ಇದು ಅಗತ್ಯವಾಗಿ ನಡೆಯಬೇಕಿರುವ ಬೆಳವಣಿಗೆ. ಜನ ಕೂಡಾ ಇದಕ್ಕೆ ಸಹಕಾರ ಕೊಡಬೇಕು. ಕೇಂದ್ರ ಸರ್ಕಾರವೂ ಶಿಕ್ಷಕರನ್ನೇ ಬಳಸಿಕೊಂಡು ಜನಗಣತಿ ಮಾಡೋದು ಎಂದರು.**

## ಬಂದಿದೆ ಹೊಸ ಟ್ರಾಫಿಕ್ ಟ್ಯಾಕ್ಸ್: ವರ್ಷಕ್ಕೆ 2.5 ತಿಂಗಳು ಲಾಸ್



• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿಯಲ್ಲಿ ಹೊಸ ತೆರಿಗೆಯಾಗಿ ಟ್ರಾಫಿಕ್‌ಬಂದಿದೆ ಟೆಕ್ಕಿಯೊಬ್ಬರು ಪೋಸ್ಟ್ ಮಾಡಿದ್ದು ಸಾಮಾಜಿಕ ಜಾಲತಾಣದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಜೆಪಿನಗರದದಲ್ಲಿ ನಾನು ವಾಸವಾಗಿದ್ದು ಕಚೇರಿ ಹೊರ ವರ್ತುಲ ರಸ್ತೆಯಲ್ಲಿದೆ. ವರ್ಷಕ್ಕೆ 28 ಲಕ್ಷ ರೂ. ಸಂಪಾದನೆಯಿದೆ. ಈ ಸಂಪಾದನೆಗೆ 6.5 ಲಕ್ಷ ರೂ. ಆದಾಯ ತೆರಿಗೆ ಪಾವತಿಸಲಾಗುತ್ತಿದೆ. ದೈನಂದಿನ ಖರ್ಚಿನ ಮೇಲೆ 1.4 ಲಕ್ಷ ರೂ. ಜಿಎಸ್‌ಟಿ ಪಾವತಿಸಲಾಗುತ್ತಿದೆ. ಕಚೇರಿ 14 ಕಿ.ಮೀ ದೂರದಲ್ಲಿದೆ. ಮನೆಯಿಂದ ಕಚೇರಿಗೆ ತೆರಳಲು 30 ನಿಮಿಷ ತೆಗೆದುಕೊಳ್ಳಬೇಕು. ಆದರೆ ವಾಸ್ತವದಲ್ಲಿ 90 ನಿಮಿಷ ಪ್ರಯಾಣಿಸಬೇಕಾಗುತ್ತದೆ.

ಈ ಪೋಸ್ಟ್ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಈ ಪೋಸ್ಟ್‌ಗೆ ಬಗೆ ಬಗೆಯ ಕಮೆಂಟ್‌ಗಳು ಬರುತ್ತಿದೆ. ಸರ್ಕಾರ ಯಾಕೆ ಬೆಂಗಳೂರು ಒಂದೇ ಜಾಗಕ್ಕೆ ಕಂಪನಿಗಳಿಗೆ ತೆರೆಯಲು ಅವಕಾಶ ನೀಡುತ್ತಿದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇನ್ನು ಮುಂದೆ ರಾಜಧಾನಿಗಳನ್ನು ಬಿಟ್ಟು ಟಯರ್-2 ನಗರಗಳಲ್ಲಿ ಹೂಡಿಕೆಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಬರೆದಿದ್ದಾರೆ.

ಇನ್ನು ಕೆಲವರು ಸರ್ಕಾರಗಳು ಉಚಿತ ಕೊಡುಗೆ ನೀಡುವುದನ್ನು ನಿಲ್ಲಿಸಿ ಆ ಹಣವನ್ನು ಉತ್ತಮ ರಸ್ತೆ ನಿರ್ಮಾಣಗಳಿಗೆ ಬಳಸಬೇಕು. ರಸ್ತೆಗಳು ಸರಿಇಲ್ಲದ ಕಾರಣ ವಾಹನಗಳು ದೊಡ್ಡ ದೊಡ್ಡ ಗುಂಡಿಗಳಿಗೆ ಬಿದ್ದು ಹಾಳಾಗುತ್ತಿವೆ.

ಹೇಗೆ ಮಕ್ಕಳ ಶಿಕ್ಷಣಕ್ಕೆ ಎಂದು ವರ್ಷಕ್ಕೆ ಹಣವನ್ನು ಮೀಸಲಿಡಲಾಗುತ್ತದೋ ಅದೇ ರೀತಿ ಇನ್ನು ಮುಂದೆ ವಾಹನ ಮಾಲೀಕರು ವಾಹನ ರಿಪೇರಿಗೆಂದು ವರ್ಷಕ್ಕೆ ದುಡ್ಡನ್ನು ಇಡಬೇಕಾಗುತ್ತದೆ. ಟ್ರಾಫಿಕ್ ಜಾಮ್‌ನಿಂದ ಉಂಟಾಗುವ ಹೊಗೆಯಿಂದ ಉಸಿರಾಟದ ಸಮಸ್ಯೆ ಸಹ ಬರುತ್ತಿದೆ ಎಂದು ಸಿಟ್ಟು ಹೊರಹಾಕಿದ್ದಾರೆ.

**ಟ್ರಾಫಿಕ್‌ನಲ್ಲಿ ಕಳೆದುಹೋದ ಸಮಯವನ್ನು ಸೇರಿಸಿದರೆ ವರ್ಷಕ್ಕೆ ಎರಡೂವರೆ ತಿಂಗಳುಗಳು ಇದರಲ್ಲೇ ಕಳೆದುಹೋಗುತ್ತಿದೆ. ಮೊದಲ ಎರಡು ತೆರಿಗೆಯಲ್ಲಿ ಉತ್ತಮ ರಸ್ತೆಗಳು, ಸುಗಮ ಪ್ರಯಾಣ, ಸ್ಮಾರ್ಟ್ ನಗರಗಳನ್ನು ನಿರ್ಮಿಸಬೇಕಿತ್ತು. ಆದರೆ ಇದು ಸಾಧ್ಯವಾಗಿಲ್ಲ. ಈ ಹಣ ಬೇರೆ ಕಡೆ ಹೋಗುತ್ತಿದೆ. ಈ ಗುಪ್ತ ತೆರಿಗೆಯ ಬಗ್ಗೆ ಆತ್ಮಾವಲೋಕನ ಮಾಡಲು ಸಹ ಸಮಯವಿಲ್ಲ. ನೀವು ಸಹ ಈ ರೀತಿಯ ತೆರಿಗೆ ಪಾವತಿಸುತ್ತಿದ್ದೀರಾ? ಪಾವತಿಸಿದ್ದರೆ ಕಮೆಂಟ್ ಮಾಡಿ ಎಂದು ಹೇಳಿದ್ದಾರೆ.**

## ಹಿಂದೂ ಕ್ರೈಸ್ತಗೆ ಕೊಕ್: ಮತಾಂತರ ಆದವರಿಗೆ ಮೂಲ ಜಾತಿ ಅನ್ವಯ ಆಗಲ್ಲ

• ಉದಯವಾಹಿನಿ, ಬೆಂಗಳೂರು

ಸಮುದಾಯಗಳ ತೀವ್ರ ಒತ್ತಡಕ್ಕೆ ಮಣಿದ ಸರ್ಕಾರ ಜಾತಿಗಣತಿ ನಮೂನೆಯಿಂದ ಹಿಂದೂ ಕ್ರೈಸ್ತಗೆ ಕೊಕ್ ನೀಡಿದೆ. ಕ್ರೈಸ್ತ ಜೊತೆ ನಾನಾ ಹಿಂದೂ ಜಾತಿ ಉಲ್ಲೇಖಕ್ಕೆ ಬ್ರೇಕ್ ಹಾಕಿದೆ. ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ರಾಜ್ಯ ಹಿಂದುಳಿದ ಆಯೋಗ ಜಾತಿ ಗಣತಿಯಿಂದ 33 ಜಾತಿಗಳನ್ನು ಪಟ್ಟಿಯಿಂದ ತೆಗೆದಿದೆ. ಸೋಮವಾರದಿಂದ ಸಮೀಕ್ಷೆ ನಡೆಯಲಿರುವ ಹಿನ್ನೆಲೆಯಲ್ಲಿ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ಮತ್ತು ಆಯುಕ್ತ ದಯಾನಂದ ಭಾಗಿಯಾಗಿ ಹಲವು ವಿಚಾರಗಳನ್ನು ತಿಳಿಸಿದರು. ಹಿಂದೆ ಬಂದಿರುವ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ ಎನ್ನುವುದು ಇತ್ತು. ಈ ಕಾರಣಕ್ಕೆ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿತ್ತು.



ಮಾಧ್ಯಮಗಳಲ್ಲಿ ಈ ವಿಚಾರ ಬಂದ ಕಾರಣ ಚರ್ಚೆಗೆ ಕಾರಣವಾಗಿತ್ತು ಎಂದು ಮಧುಸೂದನ್ ನಾಯಕ್ ತಿಳಿಸಿದರು. ಯಾರು ಯಾವ ಜಾತಿ ಬೇಕಾದರೂ ಬರೆಸಬಹುದು. 1561 ಜಾತಿ ಬಿಟ್ಟು ಬೇರೆ ಯಾವುದೇ ಜಾತಿ ಇದ್ದರು ಮಾಹಿತಿ ಕೊಡಬಹುದು. ನಾನು ಜಾತಿ ಹೇಳುವುದಿಲ್ಲ ಎಂದರೂ ಅದಕ್ಕೂ ಅವಕಾಶವಿದೆ. ಇತರೇ ಅಂತಲೂ ಕಾಲಂ ಕೊಡಲಾಗಿದೆ. ಗೊಂದಲವಾಗಿರುವ ಜಾತಿಗಳ ಹೆಸರನ್ನು ತೆಗೆಯಲಾಗಿದೆ. ಕ್ರಿಶ್ಚಿಯನ್ ಒಕ್ಕಲಿಗ, ಲಿಂಗಾಯತ ಅಂತ ಜನರು ಇದ್ದರೆ ಬರೆಸಬಹುದು. ಡ್ರಾಪ್ ಔಟ್ ನಿಂದ ಮಾತ್ರ ತೆಗೆಯಲಾಗಿದೆ. ಆದರೆ ಆ ಜಾತಿಗಳು ಇರಲಿವೆ. ಬರೆಯಲು ಇಚ್ಛೆ ಇರುವವರು ಬರೆಸಬಹುದು. ಇದನ್ನು ಮಾಡೋ ಅವಶ್ಯಕತೆ ಇಲ್ಲ. ಪ್ರಾಟೆಸ್ಟೆಂಟ್ ಕ್ರೈಸ್ತ, ಕ್ರೈಸ್ತಪ್ರಾಟೆಸ್ಟೆಂಟ್, ಸಿರಿಯನ್ ಕ್ರೈಸ್ತ, ಎಸ್‌ಸಿ ಮತಾಂತರ ಕ್ರೈಸ್ತವನ್ನು ಉಳಿಸಿದ್ದೇವೆ. ಇದನ್ನ ಹೊರತುಪಡಿಸಿ 33 ಜಾತಿ ತೆಗೆದಿದ್ದೇವೆ. ಬ್ರಾಹ್ಮಣ ಮುಸ್ಲಿಂ, ಜೈನ್, ಇದಕ್ಕೆ ವಿರೋಧ ಬರಲಿಲ್ಲ. ಅದಕ್ಕೆ ಅದನ್ನ ಮುಂದುವರಿಸಿದ್ದೇವೆ. ಯಾರು ಯಾವ ಜಾತಿ ಬೇಕಾದ್ರು ಬರೆಸಬಹುದು ಎಂದು ತಿಳಿಸಿದರು.

## 1 ತಿಂಗಳು ಕಾಲಾವಕಾಶ, ರಸ್ತೆ ಗುಂಡಿಗಳ ಮುಚ್ಚದಿದ್ದರೆ ಮುಲಾಜಿಲ್ಲದೆ ಕಠಿಣ ಕ್ರಮ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಸ್ತೆ ಗುಂಡಿಗಳಿಂದ ವಾಹನ ಸವಾರರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ, ಈ ಬಗ್ಗೆ ಆಕ್ರೋಶ ಕೇಳಿಬರುತ್ತಿದ್ದರೂ ಈವರೆಗೆ ಗುಂಡಿ ಮುಚ್ಚದೆ ಇರುವುದು ಅಕ್ಷಮ್ಯ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಸಿದ್ದರಾಮಯ್ಯ ಅವರು ಅಸಮಾಧಾನ ವ್ಯಕ್ತಪಡಿಸಿದರು. ಬೆಂಗಳೂರು ನಗರ ರಸ್ತೆಗಳ ಸುಧಾರಣೆ, ಸಂಚಾರ ವ್ಯವಸ್ಥೆ ಕುರಿತು ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ನಡೆಸಿದರು.

ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಅವರು, ರಸ್ತೆ ಗುಂಡಿಗಳಿಂದ ವಾಹನ ಸವಾರರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ, ಈ ಬಗ್ಗೆ ಆಕ್ರೋಶ ಕೇಳಿಬರುತ್ತಿದ್ದರೂ ಈ ವರೆಗೆ ಗುಂಡಿ ಮುಚ್ಚದೆ ಇರುವುದು ಅಕ್ಷಮ್ಯ. ಪ್ರತಿ ವಾರ್ಡ್‌ನ ಇಂಜಿನಿಯರ್‌ಗಳು, ಮುಖ್ಯ ಇಂಜಿನಿಯರ್ ಗಳು ಈಗಾಗಲೇ ಕ್ರಮ ವಹಿಸಬೇಕಿತ್ತು. ಇನ್ನು ಒಂದು ತಿಂಗಳ ಕಾಲಾವಕಾಶ ನೀಡುತ್ತೇವೆ. ರಸ್ತೆ ಗುಂಡಿಗಳನ್ನು ಮುಚ್ಚಲು ಕಟ್ಟುನಿಟ್ಟಿನ ಕ್ರಮ ವಹಿಸಲೇಬೇಕು ಮತ್ತು ರಸ್ತೆಗಳನ್ನು ಸಂಚಾರ ಯೋಗ್ಯ ಮಾಡಲೇಬೇಕು. ರಸ್ತೆ ನಿರ್ವಹಣೆಗೆ ಸೂಕ್ತ ಕ್ರಮ ವಹಿಸದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಗುತ್ತಿಗೆದಾರರೊಂದಿಗೆ ಶಾಮೀಲಾಗದೆ ಒದಗಿಸಿರುವ ಅನುದಾನಕ್ಕೆ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು, ವೈಜ್ಞಾನಿಕವಾದ ಕಾಮಗಾರಿಗಳನ್ನು ಪೂರೈಸಲು ಕ್ರಮ ವಹಿಸಬೇಕು.

## ಪ್ರವೀಣ್ ಶೆಟ್ಟಿ ಹುಟ್ಟುಹಬ್ಬಕ್ಕೆ ಕೆ.ಆರ್.ಪುರದಲ್ಲಿ ಸೇವಾ ಕಾರ್ಯಕ್ರಮಗಳು

• ಉದಯವಾಹಿನಿ, ಕೆ.ಆರ್ ಪುರ

ಕನ್ನಡ ನಾಡು, ನುಡಿ, ಭಾಷೆಯ ಉಳಿವಿಗಾಗಿ ಶ್ರಮಿಸುತ್ತಿರುವ ಧೀಮಂತ ಹೋರಾಟಗಾರ ಪ್ರವೀಣ್ ಕುಮಾರ್ ಶೆಟ್ಟಿ ಅವರ ಹುಟ್ಟುಹಬ್ಬಕ್ಕೆ ಹಲವು ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಪ್ರವೀಣ್ ಶೆಟ್ಟಿ ಬಣದ ಕೆಆರ್‌ಪುರ ಕ್ಷೇತ್ರ ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.

ಪ್ರವೀಣ್ ಶೆಟ್ಟಿ ಅವರ ಹುಟ್ಟು ಹಬ್ಬದ ಅಂಗವಾಗಿ ಕೃಷ್ಣಮೂರ್ತಿ ನೇತೃತ್ವದಲ್ಲಿ ಕೆಆರ್‌ಪುರ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು, ಹಾಲು ವಿತರಿಸಿ, ಆಸ್ಪತ್ರೆ ಆವರಣದಲ್ಲಿ ಗಿಡ ನೆಟ್ಟು, ಅವರ ಹೆಸರಿನಲ್ಲಿ ಕಟ್ಟೆ ವಿನಾಯಕ, ಕೋಟೆ ಆಂಜನೇಯ, ಕೋಟೆ ವೆಂಕಟರಮಣ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಕಳೆದ 40 ವರ್ಷಗಳಿಂದ ನಾಡು, ನುಡಿ, ಜಲ, ಭಾಷೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಧೀಮಂತ ನಾಯಕ ಪ್ರವೀಣ್ ಶೆಟ್ಟಿ ಅವರು ನಾಯಕತ್ವ, ಕನ್ನಡ ಸೇವೆ ನಮ್ಮಗೆ ಸ್ಪೂರ್ತಿ, ಅವರ ಹಬ್ಬವನ್ನು ಸೇವಾ ಹಬ್ಬವಾಗಿ ಆಚರಿಸಲಾಗಿದೆ ಎಂದರು. ಬೆಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಗಂಧರ್ವ ರಮೇಶ್ ಮಾತನಾಡಿ, ಪ್ರವೀಣ್ ಶೆಟ್ಟಿ ಅವರು ಯುವಕನ್ನಡಿಗರಿಗೆ ಸದಾ ಸ್ಪೂರ್ತಿಯ ವ್ಯಕ್ತಿ, ಅವರ ಹೋರಾಟಗಳು, ಕನ್ನಡ ಪ್ರೇಮಾ ಪ್ರತಿಯೊಬ್ಬರಿಗೂ ಆದರ್ಶವಾಗಿದೆ.



ಉದಯವಾಹಿನಿ ಚಿತ್ರ

ಹುಟ್ಟುಹಬ್ಬವನ್ನು ದುಂದು ವೆಚ್ಚ ಮಾಡದೆ ಅವರ ಹೆಸರಿನಲ್ಲಿ ಸೇವೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕರವೇ ಮುಖಂಡರಾದ ಬೆನ್ನಗಾನಹಳ್ಳಿ ರವಿ, ಪರಿಸರ ಮಂಜು, ಕಾರ್ತಿಕ್, ವಿನಯ್, ಓಂ ಮಹೇಶ್, ಆಟೋ ಮಂಜು, ವಿನಯ್ ರಾಜ್, ಮದನ್, ಚಂದ್ರು, ಹನುಮಂತರಾಜು, ರವಿಚಂದ್ರ, ಅಶೋಕ್, ಜಗದೀಶ್ ಗೌಡ, ಶಂಕರ್ ಗೌಡ, ಮಹಿಳಾ ಘಟಕ ಅಧ್ಯಕ್ಷರಾದ ಭಾಗ್ಯ, ಸುಮಾ, ಶಾರದಮ್ಮ, ಪೂರ್ಣಿಮಾ ಇನ್ನು ಅನೇಕ ಕರವೇ ಮುಖಂಡರು ಇದ್ದರೂ.

# ಕೆ.ಆರ್ ಮಾರ್ಕೆಟ್‌ನಲ್ಲಿ ಸ್ವಚ್ಛತಾ ಅಭಿಯಾನ

### ಕಸ ವಿಲೇವಾರಿ, ವ್ಯವಸ್ಥೆಗಳ ಸೂಕ್ತ ನಿರ್ವಹಣೆಗೆ ಆಯುಕ್ತರ ಸೂಚನೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಕೆ.ಆರ್. ಮಾರುಕಟ್ಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿದರು. ಕೆ ಆರ್ ಮಾರ್ಕೆಟ್‌ನ ಕೆಸರುಮಯ ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದ ಆಯುಕ್ತರು ಮುರಿದ ಮೆಟ್ಟಿಲುಗಳು, ಅನೈರ್ಮಲ್ಯ ಶೌಚಾಲಯಗಳು ಮತ್ತು ಅಸ್ತವ್ಯಸ್ತವಾದ ಕಸದ ರಾಶಿಗಳನ್ನು ಕಂಡರು.

ಕೆ ಆರ್ ಮಾರುಕಟ್ಟೆಯಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಸಮಗ್ರ ಯೋಜನೆಯನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರತಿದಿನ ಸುಮಾರು 70 ಟನ್ ಕಸ ಉತ್ಪತ್ತಿಯಾಗುತ್ತಿದ್ದು, ವೈಜ್ಞಾನಿಕ ವಿಲೇವಾರಿಯ ಅಗತ್ಯವನ್ನು ಒತ್ತಿ ಹೇಳಿದರು.

ದಿನಪೂರ್ತಿ ಸ್ವಚ್ಛತೆ ಕಾಪಾಡಬೇಕೆಂದು ಸೂಚಿಸಿದರು. ಪ್ರತಿಯೊಂದು ಅಂಗಡಿಯೂ ಕಡ್ಡಾಯವಾಗಿ ತ್ಯಾಜ್ಯ ವಿಲೇವಾರಿಗಾಗಿ ಡಸ್ಟ್ ಬಿನ್‌ಗಳನ್ನು ಇಡಬೇಕು. ತ್ಯಾಜ್ಯವನ್ನು ಅನುಚಿತವಾಗಿ ವಿಲೇವಾರಿ ಮಾಡುವವರಿಗೆ ಮಾರ್ಷಲ್‌ಗಳು ದಂಡ ವಿಧಿಸಬೇಕು ಮತ್ತು ಗೊತ್ತುಪಡಿಸಿದ ಸ್ಥಳಗಳಲ್ಲಿ ಮಾತ್ರ ತ್ಯಾಜ್ಯವನ್ನು ವಿಲೇವಾರಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಜಾಗೃತಿ ಮೂಡಿಸಬೇಕು ಎಂದರು.



ಉದಯವಾಹಿನಿ ಚಿತ್ರ

**ದಿನಪೂರ್ತಿ ಸ್ವಚ್ಛತೆ ಕಾಪಾಡಬೇಕೆಂದು ಸೂಚನೆ**

ಅಂಗಡಿ ಮಾಲೀಕರು ತಮಗೆ ನಿಗದಿಪಡಿಸಿದ ಜಾಗದಲ್ಲಿ ಮಾತ್ರ ವ್ಯವಹಾರ ನಡೆಸಬೇಕು, ನಿಗದಿತ ಪ್ರದೇಶವನ್ನು ಮೀರಿ ಯಾವುದೇ ಅತಿಕ್ರಮಣ ಮಾಡಿದರೆ ದಂಡ ವಿಧಿಸಬೇಕು ಮತ್ತು ಅಂತಹ ಅತಿಕ್ರಮಣಗಳನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾರುಕಟ್ಟೆ ಆವರಣದಲ್ಲಿ ಮೆಟ್ಟಿಲುಗಳ ಬಳಿ ಇರುವ ಗ್ರಾನೈಟ್ ಕಲ್ಲುಗಳು ಹಾನಿಗೊಳಗಾಗಿವೆ, ಇದು ಗ್ರಾಹಕರಿಗೆ ಅನಾನುಕೂಲತೆಯನ್ನುಂಟುಮಾಡುತ್ತಿದೆ ಎಂದರು.

ಅಗತ್ಯವಿರುವ ಕಡೆಗಳಲ್ಲಿ ತಕ್ಷಣವೇ ನಿರ್ಣಯಿಸಿ ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು. ಹಾನಿಗೊಳಗಾದ ಛಾವಣಿಗಳು ನೀರಿನ ಸೋರಿಕೆಗೆ ಕಾರಣವಾಗುತ್ತಿವೆ, ಇದು ವ್ಯಾಪಾರಿಗಳು ಮತ್ತು ಸಾರ್ವಜನಿಕರ ಮೇಲೆ ಪರಿಣಾಮ ಬೀರುತ್ತದೆ ಎಂದರು. ಆವರಣದಲ್ಲಿ ನೀರು ನಿಲ್ಲದಂತೆ ತ್ವರಿತ ದುರಸ್ತಿ ಮತ್ತು ಕ್ರಮಗಳಿಗೆ ಸೂಚಿಸಿದರು.

**ಕೆ ಆರ್ ಮಾರುಕಟ್ಟೆಯಲ್ಲಿ ಅಂಗಡಿಗಳ ನಿರ್ವಹಣೆ**

**ಕೆ ಆರ್ ಮಾರ್ಕೆಟ್ ಪ್ರದೇಶದಲ್ಲಿ ಒಟ್ಟು ಅಂಗಡಿಗಳ ಸಂಖ್ಯೆಯನ್ನು ಗುರುತಿಸಲು ಮತ್ತು ಬಾಕಿ ಇರುವ ಬಾಡಿಗೆಯನ್ನು ಬಾಕಿ ಇರುವವರಿಂದ ವಸೂಲಿ ಮಾಡಲು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಾರುಕಟ್ಟೆಯು 1,288 ಅಂಗಡಿಗಳನ್ನು ಒಳಗೊಂಡಿದೆ. ನೆಲ ಮಹಡಿಯಲ್ಲಿ 529, ಮೊದಲ ಮಹಡಿಯಲ್ಲಿ 494 ಮತ್ತು ಎರಡನೇ ಮಹಡಿಯಲ್ಲಿ 265. ಬಾಡಿಗೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದರೂ, ಈ ವಿಷಯವನ್ನು ಆದಷ್ಟು ಬೇಗ ಪರಿಹರಿಸಬೇಕು ಮತ್ತು ಎಲ್ಲಾ ಬಾಕಿಗಳನ್ನು ವಸೂಲಿ ಮಾಡಬೇಕು ಎಂದು ಅವರು ಹೇಳಿದರು.**

ಅಂತರಾಳದಿಂದ...
EDITORIAL

# ಜಿಎಸ್‌ಟಿ ಕಡಿತದ ನಿಜವಾದ ಫಲಾನುಭವಿಗಳು

**ಜಿಎಸ್‌ಟಿ ಕಡಿತದಿಂದ ಪ್ರಯೋಜನ ಪಡೆಯುವವರು ಯಾರು ಭಾರತವೆಂದರೆ, ಕನಿಷ್ಠ ವೇತನಗಳಿಂದ ವಂಚಿತರಾಗಿರುವ, ಅಗತ್ಯ ವಸ್ತುಗಳ ಬೆಲೆಗಳು ಅನಿಯಂತ್ರಿತವಾಗಿ ಏರುವ, ಸಾವಿರಾರು ಉದ್ಯೋಗಗಳು ಕಡಿತಗೊಳ್ಳುವ, ಪ್ರತಿಯೊಂದು ಪಟ್ಟಣದ ಕೆಲವು ಸ್ಥಳಗಳಲ್ಲಿ ದಿನಗೂಲಿ ಕಾರ್ಮಿಕರು ಕೆಲಸಕ್ಕಾಗಿ ಕೊನೆಯಿಲ್ಲದೆ ಕಾಯುತ್ತಿರುವ, ಬಡತನದಿಂದಾಗಿ ಜನರು ವಲಸೆ ಹೋಗುತ್ತಿರುವ, ಜನರ ಖರೀದಿ ಸಾಮರ್ಥ್ಯ ಕುಸಿಯುತ್ತಿರುವ, ಕಡು ಬಡತನವನ್ನು ಸಂಕೇತಿಸುವ ಕೊಳೆಗೇರಿಗಳು ಹರಡುತ್ತಿರುವ ಮತ್ತು ಮತಗಳ ಬೇಟೆಗಾಗಿ ಉಚಿತಗಳ ಹೆಸರಿನಲ್ಲಿ ಸರಕಾರಗಳು ವಿತರಿಸುವ ಭಿಕ್ಷೆಗಾಗಿ ಸುದೀರ್ಘ ಸರತಿ ಸಾಲುಗಳಲ್ಲಿ ಅಸಹಾಯಕರಾಗಿ ಕಾಯುತ್ತಿರುವ ದೇಶ.**

ಬಿಹಾರ ಚುನಾವಣಾ ಪ್ರಚಾರದ ಉದ್ದಕ್ಕೂ ಬಿಜೆಪಿಯು ಜಿಎಸ್‌ಟಿ ತೆರಿಗೆಗೆ ಸಂಬಂಧಿಸಿ ಪ್ರಧಾನಿ ಮೋದಿಯವರು ಜನರ ಮೇಲೆ ತೋರಿಸಿದ ಉದಾರತನವನ್ನು ಮುಂದಿಟ್ಟುಕೊಂಡು ಮತಯಾಚನೆಯಲ್ಲಿ ತೊಡಗಿದೆ.

ಅಂದರೆ ಈವರೆಗೆ ಜಿಎಸ್‌ಟಿಯಿಂದಾಗಿ ದೇಶದ ಜನರು ಸಂಕಟ ಅನುಭವಿಸುತ್ತಿದ್ದರು ಮತ್ತು ಮೋದಿಯವರು ಮಧ್ಯ ಪ್ರವೇಶಿಸಿ ಜನರ ಸಂಕಟಗಳನ್ನು ದೂರ ಮಾಡಿದರು ಎನ್ನುವುದು ಬಿಜೆಪಿಯ ವಾದವಾಗಿದೆ. ವಿಪರ್ಯಾಸವೆಂದರೆ, ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತಂದು ಜನರನ್ನು ಸಂಕಟಕ್ಕೆ ತಳ್ಳಿರುವುದೇ ಪ್ರಧಾನಿ ಮೋದಿ. ತೆರಿಗೆಯಲ್ಲಿ ಭಾರೀ ಸುಧಾರಣೆ ಎನ್ನುವ ಘೋಷಣೆಯೊಂದಿಗೆ ಮಧ್ಯರಾತ್ರಿ ಜಿಎಸ್‌ಟಿ ಗಂಟೆ ಬಾರಿಸಿದ ಮೋದಿ ನೇತೃತ್ವದ ಸರಕಾರ ಕಳೆದ ಎಂಟು ವರ್ಷಗಳಿಂದ ಜನರನ್ನು ಅಕ್ಷರಶಃ ಸುಲಿಗೆ ಮಾಡಿತು. ವ್ಯಾಪಾರಿಗಳಿಗೆ ಅನುಕೂಲವಾಗುತ್ತದೆ ಎನ್ನುವ ಭರವಸೆ ಹುಸಿಯಾಯಿತು ಮಾತ್ರವಲ್ಲ, ಜಿಎಸ್‌ಟಿಯಿಂದಾಗಿ ವ್ಯಾಪಾರ ಚಟುವಟಿಕೆಗಳು ಅಸ್ತವ್ಯಸ್ತವಾಯಿತು. ಈವರೆಗೆ ವ್ಯಾಪಾರಗಳಿಗಾದ ನಷ್ಟ ಮತ್ತು ಗ್ರಾಹಕರಿಗಾದ ತೊಂದರೆಗಳಿಗೆ ಕ್ಷಮೆಯಾಚಿಸದ ಸರಕಾರ ಇದೀಗ ಜಿಎಸ್‌ಟಿಯಲ್ಲಿ ಸುಧಾರಣೆ ತಂದಿದ್ದು, ಅದನ್ನೇ ದೇಶಕ್ಕೆ ಮಾಡಿದ ಮಹದುಪಕಾರವೆಂದು ಬಿಂಬಿಸುತ್ತಿದೆ. ಇಷ್ಟಕ್ಕೂ ಈ ಕಡಿತದಿಂದ ದೇಶದ ಬಡವರು ಎಷ್ಟರಮಟ್ಟಿಗೆ ಲಾಭಪಡೆಯಲಿದ್ದಾರೆ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ. ಜಿಎಸ್‌ಟಿ ಸುಧಾರಣೆಯಿಂದ ಜನರು ಭಾರೀ ಸುಲಿಗೆಯಿಂದ ಸಣ್ಣ ಮಟ್ಟಿಗೆ ಪಾರಾಗಿದ್ದಾರೆಯೇ ಹೊರತು, ಅವರ ಸಾಮಾಜಿಕ, ಆರ್ಥಿಕ ಬದುಕಿನ ಮೇಲೆ ಯಾವ ರೀತಿಯ ವಿಶೇಷ ಲಾಭಗಳನ್ನು ಉಂಟು ಮಾಡಿಲ್ಲ ಎನ್ನುವ ವಾಸ್ತವವನ್ನು ಮಾಧ್ಯಮಗಳು ಮುಚ್ಚಿಡುತ್ತಿವೆ.




ಕೇಂದ್ರ ಸರಕಾರವು ತೆರಿಗೆ ಮಜಲುಗಳ ಸಂಖ್ಯೆಯನ್ನು ನಾಲ್ಕರಿಂದ ಎರಡಕ್ಕೆ ಇಳಿಸಿದೆ. ಕೆಲವು ವಸ್ತುಗಳು 5ಶೇ. ಮಜಲಿಗೆ ಸೇರ್ಪಡೆಗೊಂಡರೆ, ಇನ್ನು ಕೆಲವು ವಸ್ತುಗಳು 12ಶೇ. ಮಜಲಿಗೆ ಸೇರಿಕೊಂಡವು. ಅದೇ ವೇಳೆ, ಸಿಗರೆಟ್ ಮುಂತಾದ ಆರೋಗ್ಯಕ್ಕೆ ಹಾನಿಕಾರಕ ವಸ್ತುಗಳಿಗೆ 40 ಶೇಕಡ ತೆರಿಗೆ ದರವನ್ನು ವಿಧಿಸಲಾಗಿದೆ. ತೆರಿಗೆ ದರ ಕಡಿತವು ಪ್ರಮುಖ 'ಸುಧಾರಣೆ'ಯಾಗಿದೆ ಎಂದು ಹೇಳುತ್ತಾ ಕೇಂದ್ರ ಸರಕಾರವು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದೆ. ಈ ಸುಧಾರಣೆಗಳು, ಉಳಿತಾಯ ಮಾಡಲು ಕುಟುಂಬಗಳಿಗೆ ನೆರವಾಗುತ್ತವೆ ಮತ್ತು ಆರ್ಥಿಕತೆಯನ್ನು ಸದೃಢಗೊಳಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು. ಅದರಲ್ಲಿ ಎಷ್ಟು ನಿಜವಿದೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ.

ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ. ಪ್ರತ್ಯಕ್ಷ ತೆರಿಗೆಯನ್ನು ವ್ಯಕ್ತಿಗಳು ಅಥವಾ ಸಂಸ್ಥೆಗಳು ತಮ್ಮ ಆದಾಯದ ಆಧಾರದಲ್ಲಿ ಪಾವತಿಸುತ್ತವೆ. ಪರೋಕ್ಷ ತೆರಿಗೆಯನ್ನು ಗ್ರಾಹಕರು ಖರೀದಿಸಲಾದ ಸರಕುಗಳ ಆಧಾರದಲ್ಲಿ ಪಾವತಿಸಲಾಗುತ್ತದೆ. ಪರೋಕ್ಷ ತೆರಿಗೆಯನ್ನು ಸರಕುಗಳ ಖರೀದಿದಾರರು ವ್ಯಾಪಾರಿಗಳಿಗೆ ಪಾವತಿಸುತ್ತಾರೆ ಮತ್ತು ವ್ಯಾಪಾರಿಗಳು ಅದನ್ನು ಬಳಿಕ ಸರಕಾರಕ್ಕೆ ರವಾನಿಸುತ್ತಾರೆ. ಇತ್ತೀಚೆಗೆ ಕೇಂದ್ರ ಸರಕಾರ ಮಾಡಿರುವ ಬದಲಾವಣೆಯು ಪರೋಕ್ಷ ತೆರಿಗೆಗಳಿಗೆ ಸಂಬಂಧಿಸಿದೆ.

# ರಾಮಾಯಣ



## ಶರಭಂಗಮುನಿಯು ಬ್ರಹ್ಮಲೋಕವನ್ನು ಸೇರಿದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ **117ನೆಯ ಅಧ್ಯಾಯ**

ಸುಗಂಧೋದಕದಿಂದ ಚಿಮುಕಿಸಲ್ಪಟ್ಟು ಪುಷ್ಪಮಾಲಿಕೆಗಳಿಂದಲೂ ತೋರಣಪತಾಕೆಗಳಿಂದಲೂ ಅಲಂಕರಿಸಲ್ಪಟ್ಟು ಸಮಸ್ಥಳವಾಗಿದ್ದ ರಾಜಬೀದಿಯಲ್ಲಿ ರಥಕ್ಕೆ ಕಟ್ಟಿದ ಕುದುರೆಗಳು ಮುಗ್ಗರಿಸಿ ಬೀಳುತ್ತಿದ್ದವು. ಸೂರ್ಯನು ಧೂಮ್ರವರ್ಣನಾಗಿ ಕಾಣಿಸುತ್ತಿದ್ದನು.

ಖರನ ರಥದ ಮೇಲೆ ಒಂದು ಹದ್ದು ಕುಳಿತುಕೊಂಡಿತು. ಜನಸ್ಥಾನದ ಸಮೀಪದಲ್ಲಿ ಅನೇಕ ಮೃಗಪಕ್ಷಿಗಳು ಗಾರ್ದಭಗಳಂತೆ ಭಯಂಕರವಾದ ಧ್ವನಿಮಾಡುತ್ತಿದ್ದುವು. ಎಲ್ಲಾ ದಿಕ್ಕುಗಳಲ್ಲಿಯೂ ನರಿಗಳು ವಿಕಾರವಾಗಿ ಕೂಗುತ್ತಿದ್ದವು. ಅಂತರಿಕ್ಷಮಾರ್ಗದಲ್ಲಿ ದಟ್ಟವಾದ ಅಂಧಕಾರವು ಕವಿಯಿತು. ಘೋರವಾದ ಮೃಗಗಳೂ ಗಾರ್ದಭಗಳೂ ಖರನಿಗೆದುರಾಗಿ ಭಯಂಕರವಾಗಿ ಕೂಗುತ್ತ ಬರುತ್ತಿದ್ದವು. ನರಿಗಳು ಅಡ್ಡಗಟ್ಟುತ್ತ ಬಾಯಿಗಳಿಂದ ಕಿಡಿಗಳನ್ನು ಉಗುಳುತ್ತಿದ್ದವು

ಪರ್ವಕಾಲವಲ್ಲದಿದ್ದರೂ ಸೂರ್ಯ ಗ್ರಹಣವಾಯಿತು. ಹಗಲಿನಲ್ಲಿ ಮಿಂಚುಹುಳಗಳಂತೆ ನಕ್ಷತ್ರಗಳು ಬೀಳುತ್ತಿದ್ದವು. ಗೊರವನ ಹಕ್ಕಿಗಳು ಭಯಂಕರವಾಗಿ ಕೂಗುತ್ತಿದ್ದವು. ಸಿಡಿಲೊಡನೆ ಕೂಡಿದ ಕಿಡಿಗಳುದುರುತ್ತಿದ್ದವು. ಗಿರಿಕಾನನಸಹಿತವಾಗಿ ಭೂಮಿಯು ನಡುಗುತ್ತಿತ್ತು.

ರಥಾರೂಢನಾಗಿ ಬೊಬ್ಬಿಡುತ್ತ ನಾನಾ ದಿಕ್ಕುಗಳನ್ನು ನೋಡುತ್ತಿದ್ದ ಖರನ ಕಣ್ಣುಗಳಲ್ಲಿ ನೀರು ಮೊಸಗುತ್ತಿತ್ತು. ಆತನ ಹಣೆಯಲ್ಲಿ ಬೆವರು ಸುರಿದು ಮನಸ್ಸಿನಲ್ಲಿ ಭ್ರಮೆಹುಟ್ಟಿ ಸ್ವರಗುಂದಿತು. ಈ ರೀತಿಯಲ್ಲಿ ಆದ ಉತ್ಪಾತಗಳನ್ನು ಕಂಡು ಖರನು ತನ್ನ ರಾಕ್ಷಸಭಟರನ್ನು ಕುರಿತು ಎಲೈ ರಾಕ್ಷಸರುಗಳಿರಾ, ದುರ್ನಿಮಿತ್ತ ಸೂಚಕವಾದ ಈ ಉತ್ಪಾತಗಳನ್ನು ನಾನು ಲೆಕ್ಕಿಸುವವನಲ್ಲ. ನನ್ನ ಪರಾಕ್ರಮಾತಿಶಯದಿಂದ ಶತ್ರುಗಳು ಎಷ್ಟು ಬಲವಂತರಾದರೂ ಬಲಹೀನರೆಂದೇ ಎಣಿಸುವೆನು. ನನ್ನ ನಿಶಿತಶರಗಳಿಂದ ಆಕಾಶದಲ್ಲಿರುವ ನಕ್ಷತ್ರಗಳನ್ನಾದರೂ ಭೂಮಿಗೆ ಕೆಡಹುವೆನು. ಯುದ್ಧರಂಗದಲ್ಲಿ ಮೃತ್ಯುವನ್ನಾದರೂ ಕೊಲ್ಲುವೆನು, ಬಲಗರ್ವಿತನಾದ ಶ್ರೀರಾಮನನ್ನೂ ಆತನ ತಮ್ಮನಾದ ಲಕ್ಷ್ಮಣನನ್ನೂ ನನ್ನ ಕೊರಂಬುಗಳಿಂದ ಕೊಲ್ಲದೆ ತಿರುಗಿ ಬಾರೆನು, ಶೂರ್ಪಣಖಿಯ ಅರಣ್ಯ ಕಾಂಡ 24ನೆಯ ಅಧ್ಯಾಯ ನಿಮಿತ್ತವಾಗಿ ರಾಮಲಕ್ಷ್ಮಣರು ನಾಶವಾಗುವರು. ಆಕೆಯು ಅವರ ರಕ್ತಪಾನವನ್ನು ಮಾಡಿ ತನ್ನ ಮನಸ್ಸಿನ ಇಷ್ಟವನ್ನು ಸಲ್ಲಿಸಿಕೊಳ್ಳುವಳು. ನಾನು ಯಾವ ಯುದ್ಧರಂಗದಲ್ಲಿಯಾದರೂ ಅಪಜಯ ವನ್ನು ಪಡೆದವನಲ್ಲ. ಇದನ್ನು ನೀವು ಪ್ರತ್ಯಕ್ಷವಾಗಿ ಕಂಡಿದ್ದೀರಿ.

ನಾನು ಹುಸಿಯನ್ನು ನುಡಿಯು ವವನಲ್ಲ. ಯುದ್ಧರಂಗದಲ್ಲಿ ಕೋಪಿಸಿದೆನಾದರೆ ವಜ್ರಪಾಣಿಯಾದ ದೇವೇಂದ್ರನನ್ನಾದರೂ ಕೊಲ್ಲುವೆನು. ಈ ಹುಲ್ಲುಮನುಷ್ಯರ ಕೂಟ ಎಷ್ಟರದು ಎಂದು ಬೊಬ್ಬಿಡುತ್ತಿದ್ದನು. ಆತನ ಗರ್ಜಿತಧ್ವನಿಯನ್ನು ಕೇಳುತ್ತ ಆ ರಾಕ್ಷಸರ ಸೇನೆಯು ಮುಂದೆ ಬರುವ ಮೃತ್ಯುಪಾಶ ಬಂಧನವನ್ನರಿಯದೆ ಸಂತೋಷದಿಂದ ಉಬ್ಬುತ್ತಿದ್ದಿತು. ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಕರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಾಸ್ಯ, ರುಧಿರಾಶನ ಎಂಬ ಹನ್ನೆರಡು ಮಂದಿ ಮಹಾರಥಿಕರು ಖರನ ರಥದ ಸುತ್ತಲೂ ನಡೆಯುತ್ತಿದ್ದರು. ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥಿ, ತ್ರಿಶಿರ ಎಂಬ ನಾಲ್ಕು ಮಂದಿ ರಥಿಕರು ದೂಷಣನ ಹಿಂದೆ ನಡೆಯುತ್ತಿದ್ದರು. ಈ ರೀತಿಯಲ್ಲಿ ಭಯಂಕರರಾದ ರಾಕ್ಷಸರು, ಅಂಗಾರಕಾದಿ ಗ್ರಹಗಳು ಚಂದ್ರಸೂರ್ಯರ ಬಳಿಗೆ ಬರುವಂತೆ ರಾಮಲಕ್ಷ್ಮಣರ ಬಳಿಗೆ ಬರುತ್ತಿದ್ದರು.

**ರಾಕ್ಷಸ ಸೇನೆಯು ಶ್ರೀರಾಮನನ್ನು ಸುತ್ತಿಕೊಂಡದ್ದು**

ಈ ಪ್ರಕಾರ ಪರಾಕ್ರಮಿಯಾದ ಖರನು ಶ್ರೀರಾಮನ ಆಶ್ರಮಕ್ಕೆ ಬರುತ್ತಿದ್ದಾಗ ಆದ ಉತ್ಪಾತಗಳನ್ನು ನೋಡಿ ಶ್ರೀರಾಮನು ಲಕ್ಷ್ಮಣನನ್ನು ಕುರಿತು ಹೀಗೆಂದನು: ಲಕ್ಷ್ಮಣ, ಖರನು ನಮ್ಮೊಡನೆ ಯುದ್ಧಕ್ಕೆ ಬರುತ್ತಿದ್ದಾನೆ. ಆತನ ಮಾರ್ಗದಲ್ಲಿ ತೋರುವ ಉತ್ಪಾತಗಳು ಸಮಸ್ತ ಪ್ರಾಣಿಗಳಿಗೂ ಭಯವನ್ನುಂಟುಮಾಡುವಂಥವು. ಈ ದುರ್ನಿಮಿತ್ತಗಳು ನಾವು ರಾಕ್ಷಸರನ್ನು ಸಂಹಾರಮಾಡುವುದಕ್ಕೆ ಸೂಚಕವಾಗಿವೆ. ಅಂತರಿಕ್ಷಮಾರ್ಗದಲ್ಲಿ ಧೂಮ್ರವರ್ಣವಾಗಿ ಭಯಂಕರ ವಾದ ಮೇಘಗಳು ರಕ್ತಧಾರೆಗಳನ್ನು ಕರೆಯುತ್ತಿವೆ.

ಮುಂದುವರಿಯುವುದು...

**ಭಾರತದ ಅತ್ಯಂತ ಪ್ರಮುಖ ಮತ್ತು ವೈಭವದ ಹಬ್ಬಗಳಲ್ಲಿ ದಸರಾ ಕೂಡ ಒಂದು. ನಾಡಹಬ್ಬ ಎಂದೇ ಪ್ರಸಿದ್ಧವಾಗಿರುವ ಈ ಹಬ್ಬವು ಕರ್ನಾಟಕದಲ್ಲಿ ಅತ್ಯಂತ ಸಡಗರ ಮತ್ತು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಅದರಲ್ಲೂ ಮೈಸೂರಿನ ದಸರಾ ತನ್ನ ವಿಶಿಷ್ಟ ಪರಂಪರೆ, ಐತಿಹಾಸಿಕ ಹಿನ್ನೆಲೆ ಮತ್ತು ಜಂಬೂ ಸವಾರಿಯ ವೈಭವದಿಂದಾಗಿ ವಿಶ್ವದ ಗಮನ ಸೆಳೆಯುತ್ತದೆ. 2025ರ ದಸರಾ ಹಬ್ಬವು ಮೈಸೂರು ಮಾತ್ರವಲ್ಲದೆ, ಇಡೀ ರಾಜ್ಯದಲ್ಲಿ ಹೊಸ ಚೈತನ್ಯ ಮತ್ತು ಸಂತೋಷವನ್ನು ತರಲಿದೆ.**

# ನಾಡಹಬ್ಬ ದಸರಾ

## ಸಂಸ್ಕೃತಿ, ವಿಜಯ ಮತ್ತು ಪರಂಪರೆಯ ಮಹೋತ್ಸವ

• ಲೇಖನ; ಅನಿಲ್ ಕುಮಾರ್ ಮ.ತೇಲಂಗಿ ಮುದ್ದೇಬಿಹಾಳ

ದಸರಾ ಹಬ್ಬದ ಆಚರಣೆಗೆ ಒಂದು ಶ್ರೀಮಂತ ಮತ್ತು ಪೌರಾಣಿಕ ಇತಿಹಾಸವಿದೆ. ದುಷ್ಟ ಶಕ್ತಿಗಳ ಪ್ರತೀಕವಾದ ಮಹಿಷಾಸುರನನ್ನು ದುರ್ಗಾದೇವಿ ಚಾಮುಂಡೇಶ್ವರಿ ಸಂಹರಿಸಿದ ವಿಜಯದ ಸಂಕೇತವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ವಿಜಯವು ಅಧರ್ಮದ ಮೇಲೆ ಧರ್ಮದ ಗೆಲುವನ್ನು ಮತ್ತು ಕೆಟ್ಟದರ ಮೇಲೆ ಒಳ್ಳೆಯದರ ಜಯವನ್ನು ಸೂಚಿಸುತ್ತದೆ. ಆದ್ದರಿಂದಲೇ ಇದನ್ನು ವಿಜಯ ದಶಮಿ ಎಂದೂ ಕರೆಯಲಾಗುತ್ತದೆ.

ದಸರಾ ಹಬ್ಬವು ಒಂಬತ್ತು ದಿನಗಳ ನವರಾತ್ರಿ ಆಚರಣೆಯೊಂದಿಗೆ ಪ್ರಾರಂಭವಾಗುತ್ತದೆ. ಈ ಒಂಬತ್ತು ದಿನಗಳಲ್ಲಿ ದುರ್ಗಾದೇವಿಯ ಒಂಬತ್ತು ಅವತಾರಗಳನ್ನು ಪೂಜಿಸಲಾಗುತ್ತದೆ.

ಪ್ರತಿಯೊಂದು ದಿನವೂ ದೇವಿಯ ಒಂದೊಂದು ರೂಪವನ್ನು ವಿಶೇಷ ಪೂಜೆ, ಅಲಂಕಾರ ಮತ್ತು ಪ್ರಸಾದದೊಂದಿಗೆ ಆರಾಧಿಸಲಾಗುತ್ತದೆ. ಈ ಆಚರಣೆಗಳು ದೇವಿಯ ವಿವಿಧ ಗುಣಗಳನ್ನು ಮತ್ತು ಮಹಿಮೆಯನ್ನು ಸ್ಮರಿಸುತ್ತವೆ.

**ಜಂಬೂ ಸವಾರಿಯ ವೈಭವ**



• ಉದಯವಾಹಿನಿ, ವಿಶೇಷ

ದಸರಾ ಹಬ್ಬದ ಪ್ರಮುಖ ಆಕರ್ಷಣೆ ಮೈಸೂರಿನ ಜಂಬೂ ಸವಾರಿ. ಈ ಸಂಪ್ರದಾಯವು ಬಹಳ ಪುರಾತನವಾದುದು ಮತ್ತು ಇದರ ಬೇರುಗಳು ವಿಜಯನಗರ ಸಾಮ್ರಾಜ್ಯದ ಮಹಾನವಮಿ ಆಚರಣೆಯಲ್ಲಿವೆ. ವಿಜಯನಗರದ ಅರಸರು ಈ ಹಬ್ಬವನ್ನು ಅತ್ಯಂತ ವೈಭವದಿಂದ ಆಚರಿಸುತ್ತಿದ್ದರು. ಯುದ್ಧದಲ್ಲಿ ಶೌರ್ಯ ತೋರಿದವರಿಗೆ ಸನ್ಮಾನ, ಕಲಾ ಪ್ರದರ್ಶನಗಳು ಮತ್ತು ಆನೆಗಳ ಮೇಲೆ ರಾಜನ ಮೆರವಣಿಗೆಯನ್ನು ಆಯೋಜಿಸಲಾಗುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಪತನದ ನಂತರ, ಅದರ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಮೈಸೂರಿನ ಒಡೆಯರ್ ರಾಜಮನೆತನದವರು ಮುಂದುವರಿಸಿದರು. ಅಂದಿನಿಂದ, ದಸರಾ ಮಹೋತ್ಸವವು ಮೈಸೂರು ಸಂಸ್ಥಾನದ ನಾಡಹಬ್ಬವಾಗಿ ಅಂಬಾರಿಯ ಮೆರವಣಿಗೆಯೂ ಮೈಸೂರು ರಾಜವಂಶದ ಹೆಗ್ಗುರುತಾಯಿತು. (ಚಿನ್ನದ ಅಂಬಾರಿಯೂ ವಿಜಯನಗರ ಸಾಮ್ರಾಜ್ಯದಿಂದ ಬಂದಿದೆ ಎಂದು ಇತಿಹಾಸ ತಿಳಿಸುತ್ತದೆ)

ಈ ಅದ್ಭುತ ಮೆರವಣಿಗೆಯು ಮೈಸೂರು ಅರಮನೆಯಿಂದ ಆರಂಭಗೊಂಡು ಬನ್ನಿಮಂಟಪದಲ್ಲಿ ಕೊನೆಗೊಳ್ಳುತ್ತದೆ. ಇದರಲ್ಲಿ ಚಿನ್ನದ ಅಂಬಾರಿಯಲ್ಲಿ ಇರಿಸಲಾದ ಚಾಮುಂಡೇಶ್ವರಿ ದೇವಿಯ ಮೂರ್ತಿಯನ್ನು ಅಲಂಕೃತ ಆನೆಯ ಮೇಲೆ ಮೆರವಣಿಗೆ ಮಾಡಲಾಗುತ್ತದೆ. ವಿವಿಧ ಸಾಂಸ್ಕೃತಿಕ ಮತ್ತು ಜಾನಪದ ಕಲಾತಂಡಗಳು ಈ ಮೆರವಣಿಗೆಯಲ್ಲಿ ಭಾಗವಹಿಸಿ, ಅದಕ್ಕೆ ಮತ್ತಷ್ಟು ಮೆರಗು ತರುತ್ತವೆ. ಈ ವೈಭವವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಾರೆ.

| ನವರಾತ್ರಿಯ ಒಂಬತ್ತು ದಿನಗಳಲ್ಲಿ ಆರಾಧಿಸಲಾಗುವ ದೇವಿಯ ಅವತಾರಗಳು |
|---|
| **ಶೈಲಪುತ್ರಿ:** ಮೊದಲ ದಿನ ಪೂಜಿಸುವ ಈಕೆಯು ಪರ್ವತ ರಾಜ ಹಿಮಾಲಯನ ಮಗಳು. |
| **ಬ್ರಹ್ಮಚಾರಿಣಿ:** ಎರಡನೇ ದಿನ ಪೂಜಿಸುವ ಈಕೆ ಧ್ಯಾನ ಮತ್ತು ತಪಸ್ಸಿನ ದೇವತೆ. |
| **ಚಂದ್ರಘಂಟಾ:** ಮೂರನೇ ದಿನದ ಈಕೆಯು ಧೈರ್ಯ ಮತ್ತು ಶಕ್ತಿಯ ಸಂಕೇತ. |
| **ಕೂಷ್ಮಾಂಡ:** ನಾಲ್ಕನೇ ದಿನದ ಈಕೆಯು ತನ್ನ ಮಂದಹಾಸದಿಂದ ಬ್ರಹ್ಮಾಂಡವನ್ನು ಸೃಷ್ಟಿಸಿದವಳು ಎಂದು ನಂಬಲಾಗಿದೆ. |
| **ಸ್ಕಂದಮಾತಾ:** ಐದನೇ ದಿನದ ಈಕೆಯು ಕಾರ್ತಿಕೇಯನ ತಾಯಿ ಮತ್ತು ವಾತ್ಸಲ್ಯದ ಪ್ರತೀಕ. |
| **ಕಾತ್ಯಾಯಿನಿ:** ಆರನೇ ದಿನ ಪೂಜಿಸುವ ಈಕೆ ರೋಷದ ರೂಪದಲ್ಲಿ ದುಷ್ಟರನ್ನು ಸಂಹರಿಸುತ್ತಾಳೆ. |
| **ಕಾಲರಾತ್ರಿ:** ಏಳನೇ ದಿನದ ಈಕೆ ಕತ್ತಲೆಯನ್ನು ನಾಶ ಮಾಡಿ, ದುಷ್ಟ ಶಕ್ತಿಗಳನ್ನು ದೂರ ಮಾಡುತ್ತಾಳೆ. |
| **ಮಹಾಗೌರಿ:** ಎಂಟನೇ ದಿನದ ಈಕೆ ಶಾಂತಿ ಮತ್ತು ಜ್ಞಾನದ ಪ್ರತೀಕ. |
| **ಸಿದ್ಧಿದಾತ್ರಿ:** ನವರಾತ್ರಿಯ ಕೊನೆಯ ದಿನದ ಈಕೆಯು ಸಕಲ ಸಿದ್ಧಿಗಳನ್ನು ಕರುಣಿಸುವ ದೇವತೆ. |
| ಈ ಒಂಬತ್ತು ದಿನಗಳಲ್ಲಿ ಮನೆಗಳಲ್ಲಿ ನಂದಾದೀಪವನ್ನು ಹಚ್ಚಿಟ್ಟು, ವಿಶೇಷವಾಗಿ ಗೊಂಬೆಗಳ ಪ್ರದರ್ಶನವನ್ನು ಏರ್ಪಡಿಸಿ ಸಂಭ್ರಮಿಸಲಾಗುತ್ತದೆ. ಈ ಆಚರಣೆಗಳು ಮನೆಗಳಲ್ಲಿ ಧನಾತ್ಮಕ ಶಕ್ತಿಯನ್ನು ಹೆಚ್ಚಿಸುತ್ತವೆ ಎಂದು ನಂಬಲಾಗಿದೆ. |



**ವಿಜಯದ ಸಂಕೇತ: ಬನ್ನಿ ಹಬ್ಬ:** ನವರಾತ್ರಿಯ ಹತ್ತನೇ ದಿನವಾದ ವಿಜಯ ದಶಮಿಯು ದಸರಾ ಹಬ್ಬದ ಅತ್ಯಂತ ಮಹತ್ವದ ದಿನ.

ಈ ದಿನದಂದು ದುರ್ಗಾದೇವಿಯು ಮಹಿಷಾಸುರನನ್ನು ಸಂಹರಿಸಿದ ದಿನವೆಂದು ಪರಿಗಣಿಸಲಾಗುತ್ತದೆ. ಈ ವಿಜಯವನ್ನು ಗೌರವಿಸಲು, ಈ ದಿನ ಸಕಲ ಶಸ್ತ್ರಾಸ್ತ್ರಗಳು ಮತ್ತು ವಾಹನಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಇದು ನಾವು ನಮ್ಮ ಕೆಲಸಗಳಲ್ಲಿ ಬಳಸುವ ಪರಿಕರಗಳಿಗೆ ಗೌರವ ಸೂಚಿಸುವುದಲ್ಲದೆ, ನಮ್ಮ ಜೀವನದಲ್ಲಿ ಯಶಸ್ಸನ್ನು ತರುವ ಶಕ್ತಿಯನ್ನು ನೆನಪಿಸುವ ಸಂಕೇತವೂ ಆಗಿದೆ. ವಿಜಯ ದಶಮಿಯಂದು ಆಚರಿಸಲಾಗುವ ಇನ್ನೊಂದು ಪ್ರಮುಖ ಸಂಪ್ರದಾಯವೆಂದರೆ ಬನ್ನಿ ಹಬ್ಬ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ತಮ್ಮ ಶಸ್ತ್ರಾಸ್ತ್ರಗಳನ್ನು ಬನ್ನಿ ಮರದಲ್ಲಿ ಬಚ್ಚಿಟ್ಟಿದ್ದರು ಮತ್ತು ನಂತರ ಅವುಗಳನ್ನು ಮರಳಿ ಪಡೆದು ಯುದ್ಧದಲ್ಲಿ ಜಯಗಳಿಸಿದರು ಎಂಬ ನಂಬಿಕೆ ಇದರ ಹಿಂದಿದೆ. ಆದ್ದರಿಂದ ವಿಜಯ ದಶಮಿಯಂದು ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ, ಬನ್ನಿ ಕಸಿ ವಿನಿಮಯ ಮಾಡಿಕೊಳ್ಳುವುದು ವಿಜಯ ಮತ್ತು ಯಶಸ್ಸಿನ ಸಂಕೇತವೆಂದು ಪರಿಗಣಿಸಲಾಗಿದೆ.

2025ರ ದಸರಾವು ಮತ್ತೆ ಕರ್ನಾಟಕದ ಶ್ರೀಮಂತ ಸಂಸ್ಕೃತಿ, ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ಹಬ್ಬವಾಗಿ ಮೂಡಿಬರಲಿ. ಈ ಹಬ್ಬವು ಎಲ್ಲಾರ ಜೀವನದಲ್ಲಿ ಹೊಸ ಚೈತನ್ಯ, ಸಂತೋಷ ಮತ್ತು ಯಶಸ್ಸನ್ನು ತರಲಿ ಎಂದು ಹಾರೈಸೋಣ



ಉದಯವಾಹಿನಿ ಚಿತ್ರ

# ಪಿತೃಋಣ ತೀರಿಸುವ ಪುಣ್ಯಕಾಲ

## ಮಹಾಲಯ ಪಕ್ಷದ ಕರ್ಮಗಳು ಯಶಸ್ವಿ

• ಉದಯವಾಹಿನಿ, ವಿಶೇಷ

• ವಿನುತ ಎಸ್ ಜೋಶಿ

ಪಿತೃಗಳ ತ್ಯಾಗವನ್ನು ಸ್ಮರಿಸುವ ಈ ಕರ್ಮವು ಅತ್ಯಂತ ಮಹತ್ವದ್ದು. ಹಿರಿಯರ ಆಶೀರ್ವಾದ ನಮ್ಮ ವಂಶದ ಉಜ್ವಲ ಭವಿಷ್ಯಕ್ಕೆ ದಾರಿಯಾಗುತ್ತದೆ. ತಂದೆಗಾಗಿ ಸಲ್ಲಿಸುವ ಪಿಂಡಪ್ರದಾನವು ವಂಶಾಭಿವೃದ್ಧಿಗೆ, ತಾಯಿಗಾಗಿ ಸಲ್ಲಿಸುವುದರಿಂದ ಸಂಪತ್ತು ಮತ್ತು ಐಶ್ವರ್ಯ ವೃದ್ಧಿಗೆ ಕಾರಣವಾಗುತ್ತದೆ ಎಂದು ವಿದ್ವಾಂಸರಾದ ಪಂಡಿತ್ ಶ್ರೀ ಗೋಪಾಲಾಚಾರ್ಯ ಅಕಮಂಚಿ ಹೇಳಿದರು.

ಕರುಣೇಶ್ವರ ನಗರದಲ್ಲಿರುವ ಶ್ರೀಜೈವೀರ್ ಹನುಮಾನ್ ಮಂದಿರದಲ್ಲಿ, ಈ ವರ್ಷದಿಂದ ಪಿತೃಪಕ್ಷ (ಮಹಾಲಯ ಪಕ್ಷ) ಭಾದ್ರಪದ ಕೃಷ್ಣ ಪ್ರತಿಪದ (ಸೆಪ್ಟೆಂಬರ್ 8) ದಿಂದ (ಸೆಪ್ಟೆಂಬರ್21) ನಡೆದ ಪಿತೃಪಕ್ಷದ ಮಹಾಲಯ ಪಕ್ಷದ ಅಂಗವಾಗಿ ಶ್ರಾದ್ಧ, ಪಿಂಡಪ್ರದಾನಾದಿ ಕರ್ಮಗಳನ್ನು ಮಾಡಿದ ಕರ್ತೃಗಳನ್ನು ಉದ್ದೇಶಿಸಿ ಪಿತೃ ಪಕ್ಷ ಎಲ್ಲಾ ಹಿರಿಯರ ಸಮಸ್ತ ಪಿತೃಗಳ ಉಪಕಾರ ಸ್ಮರಣೆ ಮಾಡುವ ಕಾರ್ಯ, ಮುಂದೆ ಎಲ್ಲಾ ಹಿರಿಯರ ನಮ್ಮನ್ನು ಆಶೀರ್ವದಿಸುತ್ತಾರೆ ಎಂದು ಮಾರ್ಗದರ್ಶನ ನೀಡಿದರು.


ಮಹಾಲಯ ಪಕ್ಷದ ಅಂಗವಾಗಿ ಶ್ರಾದ್ಧ, ಪಿಂಡಪ್ರದಾನಾದಿ ಕರ್ಮಗಳನ್ನು ಅತ್ಯಂತ ಶ್ರದ್ಧಾ-ಭಕ್ತಿಯಿಂದ ನೆರವೇರಿಸಲಾಯಿತು.

ಪಿತೃಪಕ್ಷವು ಪೂರ್ವಜರ ಆತ್ಮಗಳಿಗೆ ಶ್ರದ್ಧೆಯಿಂದ ತರ್ಪಣ, ಶ್ರಾದ್ಧ, ಪಿಂಡಪ್ರದಾನ ಮಾಡುವ ಪುಣ್ಯಕಾಲ ಎಂಬುದನ್ನು ಸ್ಮರಿಸಿ, ಈ ಮಹತ್ವದ ದಿನದಂದು ನಮ್ಮ ಪೂರ್ವಜರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಉದಯವಾಹಿನಿ ಚಿತ್ರ

ಶ್ರೀಜೈವೀರ್ ಹನುಮಾನ್ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಶ್ರೀ ಕಿಶನರಾವ್ ಮಟಮಾರಿ.ಗೌರವಾಧ್ಯಕ್ಷ ಅವಿನಾಶ್ ಕುಲಕರ್ಣಿ ಹಾಗೂ ಪ್ರಮುಖರಾದ ವಿಠ್ಠಲ್ ಜಾಲಿಹಾಳ, ವಿಶ್ವಾಸ್ ಮೊಘೇಕರ್, ವಿನುತ ಜೋಶಿ, ಡಾ. ಸುಧೀರ್ ಕುಳಗೇರಿ, ನಿತೀಶ್ ಜೋಶಿ, ವಿನೋದ ಸತಖೇಡ್, ಆರ್ ಕೆ ಕುಲಕರ್ಣಿ, ಜಯತೀರ್ಥ ಜೋಶಿ, ಸಮೀರ್ ಕುಲಕರ್ಣಿ, ಲಕ್ಷ್ಮಿಕಾಂತರಾವ್ ಕುಲಕರ್ಣಿ, ಶಂಕರರಾವ್ ಸಿಂದಗಿಕರ್, ವಿಜಯ ಕುಲಕರ್ಣಿ, ಕಿಸಾನರಾವ್ ಕುಲಕರ್ಣಿ, ಭಾರತೀಶ ಬೆಳಗುಂಪಿ, ಶ್ರೀನಿವಾಸ ಕುಲಕರ್ಣಿ,ಕೃಷ್ಣ ಮಳಖೇಡಕರ್, ಶಾಮರಾವ್ ಕುಲಕರ್ಣಿ ಚಂದ್ರಕಾಂತ್ ಕಡಗಂಚಿ, ಶಾಮರಾವ್ ಕುಲಕರ್ಣಿ, ವೆಂಕಟೇಶಾಚಾರ್ಯ ನೆಲೋಗಿ, ಕಿಶನರಾವ್ ಕುಲಕರ್ಣಿ, ಚಿದಂಬರ ದೇಶಪಾಂಡೆ, ಅಮಿತ್ ಪುರಾಣಿಕ್, ಅರ್ಚಕರಾದ ಪ್ರದ್ಯುಮ್ನಾಚಾರ್ಯ ಜೋಶಿ, ವೆಂಕಟೇಶಾಚಾರ್ಯ ನೆಲೋಗಿ, ವ್ಯವಸ್ಥಾಪಕರಾದ ಚಂದ್ರಕಾಂತ್ ಕಡಗಂಚಿ ಸೇರಿದಂತೆ,ದೇವಸ್ಥಾನ ಸಮಿತಿಯ ಪದಾಧಿಕಾರಿಗಳು, ಭಜನಾ ಮಂಡಳಿ,ಪಾರಾಯಣ ಸಂಘದ ಸದಸ್ಯರು, ಮಹಿಳಾ ಪ್ರತಿನಿಧಿಗಳು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.



# ನವರಾತ್ರಿ

ಮೈಸೂರ ದಸರಾ
ಎಷ್ಟೊಂದು ಸುಂದರ
ನವರಾತ್ರಿ ಉತ್ಸವ
ಹಬ್ಬದ ಸಡಗರ
ಎಲ್ಲೆಲೂ ಸಂಭ್ರಮ
ನವ ಅವಾತರಗಳು
ಶೈಲಪುತ್ರಿ ದುರ್ಗೆ
ಬ್ರಹ್ಮಚಾರಿಣಿ ದುರ್ಗೆ
ಚಂದ್ರಘಂಟಾ ದುರ್ಗೆ
ಕೂಷ್ಮಾಂಡದೇವಿ ದುರ್ಗೆ
ಸ್ಕಂದಾ ಮಾತಾ ದುರ್ಗೆ
ಕಾತ್ಯಾಯಿನಿ ದುರ್ಗೆ
ಕಾಳರಾತ್ರಿ ಮಹಾಮಾಯೇ
ಮಹಾ ಗೌರಿ ತಾಯಿ
ಸಿದ್ಧಿಧಾತ್ರಿ ತಾಯಿ
ದೇವಿಯ ಅವತಾರಗಳು
ನವರಾತ್ರಿಯ ದಿನಗಳು
ಆಯುಧ ಪೂಜೆಗಳು
ವಿಜಯದಶಮಿ ಹಬ್ಬದ ಶುಭಾಶಯಗಳು.





▶ ವಿ.ಎಂ.ಎಸ್.ಗೋಪಿ, ಲೇಖಕರು

# ಶ್ರೀ ದುರ್ಗಾದೇವಿಯ ನಾಮಜಪ, ಪ್ರಾರ್ಥನೆ

• ಉದಯವಾಹಿನಿ, ವಿಶೇಷ

'॥ ಶ್ರೀ ದುರ್ಗಾದೇವ್ಯೈ ನಮಃ ॥'

ಈ ನಾಮಜಪದಲ್ಲಿ 'ದುರ್ಗಾ' ಶಬ್ದದ 'ದ'ಕಾರವು 'ದೈತ್ಯನಾಶ'ದ ಪ್ರತೀಕವಾಗಿದೆ. 'ದುರ್ಗಾ'ದಲ್ಲಿನ 'ದುರ್' ಎಂದರೆ 'ಕೆಟ್ಟದ್ದು', 'ಗ' ಎಂದರೆ ಹೋಗಲಾಡಿಸುವ. ಕೆಟ್ಟದ್ದನ್ನು ನಾಶ ಮಾಡುವವಳು ಎಂದರೆ 'ದುರ್ಗಾ'.

ಕಲಿಯುಗದಲ್ಲಿ 'ನಾಮಸಾಧನೆ' ಅಂದರೆ ದೇವರ ನಾಮವನ್ನು ಜಪಿಸುವುದೇ ಉತ್ತಮ ರೀತಿಯ ಸಾಧನೆಯಾಗಿದೆ ಎಂದು ಅನೇಕ ಸಂತಶ್ರೇಷ್ಠರು ಹೇಳಿದ್ದಾರೆ. ಭಗವಂತನ ನಾಮದೊಂದಿಗೆ ಅವನ ರೂಪ, ರಸ, ಗಂಧ ಮತ್ತು ಅವನ ಶಕ್ತಿಯೂ ಇರುತ್ತದೆ. ಭಗವಂತನ ನಾಮವನ್ನು ಜಪಿಸುವಾಗ ಅಥವಾ ಕೇಳುವಾಗ ಈ ತತ್ತ್ವವನ್ನು ಗಮನದಲ್ಲಿ ಇಟ್ಟುಕೊಂಡರೆ ನಾಮಜಪದಿಂದ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬಹುದು. 'ಶ್ರೀ ದುರ್ಗಾದೇವ್ಯೈ ನಮಃ' ಈ ನಾಮಜಪವನ್ನು ತಾರಕ ಭಾವದಿಂದ ಮಾಡಲು ಪ್ರತಿಯೊಂದು ಶಬ್ದದ ಉಚ್ಚಾರವನ್ನು ದೀರ್ಘವಾಗಿ ಮಾಡಬೇಕು. ಯಾವುದೇ ಶಬ್ದದ ಮೇಲೆ ಒತ್ತನ್ನು ನೀಡದೆ, ಮೃದುವಾಗಿ ಉಚ್ಚರಿಸಬೇಕು. ಇದರಿಂದ ದೇವಿಯ ತಾರಕ ತತ್ತ್ವದ ಹೆಚ್ಚಿನ ಲಾಭವಾಗುತ್ತದೆ. ಇಲ್ಲಿ ನೀಡಿರುವಂತೆ ನೀವು ಕೂಡ ಶಾಸ್ತ್ರಬದ್ಧವಾಗಿ ಶ್ರೀ ದುರ್ಗಾದೇವಿಯ ನಾಮಜಪವನ್ನು ಮಾಡಿ, ಅದರಿಂದ ನಿಮಗೂ ದೇವಿಯ ಅನುಭೂತಿ ಸಿಗುವಂತಾಗಲಿ ಎಂದು ಶ್ರೀ ದೇವಿಯ ಚರಣಗಳಲ್ಲಿ ಪ್ರಾರ್ಥನೆ. ನವರಾತ್ರಿಯಲ್ಲಿ ದೇವಿತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ದೇವಿತತ್ತ್ವದ ಲಾಭವನ್ನು ಆದಷ್ಟು ಹೆಚ್ಚು ಪಡೆದುಕೊಳ್ಳಲು ನವರಾತ್ರಿಯ ಕಾಲದಲ್ಲಿ ॥ ಶ್ರೀ ದುರ್ಗಾದೇವ್ಯೈ ನಮಃ ॥ ಎಂಬ ನಾಮಜಪವನ್ನು ಆದಷ್ಟು ಹೆಚ್ಚು ಮಾಡಬೇಕು.

**ದೇವಿಗೆ ಮಾಡಬೇಕಾದ ಕೆಲವು ಪ್ರಾರ್ಥನೆಗಳು :** ಹೇ ಶ್ರೀ ದುರ್ಗಾದೇವಿ, ನನಗೆ ಸದ್ಬುದ್ಧಿ ಕೊಡು. ನನ್ನ ಜೀವನದಲ್ಲಿ ಬರುವ ಸಂಕಟಗಳನ್ನು ನಿವಾರಿಸು. ಹೇ ದುರ್ಗಾಮಾತೆ, ರಾಷ್ಟ್ರರಕ್ಷಣೆ ಮತ್ತು ಧರ್ಮರಕ್ಷಣೆಯ ಸೇವೆಯನ್ನು ನಾನು 'ಸಾಧನೆಯೆಂದು ಮಾಡುವಂತಾಗಲಿ !

**ಶ್ರೀ ದುರ್ಗಾಪೂಜೆ ಆರಂಭಿಸುವಾಗ ಮಾಡಬೇಕಾದ ಪ್ರಾರ್ಥನೆ :** ಹೇ ಶ್ರೀ ದುರ್ಗಾದೇವಿ, ಈ ಪೂಜಾವಿಧಿಯ ಮೂಲಕ ನನ್ನ ಅಂತಃಕರಣದಲ್ಲಿ ನಿನ್ನ ಬಗ್ಗೆ ಭಕ್ತಿಭಾವ ನಿರ್ಮಾಣವಾಗಲಿ. ಈ ಪೂಜಾವಿಧಿಯಿಂದ ಪ್ರಕ್ಷೇಪಿಸುವ ಚೈತನ್ಯವನ್ನು ನಾನು ಹೆಚ್ಚೆಚ್ಚು ಗ್ರಹಿಸುವಂತೆ ಕೃಪೆ ಮಾಡು.

**ನವರಾತ್ರ್ಯುತ್ಸವದ ಕಾಲದಲ್ಲಿ ಮಾಡಬೇಕಾದ ಪ್ರಾರ್ಥನೆ :** ಹೇ ಶ್ರೀ ದುರ್ಗಾದೇವಿ, ನವರಾತ್ರ್ಯುತ್ಸವದ ಕಾಲದಲ್ಲಿ ಎಂದಿಗಿಂತ ಸಾವಿರಪಟ್ಟು ಹೆಚ್ಚು ಕಾರ್ಯನಿರತವಾಗಿರುವ ನಿನ್ನ ತತ್ತ್ವದಿಂದ ನನಗೆ ಹೆಚ್ಚೆಚ್ಚು ಲಾಭವಾಗಲಿ.



**ಕವಚಪಠಣ :** ಕವಚವು ಮಂತ್ರವಿದ್ಯೆಯಲ್ಲಿನ ಒಂದು ವಿಧವಾಗಿದೆ. ಇದರಲ್ಲಿ ದೇವತೆಯು ನಮ್ಮ ದೇಹದ ರಕ್ಷಣೆಯನ್ನು ಮಾಡಬೇಕೆಂಬ ಪ್ರಾರ್ಥನೆಯಿರುತ್ತದೆ. ಅನೇಕ ವಿಧದ ಮಂತ್ರಗಳ ಸಹಾಯದಿಂದ ಮನುಷ್ಯನ ದೇಹದ ಮೇಲೆ ಮಂತ್ರಕವಚಗಳನ್ನು ನಿರ್ಮಿಸಬಹುದು. ಈ ಕವಚಗಳು ಸ್ಥೂಲ ಕವಚಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತವೆ. ಸ್ಥೂಲ ಕವಚಗಳು ತುಪಾಕಿಯ ಗುಂಡುಗಳಂತಹ ಸ್ಥೂಲ ಆಯುಧಗಳಿಂದ ರಕ್ಷಿಸುತ್ತವೆ, ಆದರೆ ಸೂಕ್ಷ್ಮ ಕವಚಗಳು ಸ್ಥೂಲ ಹಾಗೂ ಭೂತ, ಮಾಟದಂತಹ ಸೂಕ್ಷ್ಮ ಕೆಟ್ಟ ಶಕ್ತಿಗಳಿಂದ ರಕ್ಷಿಸುತ್ತವೆ. ದುರ್ಗಾಕವಚ, ಲಕ್ಷ್ಮೀಕವಚ, ಮಹಾಕಾಲಿಕವಚ ಮುಂತಾದವುಗಳ ಪಠಣದಿಂದ ಶತ್ರು ಹಾಗೂ ಭೂತಬಾಧೆ, ಮಾಟದಂತಹ ಕೆಟ್ಟ ಶಕ್ತಿಗಳಿಂದ ರಕ್ಷಣೆ ಪಡೆಯಲು ಸಹಾಯವಾಗುತ್ತದೆ.

**ಆಧಾರ : ಸನಾತನ ಸಂಸ್ಥೆಯ ಕಿರುಗ್ರಂಥ 'ಪ್ರಾರ್ಥನೆ (ಮಹತ್ವ ಮತ್ತು ಉದಾಹರಣೆಗಳು)'**



▶ ವಿನೋದ ಕಾಮತ್
ರಾಜ್ಯ ವಕ್ತಾರರು, ಸನಾತನ ಸಂಸ್ಥೆ, (ಸಂಪರ್ಕ : 9342599299)

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 7.30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಆರೋಗ್ಯದ ಆರೈಕೆ ಮಾಡಿಕೊಳ್ಳಿ ಮತ್ತು ಎಲ್ಲವನ್ನೂ ಹೊಂದಿಸಿ. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು ಮತ್ತು ಆದ್ದರಿಂದ ನೀವು ಅವರ ಕೋಪದ ಬೇಟೆಯಾಗಬಹದು.

**ವೃಷಭ** ನಿಮ್ಮ ಸಂಗಾತಿ ನಿಮ್ಮ ಬಹುನಿರೀಕ್ಷಿತ ಕಲ್ಪನೆಗಳನ್ನು ಸಾಕ್ಷಾತ್ಕಾರ ಮಾಡುವ ಮೂಲಕ ನಿಮ್ಮನ್ನು ಅಚ್ಚರಿಗೊಳಿಸುತ್ತಾರೆ. ಉಚಿತ ಸಮಯವನ್ನು ಸರಿಯಾಗಿ ಬಳಸಬೇಕು.

**ಮಿಥುನ** ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ.

**ಕರ್ಕಾಟಕ** ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು. ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ.

**ಸಿಂಹ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಇಂದಿನ ವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು ಮತ್ತು ಹಣವನ್ನು ಉಳಿಸಬೇಕು.

**ಕನ್ಯಾ** ಈ ರಾಶಿಚಕ್ರದ ಜನರು ಇಂದು ಉಚಿತ ಸಮಯದಲ್ಲಿ ಸೃಜನಾ ತ್ಮಕ ಕೆಲಸಗಳನ್ನು ಮಾಡಲು ಯೋಜಿಸುತ್ತಾರೆ ಆದರೆ ಅವರ ಈ ಯೋಜನೆಯನ್ನು ಪೂರೈಸಲು ಸಾಧ್ಯವಾಗುವುದಿಲ್ಲ.

**ತುಲಾ** ಇಂದು ನಿಮ್ಮ ವೈವಾಹಿಕ ಜೀವನದ ಅತ್ಯುತ್ತಮ ನೆನಪುಗಳನ್ನು ರಚಿಸುತ್ತೀರಿ. ಸಾರಾಯಿ ಅಥವಾ ಸಿಗರೇಟ್ ಹೆಚ್ಚು ಕುಡಿಯುವುದು, ಇಂದು ನಿಮ್ಮ ಆರೋಗ್ಯವನ್ನು ಇನ್ನಷ್ಟು ಹದಗೆಡಿಸಬಹುದು.

**ವೃಶ್ಚಿಕ** ಆರೋಗ್ಯ ಚೆನ್ನಾಗಿರುತ್ತದೆ. ಕಳೆದ ದಿನಗಳನ್ನು ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ, ನೀವು ಹೆಚ್ಚಿನ ಹಣವನ್ನು ಪಡೆಯು ತ್ತೀರಿ ನಿಮ್ಮ ಹೆಂಡತಿಯ ಜೊತೆ ಪ್ರವಾಸಕ್ಕೆ ಹೋಗಲು ಒಳ್ಳೆಯ ದಿನ.

**ಧನಸ್ಸು** ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ. ನಿಮ್ಮನ್ನು ತನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುವ ವ್ಯಕ್ತಿಯನ್ನು ಸಂಧಿಸುತ್ತೀರಿ.

**ಮಕರ** ವಿಶ್ರಾಂತಿಯ ಸಲುವಾಗಿ ನಿಕಟ ಸ್ನೇಹಿತರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು.

**ಕುಂಭ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಮೀನ** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ನಿಷ್ಕರುಣೆಯ ಬಲಿಯಾಗುತ್ತೀರಿ.

## ದಿನವಿಡೀ ಸಂಚಾರ ಸ್ಥಗಿತ: ಕಮಲಾನಗರ-ಬೋಧನ ಮಧ್ಯದ ಸೇತುವೆ ಜಲಾವೃತ

• ಉದಯವಾಹಿನಿ, ಆಳಂದ

ತಾಲ್ಲೂಕಿನ ಬೋಧನ -ಕಮಲಾನಗರ ಗ್ರಾಮದ ಮಧ್ಯದ ಸೇತುವೆ ಮೇಲಿಂದ ನೀರು ತುಂಬಿ ಹರಿಯುತ್ತಿರುವ ಪ್ರಮಾಣ ಹೆಚ್ಚಿದ್ದು, ಮುಖ್ಯ ರಸ್ತೆ ಸಂಚಾರವು ದಿನವಿಡೀ ಸ್ಥಗಿತಗೊಂಡಿದೆ.ಕಲಬುರಗಿ , ಬಸವ ಕಲ್ಯಾಣ, ನರೋಣಾ, ವಿಕೆ ಸಲಗರ, ಚಿಂಚನಸೂರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿನ ವಿವಿಧ ಗ್ರಾಮಗಳಲ್ಲಿನ ಜನರು ಪರದಾಡಿದರು. ನೆರೆಯ ಮಹಾರಾಷ್ಟ್ರದ ಬೆಣ್ಣೆತೋರಾ ನದಿಯ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಿಂದ ಕಳೆದ ನಾಲ್ಕು ದಿನಗಳಿಂದ ಹಳ್ಳಗಳು ಭರ್ತಿಯಾಗಿ ತುಂಬಿ ಹರಿಯುತ್ತಿವೆ. ಕಮಲಾನಗರ -ಬೋಧನ ಗ್ರಾಮದ ದೇವಸ್ಥಾನದಲ್ಲಿ ಪ್ರಯಾಣಿಕರು ನೀರಿನ ಪ್ರವಾಹ ಕಡಿಮೆಯಾದರೆ ತಮ್ಮ ಮನೆಗಳಿಗೆ ತೆರಳಲು ಕಾದುಕುಳಿತ್ತಿದ್ದಾರೆ. ಸುತ್ತಲಿನ ರೈತರ ಹೊಲ ಗದ್ದೆಗಳಲ್ಲಿನ ಕಬ್ಬು, ಬಾಳೆ, ತೊಗರಿ, ಸೋಯಾಬಿನ್ ಬೆಳೆಯೂ ಸಂಪೂರ್ಣ ಜಲಾವೃತವಾಗಿವೆ.

ಮಹಾಲಯ ಅಮಾವಾಸ್ಯೆ ನಿಮಿತ್ತ ತುಳಜಾಪುರ, ಹುಮನಾಬಾದ್, ಗುರಣಾಪುರ, ಬಸವಣ್ಣ ಸಂಗೋಳಗಿ ಗ್ರಾಮಗಳಿಗೆ ತೆರಳಿದ ಭಕ್ತರು ಸ್ವಗ್ರಾಮಕ್ಕೆ ತಲುಪಲು ಬೋಧನ ಗ್ರಾಮದ ದೇವಸ್ಥಾನದಲ್ಲಿ ಬೀಡು ಬಿಟ್ಟಿದ್ದಾರೆ.

## ಪೆಟ್ರೋಲ್ ಪಂಪ್ ಮಾಲೀಕನಿಗೆ ರೂ.2.09 ಕೋಟಿ ವಂಚನೆ

• ಉದಯವಾಹಿನಿ, ಕಲಬುರಗಿ

ನಗರದ ಶೇಖರೋಜಾದಲ್ಲಿರುವ ತುಳಜಾಭವಾನಿ ಪೆಟ್ರೋಲಿಯಂ ಪಂಪ್‌ನ ಮಾಲೀಕ ಕಿರಣ ಶ್ರೀಮಂತ ಇಲ್ಲಾಳ ಅವರಿಗೆ ರೂ.2.09 ಕೋಟಿ ವಂಚಿಸಿರುವ ಕುರಿತು ಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೆಟ್ರೋಲ್ ಪಂಪ್ ಮ್ಯಾನೇಜರ್ ನವೀನ ಮೋಹನರೆಡ್ಡಿ ಮತ್ತು ಅಕೌಂಟೆಂಟ್ ರಾಘವೇಂದ್ರ ಮೋಹನರೆಡ್ಡಿ ಸಹೋದರರು 2,09,86,572 ಸ್ವಂತಕ್ಕೆ ಬಳಸಿಕೊಂಡು, ನಂಬಿಕೆ ದ್ರೋಹ ಮಾಡಿದ್ದಾರೆ' ಎಂದು ಕಿರಣ ದೂರಿನಲ್ಲಿ ತಿಳಿಸಿದ್ದಾರೆ. 'ನನ್ನ ತಂದೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಮಂತ ಇಲ್ಲಾಳ ಅವರ ಮೇಲೆ 2022ರಲ್ಲಿ ಮಾರಣಾಂತಿಕ ಹಲ್ಲೆಯಾಗಿದ್ದರಿಂದ ಅವರಿಗೆ ಬೆಂಗಳೂರು ಮತ್ತು ಇತರೆಡೆ ಚಿಕಿತ್ಸೆ ಕೊಡಿಸಲು ನಿರತನಾಗಿದ್ದೆ. ಮ್ಯಾನೇಜರ್ ನವೀನ ಅವರಿಗೆ ಪೆಟ್ರೋಲ್ ಪಂಪ್‌ನ ಎಲ್ಲಾ ಹಣಕಾಸಿನ ವ್ಯವಹಾರ ನೋಡಿಕೊಳ್ಳುವಂತೆ ತಿಳಿಸಲಾಗಿತ್ತು. 2024ರಲ್ಲಿ ತಂದೆಯ ಆರೋಗ್ಯದಲ್ಲಿ ಸ್ವಲ್ಪ ಸುಧಾರಿಸಿದಾಗ ಪೆಟ್ರೋಲ್ ಪಂಪ್ ವ್ಯವಹಾರ ಪರಿಶೀಲಿಸಿದಾಗ ಇಂಧನ ಮಾರಾಟದ ಹಣ ಮತ್ತು ಪಂಪ್‌ನ ಬ್ಯಾಂಕ್ ಖಾತೆಗೆ ಜಮಾ ಮಾಡಿದ ಹಣದಲ್ಲಿ ವ್ಯತ್ಯಾಸ ಕಂಡುಬಂದಿದೆ. ಈ ಬಗ್ಗೆ ವಿಚಾರಿಸಿದಾಗ ಸ್ವಲ್ಪ ದಿನ ಬಿಟ್ಟು ಕೊಡುವುದಾಗಿ ಹೇಳಿದ್ದರಿಂದ ಕಾದು ನೋಡಲಾಗಿತ್ತು. ಇಬ್ಬರೂ ಈಗ ನಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ. ಕಾನೂನು ಕ್ರಮ ಜರುಗಿಸಿ' ಎಂದು ಕೋರಿದ್ದಾರೆ.

## ಪುರಸಭೆ ಗಣಪತಿ ವಿಗ್ರಹದ ಮೇಲೆ ಚಪ್ಪಲಿ ಹಾಕಿದವರ ವಿರುದ್ಧ ಪ್ರಕರಣ ದಾಖಲು

• ಉದಯವಾಹಿನಿ, ಚಿಕ್ಕಮಗಳೂರು

ಬೇಲೂರು ಪುರಸಭೆ ಗಣಪತಿ ವಿಗ್ರಹದ ಮೇಲೆ ಚಪ್ಪಲಿ ಹಾಕಿದವರ ವಿರುದ್ಧ ಪ್ರಕರಣ ದಾಖಲಿಸುವುದು ಮಾತ್ರವಲ್ಲ, ಅವರ ಮನೆಗೆ ಬುಲ್ಡೋಜರ್ ಹತ್ತಿಸಬೇಕು



ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಪ್ಪಿತಸ್ಥರ ರಕ್ಷಣೆಗೆ ಮುಂದಾದರೆ ಸಮಾಜವೇ ಬುಲ್ಡೋಜರ್ ತೆಗೆದುಕೊಂಡು ಅವರ ಮನೆ ಮುಂದೆ ಹೋಗಲಿದೆ' ಎಂದು ಎಚ್ಚರಿಸಿದರು.

## ಆರೋಪ ಪ್ರತ್ಯಾರೋಪಗಳಿಗೆ ತೆರೆ ಅರಸೀಕೆರೆ ಮಾಜಿ ನಗರಸಭಾಧ್ಯಕ್ಷರಾದ ಸಿ ಗಿರೀಶ್

• ಉದಯವಾಹಿನಿ ಅರಸೀಕೆರೆ

ಕಾಂಗ್ರೆಸ್ ಮುಖಂಡರಾದ ಕಾಟಿಕೆರೆ ಉಮೇಶ್ ರವರು ನಗರ ಸಭೆಯ ಕೆಲವು ಕಾಮಗಾರಿಗಳನ್ನು ನಾವೇ ನಿರ್ವಹಿಸಿದ್ದೇವೆಂದು ಇತ್ತೀಚಿಗೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದು ಇದು ಸತ್ಯವಾಗಿದ್ದರೆ

ಅರಸೀಕೆರೆ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿಯ ಸಾನಿಧ್ಯಕ್ಕೆ ಬಂದು ಪ್ರಮಾಣ ಮಾಡಲಿ ನಾವು ನಮ್ಮ ಸ್ನೇಹಿತರು ಸಹ ನಾಳೆ ಸೋಮವಾರವೇ ದೇವರ ಸಾನಿಧ್ಯದಲ್ಲಿ ನಾವು ಪ್ರಮಾಣ ಮಾಡುತ್ತೇವೆ, ನೀವು ಕಾಮಗಾರಿ ನಿರ್ವಹಿಸುತ್ತಿಲ್ಲ ಎಂದು ಇದಕ್ಕೆ ನೀವು ಸಿದ್ಧರಿದ್ದೀರಾ



ಉದಯವಾಹಿನಿ ಚಿತ್ರ

ಎಂದು ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷರಾದ ಸಿ ಗಿರೀಶ್ ಹೇಳಿದರು

ಈ ಹಿಂದೆ ನಾವು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿಯೂ ಸಹ ನೀವು ನಗರಸಭೆಯ ಕಾಮಗಾರಿಯನ್ನು ನಿರ್ವಹಿಸಿದ್ದೀರಾ ಆದರೆ ಈ ವಿಚಾರದಲ್ಲಿ ಮಾತ್ರ ನೀವು ಕಾಮಗಾರಿ ನಿರ್ವಹಿಸಿಲ್ಲ ಎಂದು ಸಿ ಗಿರೀಶ್ ಸವಾಲು ಹಾಕಿದರು ಕಳೆದ 15 ದಿನಗಳಿಂದ ಕೆಲವೊಂದು ವಿಚಾರದಲ್ಲಿ ಆರೋಪ ಪ್ರತ್ಯಾರೋಪಗಳಲ್ಲಿ ಸುದ್ದಿಯಾಗಿದ್ದು ಎಲ್ಲಾ ವಿಚಾರಗಳಿಗೆ ಇಂದು ಕೊನೆಯಾಗಿದೆ ನನ್ನ ಸ್ನೇಹಿತರು ಹಾಗು ಅರಸೀಕೆರೆ ನಗರಸಭೆಯ ಅಧ್ಯಕ್ಷರಾದ ಎಮ್ ಸಮೀವುಲ್ಲಾ ಕೆಲವೊಂದು ಹೇಳಿಕೆಗಳಲ್ಲಿ ನೋವಾಗಿದ್ದರೆ ಕ್ಷಮಾಪಣೆ ಕೋರಿದ್ದಾರೆ ಹಾಗಾಗಿ ಎಲ್ಲಾ ಗೊಂದಲಗಳಿಗೆ ಇಂದು ಕೊನೆಯಾಗಲಿದೆ ಎಂದರು. ನಗರಸಭೆ ಮಾಜಿ ಸದಸ್ಯ ಹರ್ಷವರ್ಧನ್ ರಾಜ್ ಮಾತನಾಡಿ ನಗರಸಭೆ ಅಧ್ಯಕ್ಷ ಸಿ ಗಿರೀಶ್ ರವರು ಒಂದು ಸಮುದಾಯದ ಸಮುದಾಯ ಭವನದ ಸಮಸ್ಯೆ ಬಗೆಹರಿಸಿ ತಮ್ಮ ಅಧ್ಯಕ್ಷ ಸ್ಥಾನವನ್ನೇ ಕಳೆದುಕೊಂಡರು ಎಂದರು ಆದರೆ ಇಂತಹ ವಿಚಾರದಲ್ಲಿ ಗಿರೀಶ್ ರವರ ಕಾರ್ಯವನ್ನು ನೆನೆಪಿಸಿಕೊಳ್ಳ ಬೇಕಾಗಿದೆ ಎಂದರು.

Nda ಪಕ್ಷದ ಮುಖಂಡ ರಮೇಶ ನಾಯ್ಡು ಮಾಜಿ ನಗರಸಭೆ ಸದಸ್ಯರಾದ ಹರ್ಷವರ್ಧನ್ ಜೆಡಿಎಸ್ ಮುಖಂಡರಾದ ಮಾರುತಿನಗರ ರಮೇಶ್. ಸವಿತಾ ಸಮಾಜದ ಅಧ್ಯಕ್ಷರಾದ ಕುಮಾರ್ ಮಾತನಾಡಿದರು. ಸುಮಿತ್. ಉಪಸ್ಥಿತರಿದ್ದರು

## ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ಚಿಂತನೆ: ಶರಣಪ್ರಕಾಶ್ ಪಾಟೀಲ್

### ಡಾಕ್ಟರ್‌ಪ್ರೆನಿಯರ್ ಶೃಂಗಸಭೆ 2025 ನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಉದ್ಘಾಟಿಸಿದರು

• ಉದಯವಾಹಿನಿ, ಶಿವಮೊಗ್ಗ

ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜಿನ ಜೊತೆಗೆ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಕೇಂದ್ರ, ಹೃದ್ರೋಗ ಆಸ್ಪತ್ರೆ ಮತ್ತು ಆಘಾತ ಆರೈಕೆ ಕೇಂದ್ರವನ್ನು ಸಹ ಸ್ಥಾಪಿಸಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಈ ಸರ್ಕಾರಿ ಆರೋಗ್ಯ ಕೇಂದ್ರಗಳು ಮಾನದಂಡಗಳನ್ನು ನಿರ್ದಿಷ್ಟಪಡಿಸಿ ಲಾಭ ಆಧಾರಿತ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಪೈಪೋಟಿ ನೀಡುವಂತೆ ಬೆಳೆಯಬೇಕು ಎಂದರು.

ಅಂತಾರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯ ಶಿವಮೊಗ್ಗ ಅಧ್ಯಾಯವು ನಿನ್ನೆ ಇಲ್ಲಿನ ಸರ್ಜಿ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಿದ್ದ ಡಾಕ್ಟರ್‌ಪ್ರೆನಿಯರ್ ಶೃಂಗಸಭೆ 2025 ನ್ನು ಉದ್ಘಾಟಿಸಿದ ನಂತರ ಸಚಿವರು ಮಾತನಾಡಿದರು. ರಾಜ್ಯಾದ್ಯಂತ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವುದು ನನ್ನ ಉದ್ದೇಶ. ರಾಜ್ಯದಲ್ಲಿ ಈಗಾಗಲೇ ಹಲವು ವೈದ್ಯಕೀಯ ಕಾಲೇಜುಗಳಿರುವಾಗ ಹೆಚ್ಚಿನ ವೈದ್ಯಕೀಯ ಕಾಲೇಜುಗಳ ಅವಶ್ಯಕತೆ ಏಕೆ ಎಂದು ಜನರು ನನ್ನನ್ನು ಕೇಳುತ್ತಾರೆ. ನಾನು ಮೊದಲು ವೈದ್ಯಕೀಯ ಶಿಕ್ಷಣ



ಉದಯವಾಹಿನಿ ಚಿತ್ರ

ಸಚಿವನಾಗಿ ಸೇವೆ ಸಲ್ಲಿಸಿದಾಗ, ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವಂತೆ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೆ.

**ಗುರಿ ಎರಡು ಪಟ್ಟು ಇತ್ತು:** ಗ್ರಾಮೀಣ ಮತ್ತು ಆರ್ಥಿಕವಾಗಿ ದುರ್ಬಲ ಹಿನ್ನೆಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳು ವೈದ್ಯರಾಗುವ ಕನಸನ್ನು ನನಸಾಗಿಸುವುದು ಮತ್ತು ಪ್ರತಿ ವೈದ್ಯಕೀಯ ಕಾಲೇಜಿನ ಜೊತೆಗಿರುವ ಬೋಧನಾ ಆಸ್ಪತ್ರೆಗಳಲ್ಲಿ ಬಡ ರೋಗಿಗಳನ್ನು ನೋಡಿಕೊಳ್ಳುವುದು ಇದರ ಉದ್ದೇಶವಾಗಿದೆ ಎಂದರು.

ಮುಂದಿನ ನಾಲ್ಕರಿಂದ ಐದು ವರ್ಷಗಳಲ್ಲಿ ಪ್ರತಿ ಜಿಲ್ಲೆಗೂ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಇರುತ್ತದೆ ಎಂದು ಸಚಿವರು ಹೇಳಿದರು. ಪ್ರಸ್ತುತ, ರಾಜ್ಯಾದ್ಯಂತ 24 ಸರ್ಕಾರಿ ವೈದ್ಯಕೀಯ ಕಾಲೇಜುಗಳಿವೆ. ಶೇಕಡಾ 60ರಿಂದ ಶೇಕಡಾ 70ರಷ್ಟು ರೋಗಿಗಳನ್ನು ನಿರ್ವಹಿಸುವ ಖಾಸಗಿ ವೈದ್ಯರು ಮತ್ತು ಸಂಸ್ಥೆಗಳ ಕೊಡುಗೆಯನ್ನು ಸಚಿವರು ಶ್ಲಾಘಿಸಿದರು. ನಾನು ಕೇವಲ ಶೇಕಡಾ 5ರಷ್ಟು ರೋಗಿಗಳನ್ನು ಮಾತ್ರ ಪೂರೈಸುವ ಕಾರ್ಪೊರೇಟ್ ಆಸ್ಪತ್ರೆಗಳ ಬಗ್ಗೆ ಉಲ್ಲೇಖಿಸುತ್ತಿಲ್ಲ. ಅವರು ಅತಿಯಾದ ಬೆಲೆಗಳನ್ನು ವಿಧಿಸುವುದರಿಂದ ನಾವು ಅವರ ಪ್ರಾಬಲ್ಯವನ್ನು ಮಿತಿಗೊಳಿಸಬೇಕಾಗಿದೆ.ಬದಲಾಗಿ, ಲಾಭಕ್ಕಿಂತ ಹೆಚ್ಚಾಗಿ ರೋಗಿಗಳನ್ನು ನೋಡಿಕೊಳ್ಳುವ ನಿಜವಾದ ಉದ್ದೇಶದಿಂದ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡುವ ಖಾಸಗಿ ಆಸ್ಪತ್ರೆಗಳನ್ನು ಸ್ಥಾಪಿಸಲು ನಾವು ವೈದ್ಯರನ್ನು ಪ್ರೋತ್ಸಾಹಿಸಬೇಕು.

ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಡಬೇಕಾಗಿದೆ ಎಂದರು. ಸಂಸದ ಬಿ ವೈ ರಾಘವೇಂದ್ರ ಅವರು ಖಾಸಗಿ ಆಸ್ಪತ್ರೆಗಳು ಬಡವರು ಮತ್ತು ಮಧ್ಯಮ ವರ್ಗದವರಿಗೆ ಕೈಗೆಟುಕುವ ಆರೋಗ್ಯ ಸೇವೆ ಒದಗಿಸಬೇಕೆಂದು ಒತ್ತಾಯಿಸಿದರು, ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಕೂಡ ಇದಕ್ಕೆ ದನಿಗೂಡಿಸಿದರು.

**ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು**

**ಈಗ, ಖಾಸಗಿ ಆಸ್ಪತ್ರೆಗಳೊಂದಿಗೆ ಪೈಪೋಟಿ ನಡೆಸಲು ಪ್ರತಿ ಜಿಲ್ಲೆಯಲ್ಲಿಯೂ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ನಾನು ಬಯಸುತ್ತೇನೆ. ಮಾನದಂಡವನ್ನು ನಿಗದಿಪಡಿಸುವುದು ಏಕೈಕ ಉದ್ದೇಶವಾಗಿದೆ. ಜಯದೇವ ಹೃದಯರಕ್ತನಾಳ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಇಲ್ಲದಿದ್ದರೆ, ಸ್ಟೆಂಟ್‌ನ ವೆಚ್ಚವು 3 ಲಕ್ಷ ರೂಪಾಯಿಗಳಾಗುತ್ತಿತ್ತು. ಜಯದೇವ ಸಂಸ್ಥೆಗೆ ಧನ್ಯವಾದಗಳು, ಖಾಸಗಿ ಆಸ್ಪತ್ರೆಗಳಲ್ಲಿಯೂ ಸಹ ಇದು ಈಗ 60,000 ರೂಪಾಯಿಗಳಾಗಿದೆ. ಮಾನದಂಡಗಳನ್ನು ನಿಗದಿಪಡಿಸಲು ಮತ್ತು ಬೆಲೆಗಳನ್ನು ನಿಯಂತ್ರಣದಲ್ಲಿಡಲು ಈ ಸೌಲಭ್ಯಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು.**

## ಪ್ರಜಾಪ್ರಭುತ್ವ ಎಂದರೆ ಜನರಿಂದ ಆಡಳಿತ ಎಂದರ್ಥ: ಅಗ್ನಿಶಾಮಕ ದಳ ಉಪನೀರಿಕ್ಷಕ ಹಸನ್.ಕೆ

• ಉದಯವಾಹಿನಿ,ಚಿಂಚೋಳಿ

ಪ್ರಜಾಪ್ರಭುತ್ವ ಅನ್ನುವುದು ಜನರಿಂದ ಜನರಿಗಾಗಿ ಇರುವುದು,ಸಾರ್ವತ್ರಿಕ ಚುನಾವಣೆ ನಡೆಸಿ ಚುನಾವಣೆ ಮೂಲಕ ಜನರಿಂದ ಮತಗಳು ಪಡೆದು ಆಯ್ಕೆಯಾದ ಜನಪ್ರತಿನಿಧಿಗಳು ಆಡಳಿತ ನಡೆಸುವುದೆ ಪ್ರಜಾಪ್ರಭುತ್ವ ಎಂದು ಅಗ್ನಿಶಾಮಕ ದಳದ ಉಪನೀರಿಕ್ಷಕ ಹಸನ್ ಕೆ ಹೇಳಿದರು. ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡ ಭಾರತದ ಚುನಾವಣಾ ಸಾಕ್ಷರತ ಕ್ಲಬ್ ಹಾಗೂ ತಾಲ್ಲೂಕಾ ಹಾಗೂ ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಚೆಕ್ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳನ್ನು ಅಯ್ಕೆ ಮಾಡಬೇಕಾದರೆ ಚುನಾವಣೆಯಲ್ಲಿ ಮತಗಳು ಪಡೆಯಲೇಬೇಕು. ಅದಕ್ಕಾಗಿ ಪ್ರತಿಯೊಬ್ಬರು ಮತಗಳು ಚಲಾವಣೆ ಮಾಡುವ ಮೂಲಕ ಮತದಾನದ ಶೇಕಡಾವಾರು ಹೆಚ್ಚಿಸಬೇಕು ಎಂದರು.

ಐಕ್ಯುಎಸಿ ಹಾಗೂ ಇ.ಎಲ್.ಸಿ ಸಂಚಾಲಕ ಡಾ.ಬಸವರಾಜೇಶ್ವರಿ ಹಾಲು ಪ್ರಾಸ್ತಾವಿಕ ಮಾತನಾಡಿ ಪ್ರತ್ಯೇಕ್ಷ ಪ್ರಜಾಪ್ರಭುತ್ವ ನಾಗರೀಕರು ಪ್ರತಿಯೊಂದು



ಉದಯವಾಹಿನಿ ಚಿತ್ರ

ನಿರ್ಧಾರದಲ್ಲಿ ನೇರವಾಗಿ ಭಾಗವಹಿಸುತ್ತಾರೆ ನಿರ್ಧಾರಗಳನ್ನು ಸ್ವತಃ ತೆಗೆದುಕೊಂಡು ಮತ ಚಲಾಯಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಬಸವಾರಾಜ ಕೋನೆರಿ ಅಧ್ಯಕ್ಷತೆ ವಹಿಸಿದ್ದರು,ಸಿಬ್ಬಂದಿಯ ಕಾರ್ಯದರ್ಶಿ ಡಾ.ಮಿರಾಜಪಾಶಾ,ಎನ್.ಎಸ್.ಎಸ್ ಸಂಯೋಜಕ ಡಾ.ಸಂತೋಷ ಕಟಕೆ,ಪ್ರೊ. ಸತೀಶಕುಮಾರ,ಅನ್ನಪೂರ್ಣ ಸೇಡಂಕರ್,ಸೇರಿದಂತೆ ವಿಧ್ಯಾರ್ಥಿಗಳು ಇದ್ದರು.

## ಸರ್ಕಾರದ ಆದೇಶದಂತೆ ಗಣತಿದಾರರು ಸಮೀಕ್ಷೆ ಪ್ರಾರಂಭ

• ಉದಯವಾಹಿನಿ,ಚಿಂಚೋಳಿ

ರಾಜ್ಯ ಸರ್ಕಾರದ ಆದೇಶದಂತೆ ಗಣತಿದಾರರು ಸಮೀಕ್ಷೆ ನಡೆಸಲು ತಮ್ಮ ತಮ್ಮ ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಲು ಬರುತ್ತಿದ್ದಾರೆ ಮುಸ್ಲಿಂ ಬಾಂಧವರು ತಪ್ಪದೆ ಸಮೀಕ್ಷೆಯಲ್ಲಿ ಭಾಗವಹಿಸಿ ಅವರು ಕೇಳುವ ಪ್ರಶ್ನೆಗಳಿಗೆ ಧರ್ಮ ಇಸ್ಲಾಂ,ಜಾತಿ,ಮುಸ್ಲಿಂ, ಉಪಜಾತಿ ಶೇಖ್ ,ಸೈಯದ್,ದರ್ವೆಸು, ನದಾಫ್,ಪಿಂಜಾರ್,ಇತರೆ ಸೇರಿದಂತೆ ಮಾತೃಭಾಷೆ ಉರ್ದು ಎಂದು ಉತ್ತರಿಸುವಂತೆ ಹಿರಿಯ ಮುಖಂಡ ಅಬ್ದುಲ್ ಬಾಷೀದ್ ಮತ್ತು ಕೆ.ಎಂ.ಬಾರಿ ಸೂಚಿಸಿದರು.

ಪಟ್ಟಣದಲ್ಲಿ ಮುಸ್ಲಿಂ ಸಮುದಾಯದ ಬಾಂಧವರು,ಮತ್ತು ಹಾಫೀಜ್,ಮೌಲಾನಾಗಳು ಸಭೆಯಲ್ಲಿ ನಿರ್ಣಯ ಮಂಡನೆ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ತಮ್ಮ ತಮ್ಮ ಮನೆಯ ಕುಟುಂಬಸ್ಥರು ವಿವರ ಹೆಸರುಗಳು ಆಸ್ತಿ ತೆರಿಗೆ ಶಿಕ್ಷಣ ಉದ್ಯೋಗ ಸೇರಿದಂತೆ ಎಲ್ಲಾ ಮಾಹಿತಿಗಳು ತಪ್ಪದೆ ತುಂಬಿಸಿ ಪ್ರತಿಯೊಂದು ಗ್ರಾಮದಲ್ಲಿ ಕೆಲವರು ಬೇರೆ ಗ್ರಾಮಗಳಿಗೆ ತೆರಳಿದರೂ ಅವರ ದಾಖಲೆಗಳು ಫೋನಿನಲ್ಲಿ ಹಾಕಿಕೊಂಡು ಗಣತಿದಾರರು ಹೇಳುವ



ಉದಯವಾಹಿನಿ ಚಿತ್ರ

ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿ ಧರ್ಮ ಇಸ್ಲಾಂ ಎಂದು ಬರೆಸಿ,ಜಾತಿ ಮುಸ್ಲಿಂ ಎಂದು ಬರೆಸಿ, ಉಪಜಾತಿ ಶೇಖ್,ಸೈಯದ್, ಪಿಂಜಾರ್, ಲದಾಫ್,ಧರ್ವೆಸು,ನಧಾಫ್,ಖುರೇಷಿ ಇತರೆ ಉಪಜಾತಿಗಳು ಬರೆಯಿಸಿ,ಮಾತೃಭಾಷೆ ಎಂದು ಕೇಳಿದಾಗ ಉರ್ದು ಎಂದು ಬರೆಸಬೇಕು ಎಂದರು.

ತಾಲ್ಲೂಕಿನ ಪ್ರತಿಯೊಂದು ಮಸೀದಿಯ ಕಮೀಟಿಯವರು ಈ ಸಮೀಕ್ಷೆ ಮಾಡಲು ಬರುವ ಗಣತಿದಾರರಿಗೆ ಬೇಂಬಲ ಸೂಚಿಸಿ ಯುವಕರಿಗೆ ಅಥವಾ ಹಿರಿಯ ಮುಖಂಡರು ಅವರ ಜೋತೆಯಲ್ಲಿ ಇದ್ದು ಮುಸ್ಲಿಂ ಮನೆಗಳು ತಪ್ಪದಂತೆ ನೋಡಿಕೊಂಡು ಎಲ್ಲಾ ಮಾಹಿತಿಗಳು ಬರೆಸಬೇಕು ಎಂದರು.

**ಆಯಾ ಗ್ರಾಮಗಳಲ್ಲಿ ಸಮೀಕ್ಷೆ ನಡೆಸಲು ಗಣತಿದಾರರು ಬಂದಿರುವಾಗ ಮುಸ್ಲಿಂ ಸಮುದಾಯದ ಯುವಕರು ಅವರಿಗೆ ಬೆಂಬಲಿಸಿ ಮುಸ್ಲಿಂ ಸಮಾಜದವರು ಯಾವುದೇ ಮನೆಗಳು ತಪ್ಪದಂತೆ ಅವರವರ ದಾಖಲಾತಿಗಳು ಇಟ್ಟುಕೊಂಡು ಅವರು ಹೇಳುವ ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವಂತೆ ಹೇಳಿದರು.**

ಸಂದರ್ಭದಲ್ಲಿ ಅಯ್ಯುಬ್ ಖಾನ್, ಹಾಫೀಜ್ ಮುಫ್ತಿ ಅಹಾದ್, ಮಹ್ಮದ್ ಇಬ್ರಾಹಿಂ, ಶಬ್ಬೀರ ಅಹೇಮದ್, ಅನ್ವರ್ ಖತೀಬ್, ಮಹ್ಮದ್ ಖಾಲೀದ್, ಮತೀನ್ ಸೌದಾಗಾರ, ಮಹ್ಮದ್ ಅಸ್ಲಾಂ ಸೌದಾಗಾರ, ಜೀಯಾವೂದ್ದೀನ್,ಮುಜಾಮೀಲ್,ನುಮಾನ್ ಪಟೇಲ್, ಮಹ್ಮದ್ ಇಸಾಕ್ ಅನ್ಸಾರಿ, ನಿಸಾರ್ ಅನ್ಸಾರಿ,ಇಸ್ಮಾಯಿಲ್ ಹಾಫೀಜ್, ಚಾಂದ್, ಸವೂದ್ ಶಾ,ಅನೇಕರಿದ್ದರು.

## ಟಿಬಿಯನ್ನು ಸೋಲಿಸಿ, ದೇಶವನ್ನ ಗೆಲ್ಲಿಸಿ ಬಿ.ಮೂಗಪ್ಪ ಆರೋಗ್ಯ ಶಿಕ್ಷಣಾಧಿಕಾರಿ

• ಉದಯವಾಹಿನಿ,ಚಿತ್ರದುರ್ಗ

ಎಲ್ಲರೂ ಒಗ್ಗೂಡಿ ಕ್ಷಯರೋಗದ ವಿರುದ್ಧ ಹೋರಾಟ ನಡೆಸೋಣ, ಟಿಬಿಯನ್ನು ಸೋಲಿಸಿ ದೇಶವನ್ನು ಗೆಲ್ಲಿಸಿ ಎಂದು ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ. ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಗುಡ್ಡದ ರಂಗವ್ವನ ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಮಲ್ಲನಕಟ್ಟೆ ಗ್ರಾಮದಲ್ಲಿ ಸ್ವಸ್ಥನಾರಿ ಸಶಕ್ತ ಪರಿವಾರ ಅಭಿಯಾನದಡಿ ಭಾನುವಾರ ಸಾರ್ವಜನಿಕರಿಗೆ ಕ್ಷಯ ರೋಗದ ಕರಪತ್ರಗಳನ್ನು ಹಂಚಿಕೆ ಮಾಡಿ, ಜಾಗೃತಿ ಜಾತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕ್ಷಯ ರೋಗಕ್ಕೆ ನಿಗದಿತ ಚಿಕಿತ್ಸೆ ಲಭ್ಯ ಇದೆ ರೋಗಲಕ್ಷಣ ಕಂಡು ಬಂದಲ್ಲಿ ಸಾರ್ವಜನಿಕರು ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆಗಳ ಪಡುವುದು ಒಳಪಡುವುದು ರೋಗ ದೃಢಪಟ್ಟರೆ ಉಚಿತವಾದ ಔಷಧಿ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ರೋಗಿಗಳಿಗೆ ಚಿಕಿತ್ಸಾ ಅವಧಿಯಲ್ಲಿ ಪೌಷ್ಟಿಕ ಆಹಾರಕ್ಕಾಗಿ ಮಾಸಿಕ 1000 ರೋಗಿಯ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರ ಹಣ ಜಮಾ ಮಾಡಲಾಗುವುದು ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಶಾಂತ್ ಕುಮಾರ್ ಮಾತನಾಡುತ್ತಾ ಸಂಜೆ ವೇಳೆ ಜ್ವರ ಬರುವುದು ಹಸಿವಾಗದಿರುವುದು ತೂಕ ಕಡಿಮೆಯಾಗುವುದು ಕೆಮ್ಮು ಕಫ ಕಫದಲ್ಲಿ ರಕ್ತ ಬರುವುದು ಇವು ಕ್ಷಯರೋಗದ ಲಕ್ಷಣಗಳು ರೋಗ ಉಲ್ಬಣವಾಗದಂತೆ ಶೀಘ್ರ ಪತ್ತೆ ತ್ವರಿತ ಚಿಕಿತ್ಸೆ ಅವಶ್ಯವೆಂದರು.



ಉದಯವಾಹಿನಿ ಚಿತ್ರ

**ಹಿರಿಯ ಚಿಕಿತ್ಸಾ ಮೇಲ್ವಿಚಾರಕ ಮಹೇಂದ್ರ ಮಾತನಾಡುತ್ತಾ ಕ್ಷಯ ರೋಗ ಪತ್ತೆ ಮತ್ತು ಚಿಕಿತ್ಸೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತವಾಗಿ ದೊರೆಯಲಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಂಡು ಕ್ಷಯ ಮುಕ್ತ ಜಿಲ್ಲೆಯನ್ನಾಗಿಸೋಣ ಎಂದರು. ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ದ್ರಾಕ್ಷಾಯಿಣಿ ನಿಶ್ಚಯ ಮಿತ್ರರಾಗಿ ಕ್ಷಯರೋಗಿಗೆ ಎರಡನೇ ಮಾಸಿಕದ ಪೌಷ್ಟಿಕ ಆಹಾರದ ಕಿಟ್ ವಿತರಿಸಿದರು . ಈ ಕಾರ್ಯಕ್ರಮದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಶಾಂತ ಕುಮಾರ್, ಆಶಾ ಕಾರ್ಯಕರ್ತೆಯರಾದ ತಿಪ್ಪಕ್ಕ, ಸುಧಾ, ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.**

## ಪಂಚಮಸಾಲಿ ಪೀಠದಿಂದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ

• ಉದಯವಾಹಿನಿ, ಬಾಗಲಕೋಟೆ

ಜಿಲ್ಲೆ ಕೂಡಲಸಂಗಮದಲ್ಲಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್‌ನ ಕಾರ್ಯಕಾರಿಣಿ ಸಭೆಯಲ್ಲಿ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಉಚ್ಚಾಟಿಸಲು ನಿರ್ಧರಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ನೀಲಕಂಠ ಅಸೂಟಿ, ಟ್ರಸ್ಟ್‌ನಲ್ಲಿ ಉಚ್ಚಾಟನೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇನ್ನು ಮುಂದೆ ಪೀಠಕ್ಕೂ, ಅವರಿಗೆ ಸಂಬಂಧವಿಲ್ಲ ಎಂದು ಅವರು ಹೇಳಿದರು.

ಹುಬ್ಬಳ್ಳಿಯಲ್ಲಿ ನಡೆದ ಜನಪ್ರತಿನಿಧಿಗಳ ಸಭೆಯಲ್ಲಿ ಧರ್ಮ ಕಾಲಂನಲ್ಲಿ ಹಿಂದೂ ಬರೆಯಿಸಲು, ಜಾತಿ ಕಾಲಂನಲ್ಲಿ ಲಿಂಗಾಯತ ಎಂದು ಬರೆಸಲು ಹೇಳಿದ್ದಾರೆ. ಟ್ರಸ್ಟ್ ಬಸವ ತತ್ವದಲ್ಲಿ ನಡೆಯುತ್ತಿರುವುದರಿಂದ ಇದು ಟ್ರಸ್ಟ್ ನಿರ್ಧಾರಕ್ಕೆ ವಿರೋಧವಾಗಿದೆ ಎಂದರು.

ಸ್ವಾಭಿಮಾನವಿದ್ದರೆ ಸ್ವಾಮೀಜಿ ಪೀಠಕ್ಕೆ ಬರಬಾರದು. ಹಿಂದೂ ಎಂದು ಬರೆಯಿಸಲು ಹೇಳಿರುವುದು ಮೀಸಲಾತಿ ಹೋರಾಟ ಹತ್ತಿಕ್ಕುವ ತಂತ್ರವಾಗಿದೆ. ಇದಕ್ಕೆ ಸ್ವಾಮೀಜಿಯನ್ನು ಕೆಲವರು ಬಳಸಿಕೊಂಡಿದ್ದಾರೆ ಎಂದು ಆರೋಪಿಸಿದರು.



**ಸ್ವಾಮೀಜಿ ಅವರು ವೈಯಕ್ತಿಕವಾಗಿ ಯಾವುದೇ ಆಸ್ತಿ ಮಾಡಿಕೊಳ್ಳಬಾರದು ಎಂದಿದೆ. ಆದರೆ, ಅವರು ಬೆಳಗಾವಿ, ಹುಬ್ಬಳ್ಳಿ, ಬೆಂಗಳೂರಿನಲ್ಲಿ ಮನೆ ಮಾಡಿ ಕೊಂಡಿದ್ದಾರೆ. ಅವರ ಹೆಸರಿನಲ್ಲಿ ಆಸ್ತಿ ಮಾಡಿಕೊಂಡಿದ್ದಾರೆ. ಸಮಯ ಬಂದಾಗ ವಿವರ ಬಹಿರಂಗ ಪಡಿಸುತ್ತೇನೆ ಎಂದು ಹೇಳಿದರು. ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ**

## ರಾಜ್ಯ ಸರ್ಕಾರದ ಜಾತಿ ಸಮೀಕ್ಷೆಗೆ ಮಾನ್ಯತೆಯೇ ಇಲ್ಲ

### ರಾಜ್ಯ ಸರ್ಕಾರ ನಡೆಸುತ್ತಿರುವುದು ಸಮೀಕ್ಷೆಯಷ್ಟೇ ಇದಕ್ಕೆ ಯಾವುದೇ ಅರ್ಥವಿಲ್ಲ ಎಂದು ಹೇಳಿಕೆ

• ಉದಯವಾಹಿನಿ, ಹುಬ್ಬಳ್ಳಿ

ರಾಜ್ಯ ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಜಾತಿ-ಜನಗಣತಿ ಸಮೀಕ್ಷೆಗೆ ಯಾವುದೇ ಅಧಿಕೃತ ಮಾನ್ಯತೆಯಿಲ್ಲ, ಅರ್ಥವೂ ಇಲ್ಲವೆಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದರು. ಹುಬ್ಬಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಕೇಂದ್ರ ಸರ್ಕಾರ ಜನಗಣತಿ ಮಾಡುತ್ತದೆ. ಆ ಅಧಿಕಾರ ಇರುವುದು ಕೇಂದ್ರಕ್ಕೆ ಮಾತ್ರ. ರಾಜ್ಯ ಸರ್ಕಾರ ನಡೆಸುತ್ತಿರುವುದು ಸಮೀಕ್ಷೆಯಷ್ಟೇ. ಇದಕ್ಕೆ ಯಾವುದೇ ಅರ್ಥವಿಲ್ಲ ಎಂದು ಹೇಳಿದರು.

ಸಮಾಜ ದ್ರೋಹಿಗಳಿಗೆ, ಸಮಾಜದಲ್ಲಿ ಸೌಹಾರ್ದತೆ ಕೆಡಿಸುವವರಿಗೆ, ಮತೀಯ ಭಾವನೆ ಕೆರಳಿಸುವವರಿಗೆ ಕಾಂಗ್ರೆಸ್ ಸರ್ಕಾರ ಬೆಂಬಲ ಮತ್ತು ಕುಮ್ಮಕ್ಕು ನೀಡುತ್ತಿದೆ. ಈಗ ನಡೆಸುತ್ತಿರುವ ಜಾತಿಗಣತಿ ಸಮೀಕ್ಷೆಯಲ್ಲಿ ಸಹ ಇದರ ಪರಿಣಾಮ ಕಾಣುತ್ತಿದೆ ಎಂದು ತೀವ್ರವಾಗಿ ಖಂಡಿಸಿದರು.

**ಯಾವ ಆಧಾರದ ಮೇಲೆ ಜಾತಿ ಸಮೀಕ್ಷೆ** ರಾಜ್ಯ ಕಾಂಗ್ರೆಸ್ ಸರ್ಕಾರ ಅದ್ಯಾವ ಆಧಾರದ ಮೇಲೆ ಜಾತಿ ಸಮೀಕ್ಷೆ ಮಾಡುತ್ತಿದೆ ಕುರುಬ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ



ಉದಯವಾಹಿನಿ ಚಿತ್ರ

ಕ್ರಿಶ್ಚಿಯನ್ ಎಂದು ಯಾವ ಆಧಾರ ಮೇಲೆ ಮಾಡಲು ಹೊರಟಿದ್ದೀರಿ ಎಂದು ರಾಜ್ಯ ಸರ್ಕಾರವನ್ನು ಪ್ರಲ್ಹಾದ್ ಜೋಶಿ ತೀವ್ರ ತರಾಟೆಗೆ ತೆಗೆದುಕೊಂಡರು.

**ಸಿಎಂ ಅಲ್ಟ್ರಾ ಲೆಫ್ಟಿಸ್ಟ್:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಬ್ಬ ಅಲ್ಟ್ರಾ ಲೆಫ್ಟಿಸ್ಟ್ ಆಗಿದ್ದಾರೆ. ಜಾತಿ ಜನಗಣತಿ ಎಂದು ಕಳೆದ ಬಾರಿ 400 ಕೋಟಿ ಕಳೆದಿದ್ದಾರೆ. ಈ ಬಾರಿಯೂ 400 ಕೋಟಿ ಕಳೆಯುತ್ತಿದ್ದಾರೆ ಅಷ್ಟೇ. ಅದರ ವಿನಾ ಬೇರೇನೂ ಆಗುವುದಿಲ್ಲ. ಇದಕ್ಕೆ ಯಾವುದೇ ಮನ್ನಣೆ-ಮಾನ್ಯತೆ ಸಿಗುವುದಿಲ್ಲ ಎಂದು ಜೋಶಿ ಹೇಳಿದರು.

**ಹಿಂದೂ ಸಮಾಜ ಒಡೆಯುವ ಷಡ್ಯಂತ್ರ**

**ನಕಲಿ ಗಾಂಧಿಗಳ ಅಣತಿಯಂತೆ ಸಿಎಂ ಸಿದ್ದರಾಮಯ್ಯ ಅವರು ಹಿಂದೂ ಸಮಾಜವನ್ನು ಒಡೆಯುವ ಷಡ್ಯಂತ್ರ ನಡೆಸಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಪ್ರೇರಣೆ, ಸೂಚನೆಯಂತೆ ನುಸುಳುಕೋರರಿಗೆ ವೋಟಿಂಗ್ ಹಕ್ಕು ಕೊಟ್ಟು ದೇಶವನ್ನು ಅಶಕ್ತಗೊಳಿಸುವ ಷಡ್ಯಂತ್ರದ ಭಾಗ ಇದಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯ ಸರ್ಕಾರದ ಜಾತಿ ಸಮೀಕ್ಷೆಗೆ ಆಕ್ರೋಶ-ಆಕ್ಷೇಪ ವ್ಯಕ್ತಪಡಿಸಿದರು.**

ಒಕ್ಕಲಿಗರು ಸೇರಿದಂತೆ ಹಲವು ಸಮುದಾಯಗಳಲ್ಲಿ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಜಾತಿ ಸಮೀಕ್ಷೆ ಮಾಡಿದರೆ ಒಕ್ಕಲಿಗ ಸಮಾಜದಲ್ಲಿ ತಮ್ಮ ನಾಯಕತ್ವ ಹೋಗಲಿದೆ ಎಂಬ ಸತ್ಯ ಡಿಕೆಶಿ ಅರಿವಿಗೆ ಬಂದಿದೆ. ಹಾಗಾಗಿ ಅವರೂ ಸೇರಿದಂತೆ ಕಾಂಗ್ರೆಸ್‌ನ ಸಚಿವರುಗಳೇ ಇದರ ವಿರುದ್ಧ ಸಿಡಿಮಿಡಿಗೊಂಡಿದ್ದಾರೆ ಎಂದು ಜೋಶಿ ಪ್ರತಿಕ್ರಿಯಿಸಿದರು.

**ಮತಾಂತರಿಗಳಿಗೆ ಮೀಸಲಾತಿ ಹುನ್ನಾರ:** ಕನ್ವರ್ಟ್ ಆದವರಿಗೆ ಮೀಸಲಾತಿಯಿಲ್ಲ ಎಂಬುದು ನಮ್ಮ ಸಂವಿಧಾನದಲ್ಲಿ ಸ್ಪಷ್ಟವಾಗಿದೆ. ಆದರೆ ಇವರು ಕುರುಬ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್ ಎಂದು ನಮೂದಿಸಿ ಮೀಸಲಾತಿ ಕೊಡುವ ಹುನ್ನಾರ ನಡೆಸಿದಂತಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು. ಹಿಂದೂ ಸಮಾಜ ಮತ್ತು ವ್ಯವಸ್ಥೆಯಲ್ಲಿ ಮೊದಲು ಅಸ್ಪೃಶ್ಯತೆ ಎಂಬುದಿರಲಿಲ್ಲ. ಅದ್ಯಾವುದೋ ಒಂದು ಕೆಟ್ಟ ಕಾಲಘಟ್ಟದಲ್ಲಿ ಇದು ತೂರಿಕೊಂಡು ಬಂದಿತು. ಅಸ್ಪೃಶ್ಯತೆ ನೆಪದಲ್ಲಿ ನಮ್ಮದೇ ಬಂಧುಗಳನ್ನು, ರಕ್ತ ಸಂಬಂಧಿಗಳನ್ನು, ನಮ್ಮೊಂದಿಗೇ ಗಾಳಿ-ನೀರು ಕುಡಿದವರನ್ನು ದೂರವಿಡುವ ಕೆಟ್ಟ ಪರಿಸ್ಥಿತಿ ಎದುರಾಗಿತ್ತು. ಸಾಮಾಜಿಕ ಸಮಾನತೆ ಇಲ್ಲದಿರುವ ಅಂಥವರಿಗಾಗಿ ಮೀಸಲಾತಿ ಕಲ್ಪಿಸಲಾಯಿತು. ಆದರೆ ಈ ರಾಜ್ಯ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅದಿಂದು ಬೇರೆಯದ್ದೇ ದಿಕ್ಕು ಪಡೆದುಕೊಳ್ಳುತ್ತಿದೆ. ಮತಾಂತರಗೊಂಡವರಿಗೂ ಮೀಸಲಾತಿ ಕೊಡುವ ಪ್ರಯತ್ನ ನಡೆದಿದೆ ಎಂದು ಪ್ರಲ್ಹಾದ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದರು.

# ದೆಹಲಿ ಉದ್ಯಮಿಗೆ ಸೇರಿದ 80ಕೋಟಿ ರೂ. ವಿದೇಶಿ ಆಸ್ತಿ ವಶಕ್ಕೆ



**ನವದೆಹಲಿ:** ಜಾರಿ ನಿರ್ದೇಶನಾಲಯವು ದೆಹಲಿ ಮೂಲದ ಇಂಪೀರಿಯಲ್ ಗ್ರೂಪ್‌ನ ಅಧ್ಯಕ್ಷ ಮನ್ವಿಂದರ್ ಸಿಂಗ್ ಅವರ ಪತ್ನಿ ಸಗ್ರಿ ಸಿಂಗ್ ಮತ್ತು ಅವರ ಸಹಚರರಿಗೆ ಸೇರಿದ ಆಸ್ತಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದು, ಸುಮಾರು 80 ಕೋಟಿ ರೂ. ಮೌಲ್ಯದ ವಿದೇಶಿ ಆಸ್ತಿಯನ್ನು ವಶಕ್ಕೆ ಪಡೆದಿದೆ. ಸೆಪ್ಟೆಂಬರ್ 19 ಮತ್ತು 20 ರಂದು ಹಿಮಾಚಲ ಪ್ರದೇಶ ಮತ್ತು ದೆಹಲಿಯಾದ್ಯಂತ ಆರು ಸ್ಥಳಗಳಲ್ಲಿ ದಾಳಿ ನಡೆಸಲಾಗಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲಿ ಈ ದಾಳಿ ನಡೆಸಲಾಗಿದ್ದು, 80 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಬೇನಾಮಿ ವಿದೇಶಿ ಆಸ್ತಿಗಳನ್ನು ವಶಕ್ಕೆ ಪಡೆಯಲಾಗಿದೆ. ಮನ್ವಿಂದರ್ ಸಿಂಗ್ ಮತ್ತು ಸಗ್ರಿ ಸಿಂಗ್ ಹಲವಾರು ವಿದೇಶಿ ಕಂಪೆನಿಗಳು ಮತ್ತು ಆಸ್ತಿಗಳಲ್ಲಿ ಬೇನಾಮಿಯಾಗಿ ಹೂಡಿಕೆ ಮಾಡಿರುವುದು ತನಿಖೆ ವೇಳೆ ಕಂಡು ಬಂದಿದೆ.

ಸಿಂಗಾಪುರ ಮೂಲದ ಏರೋಸ್ಟಾರ್ ವೆಂಚರ್ ಪ್ರೈವೇಟ್ ಲಿಮಿಟೆಡ್, ದುಬೈನ ಯುನೈಟೆಡ್ ಏರೋಸ್ಪೇಸ್ ಡಿಡಬ್ಲ್ಯುಸಿ ಎಲ್‌ಎಲ್‌ಸಿಯಲ್ಲಿನ ಆಸ್ತಿಗಳೂ ಇದರಲ್ಲಿ ಸೇರಿವೆ. ಈ ಸಂಸ್ಥೆಗಳು ದುಬೈ ಮೂಲಕ ನಡೆಸಲಾದ ಕೋಟ್ಯಂತರ ಮೌಲ್ಯದ ಅಸುರಕ್ಷಿತ ಸಾಲಗಳು, ವೇತನ ಪಾವತಿಗಳನ್ನು ಒಳಗೊಂಡ ಸಂಕೀರ್ಣ ವಹಿವಾಟು ಜಾಲದಲ್ಲಿ ಭಾಗಿಯಾಗಿರುವುದು ತನಿಖೆ ವೇಳೆ ಕಂಡು ಬಂದಿದೆ.

ಮನ್ವಿಂದರ್ ಸಿಂಗ್ ದಂಪತಿ ದುಬೈ ಮೂಲದ ಕಂಪೆನಿಯು ಕಳೆದ ಮೇ ತಿಂಗಳಲ್ಲಿ 7 ಕೋಟಿ ರೂ. ಮೌಲ್ಯದ ರಾಬಿನ್ಸನ್-66 ಹೆಲಿಕಾಪ್ಟರ್ ಅನ್ನು ಖರೀದಿಸಿದೆ. ಇದಕ್ಕಾಗಿ ಹಾಂಗ್ ಕಾಂಗ್ ಮೂಲದ ಸಂಸ್ಥೆಯಿಂದ ಸಾಲ ನೀಡಿದೆ.

ಈ ಹೆಲಿಕಾಪ್ಟರ್ ಅನ್ನು ಹಿಮಾಚಲ ಪ್ರದೇಶದ ಔರಮಾ ಕಣಿವೆ ಯೋಜನೆಗಾಗಿ ಭಾರತಕ್ಕೆ ತರಲಾಗಿದೆ ಎಂದು ಇಡಿ ಹೇಳಿದೆ. ಮನ್ವಿಂದರ್ ಸಿಂಗ್ ದಂಪತಿ ದುಬೈ ಘಟಕದಲ್ಲಿ ಸುಮಾರು 38 ಕೋಟಿ ರೂ. ಮೌಲ್ಯದ ವಿದೇಶಿ ಆಸ್ತಿಗಳನ್ನು ಹೊಂದಿದ್ದಾರೆ. ಅಲ್ಲದೇ ಥೈಲ್ಯಾಂಡ್‌ನ ಕೊಹ್ ಸಮುಯಿಯಲ್ಲಿರುವ ಐಷಾರಾಮಿ ವಿಲ್ಲಾ ಸಮಯ್ರಾ ಮೌಲ್ಯ ಅಂದಾಜು 16 ಕೋಟಿ ರೂ. ಗಳಾಗಿವೆ. ಇದರಲ್ಲಿ ಬ್ರಿಟಿಷ್ ವರ್ಜಿನ್ ದ್ವೀಪಗಳಲ್ಲಿ ನೋಂದಾಯಿಸಲಾದ ಕಂಪೆನಿಗಳು, ಸಿಂಗಾಪುರದಲ್ಲಿರುವ ವಿದೇಶಿ ಬ್ಯಾಂಕ್ ಖಾತೆಗಳು ಸೇರಿವೆ.

ಶಿಮ್ಲಾದ ನಾಲ್ದೇರಾದಲ್ಲಿರುವ ಔರಮಾ ಕಣಿವೆ ಯೋಜನಾ ಸ್ಥಳದಲ್ಲಿ ದಾಳಿ ನಡೆಸಿರುವ ಇಡಿ ಅಪಾರ ಪ್ರಮಾಣದಾ ನಗದು ವ್ಯವಹಾರಗಳ ದಾಖಲೆಗಳನ್ನು ವಶಕ್ಕೆ ಪಡೆದಿವೆ. ಇದರಲ್ಲಿ ಅಪಾರ ಪ್ರಮಾಣದ ನಗದು ಹಣವನ್ನು ಅನಧಿಕೃತ ಮಾರ್ಗಗಳ ಮೂಲಕ ವಿದೇಶಗಳಿಗೆ ಸಾಗಿಸಲಾಗಿದೆ ಎಂದು ಇಡಿ ಶಂಕೆ ವ್ಯಕ್ತಪಡಿಸಿದ್ದು, ತನಿಖೆ ಮುಂದುವರಿಸಲಾಗಿದ್ದು, ಇನ್ನು ಹೆಚ್ಚಿನ ಮಾಹಿತಿ ಬಹಿರಂಗವಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

# ಅಮೆರಿಕ ವಿರೋಧದ ನಡುವೆ ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಬ್ರಿಟನ್ ಸಿದ್ಧತೆ

## ವಿಶ್ವಸಂಸ್ಥೆಯ ಸಾಮಾನ್ಯ ಸಭೆ

### ಇಸ್ರೇಲ್ ಒತ್ತೆಯಾಳುಗಳು ಬೀಳ್ಕೊಡುಗೆ ಚಿತ್ರಗಳ ಬಿಡುಗಡೆ

ತಮ್ಮ ಬಳಿ ಉಳಿದಿರುವ 47 ಇಸ್ರೇಲ್ ಒತ್ತೆಯಾಳುಗಳ ಫೋಟೊಗಳಿರುವ ಪೋಸ್ಟರ್‌ವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಹಮಾಸ್ ಬಂಡುಕೋರರು ಅದರಲ್ಲಿ 'ಬೀಳ್ಕೊಡುಗೆಯ ಚಿತ್ರಗಳು' ಎಂದು ಬರೆದಿದ್ದಾರೆ. 'ಗಾಜಾ ನಗರದ ಮೇಲೆ ಇಸ್ರೇಲ್ ತನ್ನ ದಾಳಿಯನ್ನು ತೀವ್ರಗೊಳಿಸಿದೆ. ದಾಳಿಯು ಹೀಗೆಯೇ ಮುಂದುವರಿದರೆ ನಿಮ್ಮವರಿಗೆ ತೊಂದರೆ' ಎಂಬ ಎಚ್ಚರಿಕೆಯನ್ನೂ ಹಮಾಸ್ ನೀಡಿದೆ. ಪೋಸ್ಟರ್‌ನಲ್ಲಿರುವ ಎಲ್ಲಾ ಒತ್ತೆಯಾಳುಗಳ ಚಿತ್ರಗಳಿಗೆ 'ರಾನ್ ಅರಾದ್' ಹೆಸರನ್ನು ನೀಡಿ ಕ್ರಮಸಂಖ್ಯೆಯನ್ನೂ ನೀಡಲಾಗಿದೆ. 1986ರಲ್ಲಿ ಇಸ್ರೇಲ್‌ನ ವಾಯು ಪಡೆಯ ರಾನ್ ಅವರು ಕಾಣೆಯಾಗಿದ್ದರು. 'ಹಮಾಸ್ ಬಂಡುಕೋರರೇ ರಾನ್ ಅವರನ್ನು ಹತ್ಯೆ ಮಾಡಿದ್ದರು ಎಂದು ಬಳಿಕ ತಿಳಿದು ಬಂದಿತ್ತು. 'ರಾನ್ ಅವರಿಗೆ ಆದ ಗತಿಯೇ ಈ ಒತ್ತೆಯಾಳುಗಳಿಗೂ ಆಗಲಿದೆ. ಎಂದು ಹಮಾಸ್ ಹೇಳಿದೆ.




### ಗಾಜಾದ ಕಾರ್ಯಾಚರಣೆಯ ಆರಂಭ

'ನೆತನ್ಯಾಹು ಅವರ ಹಠಮಾರಿತನ ಮತ್ತು ಈತನ ಎದುರು ಸೇನಾ ಮುಖ್ಯಸ್ಥನ ಶರಣಾಗತಿಯ ಕಾರಣದಿಂದಲೇ ಬೀಳ್ಕೊಡುಗೆ ಚಿತ್ರಗಳನ್ನು ಹಂಚಿ ಕೊಳ್ಳಲಾಗಿದೆ. ಇದು ಗಾಜಾದ ಕಾರ್ಯಾಚರಣೆಯ ಆರಂಭ. ನಿಮಗೆ ಈ ಒತ್ತೆಯಾಳುಗಳು ಜೀವಂತವಾಗಿಯೂ ಇವರ ಮೃತದೇಹವೂ ಸಿಗುವುದಿಲ್ಲ ಎಂದು ಹಮಾಸ್ ಬರೆದುಕೊಂಡಿದೆ. 47 ಜನರ ಪೈಕಿ 25 ಮಂದಿ ಈಗಾಗಲೇ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ಹೇಳಿದೆ.



**ಲಂಡನ್:** ಅಮೆರಿಕದ ತೀವ್ರ ವಿರೋಧದ ನಡುವೆಯೂ ಬ್ರಿಟನ್ ಸರ್ಕಾರವು ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಮುಂದಾಗಿದೆ.

ಗಾಜಾದಲ್ಲಿ ನಡೆಸುತ್ತಿರುವ ಯುದ್ಧ ಸಂಬಂಧ ಬ್ರಿಟನ್ ಸರ್ಕಾರ ಇಸ್ರೇಲ್‌ಗೆ ಕೆಲ ನಿಬಂಧನೆ ವಿಧಿಸಿತ್ತು. ಆದ್ರೆ, ಇಸ್ರೇಲ್ ನಿಬಂಧನೆ ಪಾಲಿಸದ ಹಿನ್ನೆಲೆ ಬ್ರಿಟನ್ ಸರ್ಕಾರ ಈ ನಿರ್ಧಾರಕ್ಕೆ ಮುಂದಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ. ಸೋಮವಾರದಿಂದ (ಸೆ.22) ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆ ಆರಂಭವಾಗಲಿದೆ. ಗಾಜಾದಲ್ಲಿ ನಡೆಯುತ್ತಿರುವ ಯುದ್ಧ, ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡುವ ಕುರಿತು ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಯಲಿದೆ. ಅದಕ್ಕೂ ಮುನ್ನ ಬ್ರಿಟನ್, ಫ್ರಾನ್ಸ್, ಕೆನಡಾ, ಆಸ್ಟ್ರೇಲಿಯಾ, ಪೋರ್ಚುಗಲ್ ಸೇರಿದಂತೆ ಸುಮಾರು 140 ದೇಶಗಳು ಪ್ಯಾಲೆಸ್ಟೀನ್ ಅನ್ನು ಪ್ರತ್ಯೇಕ ದೇಶವನ್ನಾಗಿ ಪರಿಗಣಿಸಲು ಮುಂದಾಗಿವೆ.

ಇದೊಂದು ಸಾಂಕೇತಿಕ ನಡೆಯಾಗಲಿದೆಯಾದರೂ ಯುದ್ಧ ನಿಲ್ಲಿಸಲು ಇಸ್ರೇಲ್ ಮೇಲೆ ಈ ನಿರ್ಧಾರವು ರಾಜತಾಂತ್ರಿಕ ಒತ್ತಡವನ್ನು ಮತ್ತಷ್ಟು ಹೆಚ್ಚಿಸಬಹುದು. ಇದರಿಂದ ಗಾಜಾದಲ್ಲಿ ಶಾಂತಿ ನೆಲಸಬಹುದು ಎಂದು ಬ್ರಿಟನ್ ಆಶಿಸಿದೆ. ಫ್ರಾನ್ಸ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ನಿರ್ಧಾರವನ್ನು ಇಸ್ರೇಲ್‌ನಲ್ಲಿರುವ ಶಾಂತಿಪರ ಹೋರಾಟಗಾರರು ಸ್ವಾಗತಿಸಿದ್ದಾರೆ. ಈ ಬೆಳವಣಿಗೆ ನಡುವೆಯೇ ಗಾಜಾ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಒಂದೇ ದಿನ 91 ಸಾವು ಸಾವನ್ನಪ್ಪಿದ್ದಾರೆ. ಇದರಿಂದ ಟೆಲ್ ಅವೀವ್‌ನಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ. ಗಾಜಾದ ಅತಿದೊಡ್ಡ ನಗರ ಕೇಂದ್ರವನ್ನು ವಶಪಡಿಸಿಕೊಳ್ಳಲು ವಾಯು ಮತ್ತು ಭೂಸೇನಾ ಕಾರ್ಯಾಚರಣೆ ತೀವ್ರಗೊಳಿಸಲಾಗಿತ್ತು.

ಇಸ್ರೇಲಿ ಪಡೆಗಳು ಒಂದೇ ದಿನದಲ್ಲಿ ಗಾಜಾದಲ್ಲಿ 91 ಪ್ಯಾಲೆಸ್ಟೀನಿಯನ್ನರನ್ನು ಹತ್ಯೆ ಮಾಡಿವೆ. ಪ್ರಮುಖ ವೈದ್ಯರ ಕುಟುಂಬ ಸದಸ್ಯರು ಮತ್ತು ಉತ್ತರ ಗಾಜಾ ನಗರದ ಹಲವಾರು ಜನರು ಮೃತಪಟ್ಟಿದ್ದಾರೆ ಎಂದು ಅಲ್ ಜಜೀರಾ ವರದಿ ಮಾಡಿದೆ.

### ಅಬ್ಬಾಸ್‌ಗೆ ವೀಸಾ ನಿರಾಕರಣೆ

ನ್ಯೂಯಾರ್ಕ್‌ನಲ್ಲಿನ ವಿಶ್ವಸಂಸ್ಥೆಯ ಮುಖ್ಯ ಕಚೇರಿಯಲ್ಲಿ ನಡೆಯುವ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಪ್ಯಾಲೆಸ್ಟೀನ್ ಪ್ರಾಧಿಕಾರದ ಅಧ್ಯಕ್ಷ ಮಹಮೂದ್ ಅಬ್ಬಾಸ್ ಹಾಗೂ ಅವರ ತಂಡಕ್ಕೆ ವೀಸಾ ನೀಡಲು ಅಮೆರಿಕದ ಡೊನಾಲ್ಡ್ ಟ್ರಂಪ್ ಸರ್ಕಾರ ನಿರಾಕರಿಸಿದೆ. ರಾಷ್ಟ್ರೀಯ ಭದ್ರತೆಯ ಕಾರಣ ನೀಡಿ ವೀಸಾ ನಿರಾಕರಿಸಲಾಗಿದೆ. ಈ ಬೆಳವಣಿಗೆ ಬಳಿಕ ಮೊದಲೇ ಚಿತ್ರೀಕರಿಸಿದ ವಿಡಿಯೋನ್ನು ಪ್ರಸಾರ ಮಾಡಲು ಅನುಮತಿ ನೀಡುವ ನಿರ್ಣಯವನ್ನು ವಿಶ್ವಸಂಸ್ಥೆ ಮುಂದಿಟ್ಟಿತ್ತು. ಇದಕ್ಕೆ ಭಾರತವೂ ಸೇರಿ ಹಲವು ದೇಶಗಳು ಒಪ್ಪಿಗೆ ನೀಡಿವೆ. ಸೆ.25ರಂದು ಅಬ್ಬಾಸ್ ಅವರ ವಿಡಿಯೋ ಪ್ರಸಾರವಾಗಲಿದೆ.

### ಗಾಜಾ ಮೇಲೆ ಇಸ್ರೇಲ್ ದಾಳಿ ಒಂದೇ ದಿನ 91 ಮಂದಿ ಸಾವು

**ಟೆಲ್ ಅವೀವ್:** ಗಾಜಾ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಒಂದೇ ದಿನ 91 ಸಾವು ಸಾವನ್ನಪ್ಪಿದ್ದಾರೆ. ಟೆಲ್ ಅವೀವ್‌ನಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ. ಗಾಜಾದ ಅತಿದೊಡ್ಡ ನಗರ ಕೇಂದ್ರವನ್ನು ವಶಪಡಿಸಿಕೊಳ್ಳಲು ವಾಯು ಮತ್ತು ಭೂಸೇನಾ ಕಾರ್ಯಾಚರಣೆ ತೀವ್ರಗೊಳಿಸಲಾಗಿತ್ತು. ಇಸ್ರೇಲಿ ಪಡೆಗಳು ಒಂದೇ ದಿನದಲ್ಲಿ ಗಾಜಾದಲ್ಲಿ 91 ಪ್ಯಾಲೆಸ್ಟೀನಿಯನ್ನರನ್ನು ಹತ್ಯೆ ಮಾಡಿವೆ. ಪ್ರಮುಖ ವೈದ್ಯರ ಕುಟುಂಬ ಸದಸ್ಯರು ಮತ್ತು ಉತ್ತರ ಗಾಜಾ ನಗರದ ಹಲವಾರು ಜನರು ಮೃತಪಟ್ಟಿದ್ದಾರೆ ಎಂದು ಅಲ್ ಜಜೀರಾ ವರದಿ ಮಾಡಿದೆ.

ವಸತಿ ಮನೆಗಳು, ಆಶ್ರಯ ತಾಣಗಳು ಹಾಗೂ ಗಾಜಾದಿಂದ ಬೇರೆಡೆಗೆ ನಾಗರಿಕರನ್ನು ಸಾಗಿಸುತ್ತಿದ್ದ ಟ್ರಕ್‌ನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಈ ದಾಳಿಗಳಲ್ಲಿ ಕನಿಷ್ಠ 76 ಮಂದಿ ಸಾವಿಗೀಡಾಗಿದ್ದಾರೆ.



# ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಬಸ್ ಪಲ್ಟಿ, ಓರ್ವ ಸಾವು, 24 ಮಂದಿಗೆ ಗಾಯ

**ಮಧ್ಯಪ್ರದೇಶ :** ಕಾರ್ಮಿಕರಿದ್ದ ಬಸ್ ಪಲ್ಟಿಯಾಗಿ ಓರ್ವ ಮಹಿಳೆ ಸಾವನ್ನಪ್ಪಿದ್ದು, 24 ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ. ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಪಲ್ಟಿಯಾಗಿ 28 ವರ್ಷದ ಮಹಿಳೆಯೊಬ್ಬರು ಸಾವನ್ನಪ್ಪಿದ್ದು, 24 ಮಂದಿ ಗಾಯಗೊಂಡಿದ್ದಾರೆ. ಪೊಲೀಸರ ಪ್ರಕಾರ, ಜಿಲ್ಲಾ ಕೇಂದ್ರದಿಂದ ಸುಮಾರು 12 ಕಿಲೋಮೀಟರ್ ದೂರದಲ್ಲಿರುವ ಆಗ್ರಾ-ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಅಭಯಪುರ ಗ್ರಾಮದ ಬಳಿ ಬೆಳಗ್ಗೆ 4 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ.

ಬಸ್ ಗುಜರಾತ್ ನಿಂದ ಮಧ್ಯಪ್ರದೇಶಕ್ಕೆ ಬರುತ್ತಿತ್ತು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಘನಶ್ಯಾಮ್ ಮಾಲ್ವಿಯಾ ಅವರು ಬಸ್ ಗುಜರಾತ್‌ನ ಜಾಮ್‌ನಗರದಿಂದ ಕಾರ್ಮಿಕರನ್ನು ಕರೆದೊಯ್ಯುತ್ತಿತ್ತು ಮತ್ತು ಅವರನ್ನು ಅವರ ಸ್ವಂತ ಜಿಲ್ಲೆಗಳಿಗೆ ಹಿಂದಿರುಗಿಸುತ್ತಿತ್ತು ಎಂದು ಹೇಳಿದ್ದಾರೆ. ಬಸ್‌ನಲ್ಲಿದ್ದ ಹೆಚ್ಚಿನ ಕಾರ್ಮಿಕರು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದವರಾಗಿದ್ದರು.

ಸುನ್ನೆರಾ ಪೊಲೀಸ್ ಠಾಣೆ ವ್ಯಾಪ್ತಿಯ ಹೆದ್ದಾರಿಯಲ್ಲಿ ವೇಗದಲ್ಲಿ ಬಸ್‌ಚಲಾಯಿಸುತ್ತಿದ್ದಾಗ ಚಾಲಕ ನಿಯಂತ್ರಣ ಕಳೆದುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ನಿರ್ಲಕ್ಷ್ಯದಿಂದಾಗಿ ವಾಹನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿ ಉರುಳಿ ಬಿದ್ದಿದೆ. ಉತ್ತರ ಪ್ರದೇಶದ ಅಕ್ಬರ್‌ಪುರದ 28 ವರ್ಷದ ಮಹಿಳೆ ಗಾಯತ್ರಿ ಬಾಯಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇಪ್ಪತ್ತನಾಲ್ಕು ಕಾರ್ಮಿಕರು ಗಾಯಗೊಂಡಿದ್ದಾರೆ.

ಮಾಹಿತಿ ಪಡೆದ ತಕ್ಷಣ ಪೊಲೀಸರು, ಸಂಚಾರ ಇಲಾಖೆ ಅಧಿಕಾರಿಗಳು ಮತ್ತು ಆಂಬ್ಯುಲೆನ್ಸ್‌ಗಳು ಸ್ಥಳಕ್ಕೆ ಆಗಮಿಸಿದ್ದವು.

ಎಲ್ಲಾ ಗಾಯಾಳುಗಳನ್ನು ತಕ್ಷಣ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಗಂಭೀರವಾಗಿ ಗಾಯಗೊಂಡ ಕೆಲವು ಪ್ರಯಾಣಿಕರನ್ನು ಉತ್ತಮ ಚಿಕಿತ್ಸೆಗಾಗಿ ಇತರ ಆಸ್ಪತ್ರೆಗಳಿಗೆ ಕರೆದೊಯ್ಯಲಾಯಿತು. ಬಸ್ ಚಾಲಕನನ್ನು ಗುರುತಿಸಲಾಗುತ್ತಿದೆ.

ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಮತ್ತು ತನಿಖೆ ಆರಂಭಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಅಪಘಾತಕ್ಕೆ ಅತಿವೇಗ ಮತ್ತು ಅಜಾಗರೂಕ ಚಾಲನೆಯೇ ಕಾರಣ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಸ್ಥಳೀಯರು ಸಹ ಸ್ಥಳಕ್ಕೆ ಆಗಮಿಸಿ ರಕ್ಷಣಾ ಮತ್ತು ಪರಿಹಾರ ಕಾರ್ಯಗಳಲ್ಲಿ ಸಹಾಯ ಮಾಡಿದರು.

ಅಪಘಾತಕ್ಕೆ ಅತಿವೇಗ ಮತ್ತು ಅಜಾಗರೂಕ ಗಾಯಾಳುಗಳ ಕುಟುಂಬಗಳಿಗೆ ತಿಳಿಸಲು ಬಸ್ ನೋಂದಣಿ ಮತ್ತು ಪ್ರಯಾಣಿಕರ ಪಟ್ಟಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಸ್ವದೇಶಿ ಮಂತ್ರ ಜಪಿಸಿದ ಮೋದಿ..!

ಆಹಾರ ಪದಾರ್ಥಗಳು, ಔಷಧಿಗಳು, ಸೋಪು, ಆರೋಗ್ಯ ಸೇವೆಗಳು ಮತ್ತು ಜೀವ ವಿಮೆಯಂತಹ ಅತ್ಯಗತ್ಯ ಸೇವೆಗಳು ಸಂಪೂರ್ಣವಾಗಿ ತೆರಿಗೆ ಮುಕ್ತವಾಗಿರುತ್ತವೆ ಅಥವಾ ಕೇವಲ ಶೇ. 5ರಷ್ಟು ತೆರಿಗೆಯನ್ನು ಹೊಂದಲಿವೆ. ಇದಕ್ಕಿಂತಲೂ ದೊಡ್ಡ ಸುದ್ದಿ ಎಂದರೆ, ಈ ಹಿಂದೆ ಶೇ. 12ರಷ್ಟು ತೆರಿಗೆ ವಿಧಿಸಲಾಗುತ್ತಿದ್ದ ಶೇ. 99ರಷ್ಟು ವಸ್ತುಗಳನ್ನು ಈಗ ಶೇ. 5ರ ತೆರಿಗೆ ವ್ಯಾಪ್ತಿಗೆ ತರಲಾಗಿದೆ.

ಕೇವಲ ಶೇ. 5ರಷ್ಟು ತೆರಿಗೆ



ಕಾಲಕ್ಕೆ ತಕ್ಕಂತೆ ಸುಧಾರಣೆಗಳು ಅನಿವಾರ್ಯ

ಹೊಸ ಜಿಎಸ್‌ಟಿ ಸುಧಾರಣೆಗಳ ಹಿಂದಿನ ತರ್ಕವನ್ನು ವಿವರಿಸಿದ ಪ್ರಧಾನಿ, ಸುಧಾರಣೆ ಎನ್ನುವುದು ನಿರಂತರವಾಗಿ ನಡೆಯುವ ಪ್ರಕ್ರಿಯೆ. ಕಾಲ ಬದಲಾದಂತೆ, ದೇಶದ ಅಗತ್ಯತೆಗಳು ಬದಲಾಗುತ್ತವೆ. ಆ ಅಗತ್ಯಗಳಿಗೆ ತಕ್ಕಂತೆ ಹೊಸ ಸುಧಾರಣೆಗಳನ್ನು ತರುವುದು ಅಷ್ಟೇ ಮುಖ್ಯ. ದೇಶದ ಇಂದಿನ ಅಗತ್ಯಗಳು ಮತ್ತು ಮುಂದಿನ ಪೀಳಿಗೆಯ ಕನಸುಗಳನ್ನು ಗಮನದಲ್ಲಿಟ್ಟುಕೊಂಡೇ ಈ ಹೊಸ ಜಿಎಸ್‌ಟಿ 2.0 ಅನ್ನು ಜಾರಿಗೆ ತರಲಾಗುತ್ತಿದೆ.

**ದೆಹಲಿ :** ಇಂದಿನಿಂದ ಜಾರಿಗೆ ಬರಲಿರುವ ಜಿಎಸ್‌ಟಿ 2.0 ಕುರಿತು ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಕೇವಲ ಆರ್ಥಿಕ ಸುಧಾರಣೆಗಳ ಬಗ್ಗೆ ಮಾತ್ರವಲ್ಲದೆ, ದೇಶದ ಪ್ರತಿಯೊಬ್ಬ ನಾಗರಿಕನೂ ಪಾಲಿಸಬೇಕಾದ ಒಂದು ಮಹತ್ವದ 'ಸ್ವದೇಶಿ ಮಂತ್ರ'ದ ಬಗ್ಗೆಯೂ ಕರೆ ನೀಡಿದ್ದಾರೆ. ವಿದೇಶಿ ವಸ್ತುಗಳ ಮೇಲಿನ ವ್ಯಾಮೋಹವನ್ನು ಬಿಟ್ಟು, 'ಮೇಡ್ ಇನ್ ಇಂಡಿಯಾ' ಉತ್ಪನ್ನಗಳನ್ನು ಖರೀದಿಸುವ ಮೂಲಕ ದೇಶವನ್ನು ಸ್ವಾವಲಂಬಿಯಾಗಿಸಬೇಕು ಎಂದು ಅವರು ಬಲವಾಗಿ ಪ್ರತಿಪಾದಿಸಿದ್ದಾರೆ.

ತಮ್ಮ ಭಾಷಣದಲ್ಲಿ ದೇಶಭಕ್ತಿಯ ಕಿಚ್ಚು ಹಚ್ಚಿದ ಪ್ರಧಾನಿ ಮೋದಿ, ಇಂದು ಎಷ್ಟೋ ವಿದೇಶಿ ವಸ್ತುಗಳು ನಮ್ಮ ದೈನಂದಿನ ಜೀವನದ ಭಾಗವಾಗಿಬಿಟ್ಟಿವೆ. ನಾವು ಮೊದಲು ಇವುಗಳಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಬೇಕು. ನಾವು ಖರೀದಿಸಬೇಕಿರುವುದು ಸ್ಥಳೀಯ ಉತ್ಪನ್ನಗಳನ್ನು, ಭಾರತದಲ್ಲೇ ತಯಾರಾದ, ನಮ್ಮದೇ ಜನರ ಬೆವರಿನಿಂದ ಸಿದ್ಧವಾದ ವಸ್ತುಗಳನ್ನು, ಎಂದು ಭಾವನಾತ್ಮಕವಾಗಿ ನುಡಿದರು.ಪ್ರತಿಯೊಂದು ಅಂಗಡಿಯೂ ನಮ್ಮ ಸ್ಥಳೀಯ ಉತ್ಪನ್ನಗಳಿಂದಲೇ ಅಲಂಕಾರಗೊಳ್ಳಬೇಕು. 'ಇದು ನಮ್ಮ ಸ್ಥಳೀಯ ಉತ್ಪನ್ನ' ಎಂದು ಹೆಮ್ಮೆಯಿಂದ ಹೇಳಿಕೊಳ್ಳಿ, 'ನಾನು ಕೂಡ ಸ್ಥಳೀಯ' ಎಂದು ಹೆಮ್ಮೆಯಿಂದ ಘೋಷಿಸಿ. ಈ ಮನೋಭಾವ ಪ್ರತಿಯೊಬ್ಬ ಭಾರತೀಯನಲ್ಲಿ ಮೂಡಿದಾಗ ಮಾತ್ರ, ಭಾರತವು ಜಗತ್ತು ಬೆರಗಾಗುವಂತೆ ವೇಗವಾಗಿ ಅಭಿವೃದ್ಧಿ ಹೊಂದಲು ಸಾಧ್ಯ, ಎಂದು ಪ್ರಧಾನಿ ಕರೆ ನೀಡಿದರು.




# ನಾವು ಒಂದು ತುಂಡು ಭೂಮಿಯನ್ನು ಬಿಟ್ಟುಕೊಡಲ್ಲ ;ಟ್ರಂಪ್‌ಗೆ ಅಫ್ಘಾನಿಸ್ತಾನ ಸವಾಲು

**ಕಾಬೂಲ್ :** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಫ್ಘಾನಿಸ್ತಾನದ ಆಯಕಟ್ಟಿನ ಸ್ಥಳದಲ್ಲಿರುವ ಬಗ್ರಾಮ್ ವಾಯುನೆಲೆಯನ್ನು ಮರಳಿ ಪಡೆಯುವ ಬಗ್ಗೆ ನೀಡಿದ ಹೇಳಿಕೆಯು ಜಾಗತಿಕ ರಾಜಕೀಯದಲ್ಲಿ ಹೊಸದೊಂದು ವಿವಾದವನ್ನು ಸೃಷ್ಟಿಸಿದೆ. ಹೌದು, ಟ್ರಂಪ್ ಅವರ ಹೇಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಅವರು, ತಮ್ಮ ದೇಶದ ಸಾರ್ವಭೌಮತ್ವದ ವಿಷಯದಲ್ಲಿ ಯಾವುದೇ ರಾಜಿಗೂ ಸಿದ್ಧವಿಲ್ಲ ಎಂದು ಸ್ಪಷ್ಟಪಡಿಸಿದರು. ನಾವು ನಮ್ಮ ಭೂಮಿಯ ಒಂದೇ ಒಂದು ತುಂಡನ್ನೂ ಯಾರಿಗೂ ಬಿಟ್ಟುಕೊಡುವುದಿಲ್ಲ ಎನ್ನುವ ಮೂಲಕ ಟ್ರಂಪ್ ವಿರುದ್ಧ ಗುಡುಗಿದ್ದಾರೆ. ಮುಂದುವರೆದು, ಬಾಗ್ರಾಮ್ ವಾಯುನೆಲೆ ಅಮೆರಿಕದ ಸೈನ್ಯಕ್ಕಾಗಿ ಎರಡು ದಶಕಗಳ ಕಾಲ ಪ್ರಮುಖ ತಾಣವಾಗಿತ್ತು.

2021ರಲ್ಲಿ ಯುಎಸ್ ಸೇನೆ ಹಿಂತೆಗೆದುಕೊಂಡ ನಂತರ ಇದು ತಾಲಿಬಾನ್ ನಿಯಂತ್ರಣಕ್ಕೆ ಬಂತು. ಈಗ ಟ್ರಂಪ್ ಈ ತಾಣವನ್ನು ಮರಳಿ ಪಡೆಯುವುದಾಗಿ ಹೇಳಿದ್ದರಿಂದ, ಅಫ್ಘಾನ್ ಸರ್ಕಾರವು ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಅದಕ್ಕೆ ತೀಕ್ಷ್ಣ ಪ್ರತಿಕ್ರಿಯೆಯೇ ನೀಡಿರುವ ಅಫ್ಘಾನ್ ವಿದೇಶಾಂಗ ಸಚಿವ ಮುತ್ತಕಿ, ಅಮೆರಿಕಾದ ಬೆದರಿಕೆಗಳನ್ನು ನೆಪ ಮಾತ್ರ ಎಂದು ತಳ್ಳಿಹಾಕಿದರು.

ಅಫ್ಘಾನಿಸ್ತಾನವು ತನ್ನ ಸಾರ್ವಭೌಮತ್ವವನ್ನು ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಯಾವ ಸಂದರ್ಭದಲ್ಲೂ ಬಿಟ್ಟುಬಿಡುವುದಿಲ್ಲ. ಹಾಗಾಗಿ, ದೋಹಾ ಒಪ್ಪಂದದಲ್ಲಿ ಯುಎಸ್ ತನ್ನ ಬದ್ಧತೆಗಳನ್ನು ಪಾಲಿಸಬೇಕೆಂದು'' ಅವರು ಹೇಳಿದರು.



### ಏನಿದು ದೋಹಾ ಒಪ್ಪಂದ..?

ತನ್ನ ಅಧಿಕೃತ ಹೇಳಿಕೆಯಲ್ಲಿ, ಅಫ್ಘಾನಿಸ್ತಾನದ ಇಸ್ಲಾಮಿಕ್ ಎಮಿರೇಟ್ (ತಾಲಿಬಾನ್ ಸರ್ಕಾರ) ಅಮೆರಿಕಕ್ಕೆ ದೋಹಾ ಒಪ್ಪಂದವನ್ನು ನೆನಪಿಸಿದೆ. 2020ರಲ್ಲಿ ಅಮೆರಿಕ ಮತ್ತು ತಾಲಿಬಾನ್ ನಡುವೆ ಸಹಿ ಹಾಕಲಾಗಿದ್ದ ಈ ಐತಿಹಾಸಿಕ ಒಪ್ಪಂದದ ಪ್ರಕಾರ, ಅಮೆರಿಕವು ಅಫ್ಘಾನಿಸ್ತಾನದ ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸುವುದಾಗಿ ಮತ್ತು ಅದರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ವಾಗ್ದಾನ ಮಾಡಿತ್ತು. ಈ ಒಪ್ಪಂದದ ಅಡಿಯಲ್ಲೇ ಅಮೆರಿಕ ತನ್ನ ಪಡೆಗಳನ್ನು ಹಿಂಪಡೆದಿತ್ತು.

ಈಗ ಟ್ರಂಪ್ ಅವರ ಹೇಳಿಕೆಯು ದೋಹಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಹಾಗಾಗಿ, ಅಮೆರಿಕವು ತಾನು ಮಾಡಿಕೊಂಡ ಒಪ್ಪಂದಕ್ಕೆ ಬದ್ಧವಾಗಿರಬೇಕು ಎಂದು ಅಫ್ಘಾನಿಸ್ತಾನ ನಿರೀಕ್ಷಿಸುತ್ತದೆ ಎಂದು ಹೇಳಿಕೆಯಲ್ಲಿ ಒತ್ತಿಹೇಳಲಾಗಿದೆ.

### ಏನಿದು ಬಾಗ್ರಾಮ್ ವಾಯುನೆಲೆ..?

ಕಾಬೂಲ್‌ನ ಉತ್ತರಕ್ಕೆ ಇರುವ ಬಗ್ರಾಮ್ ವಾಯುನೆಲೆಯು ಕೇವಲ ಒಂದು ಸೇನಾ ನೆಲೆಯಲ್ಲ. ಸುಮಾರು 20 ವರ್ಷಗಳ ಕಾಲ, ಅಫ್ಘಾನಿಸ್ತಾನದಲ್ಲಿ ಅಮೆರಿಕ ಮತ್ತು ನ್ಯಾಟೋ ಪಡೆಗಳ ಮಿಲಿಟರಿ ಕಾರ್ಯಾಚರಣೆಗಳ ಪ್ರಮುಖ ಕೇಂದ್ರವಾಗಿತ್ತು. ಇದರ ಬೃಹತ್ ಗಾತ್ರ ಮತ್ತು ಅತ್ಯಾಧುನಿಕ ಸೌಲಭ್ಯಗಳು, ಮಧ್ಯ ಏಷ್ಯಾ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಕಣ್ಣಿಡಲು ಅಮೆರಿಕಕ್ಕೆ ಆಯಕಟ್ಟಿನ ಸ್ಥಳವಾಗಿತ್ತು. ಇದೇ ಕಾರಣಕ್ಕೆ ಟ್ರಂಪ್ ಸೇರಿದಂತೆ ಹಲವು ಅಮೆರಿಕನ್ ನಾಯಕರಿಗೆ ಬಗ್ರಾಮ್ ಮೇಲೆ ಆಸಕ್ತಿ ಇದೆ. ಆದರೆ, ಈ ವಾಯುನೆಲೆಗೆ ಒಂದು ಕರಾಳ ಇತಿಹಾಸವೂ ಇದೆ. ಇಲ್ಲಿ ಅಮೆರಿಕವು ಕುಖ್ಯಾತ ಜೈಲೊಂದನ್ನು ನಿರ್ವಹಿಸುತ್ತಿತ್ತು. ಸಾವಿರಾರು ಜನರನ್ನು ಯಾವುದೇ ಆರೋಪ ಅಥವಾ ವಿಚಾರಣೆಯಿಲ್ಲದೆ ಇಲ್ಲಿ ಬಂಧಿಸಿಡಲಾಗಿತ್ತು ಮತ್ತು ಅನೇಕರನ್ನು ಚಿತ್ರಹಿಂಸೆ ಹಾಗೂ ದೌರ್ಜನ್ಯಕ್ಕೆ ಒಳಪಡಿಸಲಾಗಿತ್ತು ಎಂಬ ಗಂಭೀರ ಆರೋಪಗಳಿವೆ. ಈ ಕಾರಣದಿಂದಾಗಿ, ಬಗ್ರಾಮ್ ವಾಯುನೆಲೆಯು ಅಫ್ಘಾನ್ ಜನರ ಪಾಲಿಗೆ ವಿದೇಶಿ ಆಕ್ರಮಣ ಮತ್ತು ದಬ್ಬಾಳಿಕೆಯ ಸಂಕೇತವೂ ಆಗಿದೆ.

## ಮಿನಿ ನ್ಯೂಸ್

### ಮಹಾರಾಷ್ಟ್ರ ಡಿಸಿಎಂ ಶಿಂಧೆ ಎಕ್ಸ್ ಖಾತೆ ಹ್ಯಾಕ್ ಪಾಕಿಸ್ತಾನ, ಟರ್ಕಿ ಧ್ವಜ ಪೋಸ್ಟ್



**ಮುಂಬೈ:** ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ಅವರ ಎಕ್ಸ್ ಖಾತೆಯನ್ನು ಹ್ಯಾಕ್ ಮಾಡಿದ್ದು, ಹ್ಯಾಕರ್‌ಗಳು ಅವರ ಖಾತೆಯಿಂದ ಪಾಕಿಸ್ತಾನ ಮತ್ತು ಟರ್ಕಿಯ ಧ್ವಜಗಳನ್ನು ಪೋಸ್ಟ್ ಮಾಡಿದ್ದಾರೆ. ಖಾತೆ ಹ್ಯಾಕ್ ಆಗಿದೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಸೈಬರ್ ಅಪರಾಧ ಪೊಲೀಸರ ಗಮನಕ್ಕೆ ತಂದಿದ್ದೇವೆ. ಹ್ಯಾಕ್ ಆದ ಬಳಿಕ ಸುಮಾರು 30-45 ನಿಮಿಷಗಳ ಒಳಗಾಗಿ ಖಾತೆಯನ್ನು ಮರುಸ್ಥಾಪಿಸಲಾಗಿದೆ. ಅಲ್ಲದೇ ಪೋಸ್ಟ್‌ಗಳನ್ನು ಡಿಲೀಟ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಷ್ಯಾಕಪ್ ಸೂಪರ್ 4 ಪಂದ್ಯದಲ್ಲಿ ಭಾರತ-ಪಾಕ್ ಮುಖಾಮುಖಿಯಾಗುತ್ತಿದೆ. ಈ ಬೆನ್ನಲ್ಲೇ ಎರಡು ದೇಶಗಳ ಧ್ವಜವನ್ನು ಹ್ಯಾಕರ್‌ಗಳು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ ಎಂದು ವರದಿಗಳು ತಿಳಿಸಿವೆ.

### ವ್ಯಕ್ತಿ ಜಾತಿ, ಧರ್ಮ ಅಥವಾ ಭಾಷೆಯಿಂದ ದೊಡ್ಡವನಲ್ಲ ಕೇಂದ್ರ ಸಚಿವ ನಿತಿನ್ ಗಡ್ಕರಿ ಸಲಹೆ



**ನವದೆಹಲಿ:** ಮೀಸಲಾತಿ ಪಡೆದುಕೊಳ್ಳದೆ ಇರುವುದೇ ಬ್ರಾಹ್ಮಣನಾದ ನನಗೆ ದೇವರು ಮಾಡಿದ ದೊಡ್ಡ ಆಶೀರ್ವಾದ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಮಾತನಾಡಿದ್ದಾರೆ.

ನಾಗ್ಪುರದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ನಾನು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಒಪ್ಪುವುದಿಲ್ಲ. ಯಾವುದೇ ವ್ಯಕ್ತಿ ಜಾತಿ, ಧರ್ಮ ಅಥವಾ ಭಾಷೆಯಿಂದ ದೊಡ್ಡವನಲ್ಲ. ತನ್ನ ಗುಣಗಳಿಂದ ಮಾತ್ರ ದೊಡ್ಡವನಾಗುತ್ತಾನೆ. ನಾನು ಆಗಾಗ್ಗೆ ಒಂದು ತಮಾಷೆ ಮಾಡುತ್ತೇನೆ. ಅದೇನೆಂದರೆ, ದೇವರು ನನಗೆ ಮಾಡಿದ ದೊಡ್ಡ ಉಪಕಾರವೆಂದರೆ ನನಗೆ ಮೀಸಲಾತಿ ನೀಡದಿರುವುದು ಎಂದು ತಿಳಿಸಿದ್ದಾರೆ.

ಭಾರತದಲ್ಲಿನ ವಿವಿಧ ಪ್ರದೇಶಗಳಲ್ಲಿ ಬ್ರಾಹ್ಮಣರ ವಿಭಿನ್ನ ಸಾಮಾಜಿಕ ಪ್ರಭಾವದ ಬಗ್ಗೆ ಗಡ್ಕರಿ ಮಾತನಾಡಿ, ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಸಮುದಾಯವು ಹೆಚ್ಚಿನ ಪ್ರಾಮುಖ್ಯತೆ ಅಥವಾ ಪ್ರಾಬಲ್ಯವನ್ನು ಹೊಂದಿಲ್ಲ. ಆದರೆ, ಉತ್ತರ ಪ್ರದೇಶ ಮತ್ತು ಬಿಹಾರದಂತಹ ಉತ್ತರ ರಾಜ್ಯಗಳಲ್ಲಿ ಅವರ ಉಪಸ್ಥಿತಿಯು ಗಮನಾರ್ಹವಾಗಿದೆ.

### ಕಂದಮ್ಮಗಳನ್ನು ಅಪ್ಪಿಕೊಂಡೇ ಪ್ರಾಣಬಿಟ್ಟ ಅಮ್ಮ

**ಡೆಹ್ರಾಡೂನ್:** ಉತ್ತರಾಖಂಡದ ಚಮೋಲಿಯಲ್ಲಿ ಸಂಭವಿಸಿದ ಭೂಕುಸಿತದ ಅವಶೇಷಗಳ ಅಡಿಯಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳು ಸಿಲುಕಿ ಮೃತಪಟ್ಟಿರುವ ದಾರುಣ ಘಟನೆ ನಡೆದಿದೆ.

ವಿಪತ್ತು ಪೀಡಿತ ಚಮೋಲಿ ಜಿಲ್ಲೆಯಲ್ಲಿ ರಕ್ಷಣಾ ಕಾರ್ಯಾಚರಣೆ ವೇಳೆ ಮೂವರ ಮೃತದೇಹಗಳು ಪತ್ತೆಯಾಗಿವೆ. ಮಹಿಳೆಯ ಪತಿ ಕುನ್ವರ್ ಸಿಂಗ್ ಅವರನ್ನು ಅವಶೇಷಗಳಿಂದ ಪವಾಡಸದೃಶವಾಗಿ ರಕ್ಷಣೆ ಮಾಡಲಾಗಿದೆ. ಭಾರೀ ಮಳೆ ಮತ್ತು ಮೇಘಸ್ಫೋಟದಿಂದಾಗಿ ಜಿಲ್ಲೆಯ ನಂದನಗರ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿತ್ತು. 38 ವರ್ಷದ ಮಹಿಳೆ ತನ್ನ 10 ವರ್ಷದ ಮಕ್ಕಳಾದ ವಿಶಾಲ್ ಮತ್ತು ವಿಕಾಸ್ ಅಪ್ಪಿಕೊಂಡೇ ಪ್ರಾಣಬಿಟ್ಟಿದ್ದಾರೆ. ವಿಪತ್ತು ಸಂಭವಿಸಿದ ಸಮಯದಲ್ಲಿ ಮಕ್ಕಳನ್ನು ರಕ್ಷಿಸಲು ತಾಯಿ ಪ್ರಯತ್ನ ನಡೆಸಿದ್ದರು. ಪ್ರದೇಶದಲ್ಲಿ ಸಂಭವಿಸಿದ ವಿಪತ್ತಿನ ನಂತರ ಎಂಟು ಮಂದಿ ನಾಪತ್ತೆಯಾಗಿದ್ದಾರೆ. ಇದರಿಂದಾಗಿ ಜಿಲ್ಲಾಡಳಿತ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಿವೆ. ಪ್ರವಾಹ ಮತ್ತು ಭೂಕುಸಿತಗಳು ಮೂಲಸೌಕರ್ಯಗಳಿಗೆ ಭಾರಿ ಹಾನಿಯುಂಟು ಮಾಡಿವೆ. ಸ್ಥಳಾಂತರಗೊಂಡ ಕುಟುಂಬಗಳಿಗಾಗಿ ಪರಿಹಾರ ಶಿಬಿರಗಳನ್ನು ಸ್ಥಾಪಿಸಲಾಗಿದ್ದು, ಪೀಡಿತ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲಾಗಿದೆ.

### ಗಡಿ ನಿಯಂತ್ರಣ ರೇಖೆ ಬಳಿ ಭಾರತ-ಪಾಕ್ ಸೈನಿಕರ ನಡುವೆ ಗುಂಡಿನ ಚಕಮಕಿ

**ಕುಪ್ವಾರ:** ಆಪರೇಷನ್ ಸಿಂಧೂರ್ ಬಳಿಕ ಮತ್ತೆ ಗಡಿಯಲ್ಲಿ ಪಾಕ್ ಸೇನೆಯ ಉಪಟಳ ಹೆಚ್ಚಿದೆ. ಕುಪ್ವಾರದ ಗಡಿ ನಿಯಂತ್ರಣ ರೇಖೆ ಬಳಿ ಭಾರತ ಹಾಗೂ ಪಾಕ್ ಸೇನೆ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ಘಟನೆ ಕದನ ವಿರಾಮ ಉಲ್ಲಂಘನೆಗೆ ಸಮವಲ್ಲ ಎಂದು ಸೇನೆ ಹೇಳಿದೆ. ಎಲ್‌ಒಸಿ ಉದ್ದಕ್ಕೂ ಎರಡೂ ಕಡೆಯಿಂದ ಸಣ್ಣ ಶಸ್ತ್ರಾಸ್ತ್ರಗಳ ಗುಂಡಿನ ಚಕಮಕಿ ನಡೆದಿದ್ದು, ಇದು ಕದನ ವಿರಾಮ ಉಲ್ಲಂಘನೆಯಲ್ಲ ಎಂದು ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಸಂಜೆ 6.15ರ ಸುಮಾರಿಗೆ ಗುಂಡಿನ ಚಕಮಕಿ ಪ್ರಾರಂಭವಾಯಿತು ಮತ್ತು ಸುಮಾರು ಒಂದು ಗಂಟೆ ಕಾಲ ನಿರಂತರವಾಗಿ ಮುಂದುವರೆಯಿತು. ಘಟನೆಯಲ್ಲಿ ಯಾವುದೇ ಗಾಯಗಳಾಗಿಲ್ಲ ಎಂದು ವರದಿಯಾಗಿದೆ. ಇಲ್ಲಿಯವರೆಗೆ, ಸೇನೆಯು ಘಟನೆಯ ಬಗ್ಗೆ ಅಧಿಕೃತ ಹೇಳಿಕೆಯನ್ನು ನೀಡಿಲ್ಲ. 26 ಜೀವಗಳನ್ನು ಬಲಿ ಪಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಭಾರತ ಮೇ 7 ರಂದು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿದಾಗಿನಿಂದ ಮೇ ತಿಂಗಳಲ್ಲಿ ಉದ್ವಿಗ್ನತೆ ಭುಗಿಲೆದ್ದ ತಿಂಗಳುಗಳ ನಂತರ ಗುಂಡಿನ ಚಕಮಕಿ ನಡೆದಿದೆ .

### ಜಮ್ಮು ರಾಷ್ಟ್ರೀಯ ಹೆದ್ದಾರಿ ಬಂದ್


**ಶ್ರೀನಗರ:** ಜಮ್ಮು ರಾಷ್ಟ್ರೀಯ ಹೆದ್ದಾರಿ ಬಂದ್ ಹಿನ್ನೆಲೆ ಸೇಬು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರಿಂದಾಗಿ 40% ರಫ್ತು ಬೆಳೆ ಕುಸಿತವಾಗಿದ್ದು, ಸೇಬು ಬೆಳೆಗಾರರಿಗೆ ತೀವ್ರ ತೊಂದರೆಯಾಗಿದೆ.

ಮಳೆ, ಪ್ರವಾಹದಿಂದಾಗಿ ಆಗಸ್ಟ್ ಅಂತ್ಯದಿಂದ ಸೆಪ್ಟೆಂಬರ್ ಮಧ್ಯದವರೆಗೆ ಮೂರು ವಾರಗಳ ಕಾಲ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲಾಗಿತ್ತು.

ಈ ಪರಿಣಾಮ ಟ್ರಕ್‌ಗಳಲ್ಲಿ ತುಂಬಿದ್ದ ಸೇಬು ಹಣ್ಣುಗಳು ಕೊಳೆತುಹೋಗಿವೆ. ಇದರ ನಡುವೆ ಕೇಂದ್ರ ಸರ್ಕಾರವು ಕಣಿವೆ ರಾಜ್ಯದ ಆರ್ಥಿಕತೆಯನ್ನು ಉದ್ದೇಶಪೂರ್ವಕವಾಗಿ ದುರ್ಬಲಗೊಳಿಸುತ್ತಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ. ಕಾಶ್ಮೀರದಲ್ಲಿ ವಾರ್ಷಿಕ 20 ಲಕ್ಷ ಮೆಟ್ರಿಕ್‌ಟನ್‌ಗಳಿಗಿಂತ ಹೆಚ್ಚು ಸೇಬು ಬೆಳೆಯುತ್ತಾರೆ. ಕಾಶ್ಮೀರದಿಂದ ದೆಹಲಿ, ಮುಂಬೈ, ಬೆಂಗಳೂರು, ಅಹಮದಾಬಾದ್ ಸೇರದಂತೆ ಹಲವು ರಾಜ್ಯಗಳಿಗೆ ರಫ್ತು ಮಾಡಲಾಗುತ್ತೆ.

# ಆಮಿರ್ ಖಾನ್ ರಾಷ್ಟ್ರಪ್ರೇಮ ಮೆಚ್ಚಲೇಬೇಕು

ಆಮಿರ್ ಖಾನ್ ಅವರು ಹಲವು ವರ್ಷಗಳಿಂದ ದೇಶದಲ್ಲಿ ಇದ್ದಾರೆ. ಅವರು ಈ ಮೊದಲು ತಮ್ಮ ಹೇಳಿಕೆಗಳಿಂದ ಸಾಕಷ್ಟು ಟೀಕೆಗೆ ಒಳಗಾಗಿದ್ದೂ ಇದೆ. ಈಗ ಅವರ ರಾಷ್ಟ್ರ ಪ್ರೇಮ ತೋರಿಸುವಂತಹ ವಿಡಿಯೋ ಒಂದು ವೈರಲ್ ಆಗಿದೆ. ಈ ವಿಡಿಯೋದಲ್ಲಿ ಆಮಿರ್ ಖಾನ್ ಅವರು ಈ ಬಗ್ಗೆ ವಿವರಿಸಿದ್ದಾರೆ. ಅಷ್ಟಕ್ಕೂ ಏನದು ವಿಚಾರ ಆ ಘಟನೆ ಬಗ್ಗೆ ಇಲ್ಲಿದೆ ಮಾಹಿತಿ. ಆಮಿರ್ ಖಾನ್ ಅವರು 'ದಂಗಲ್' ಹೆಸರಿನ ಸಿನಿಮಾ ಮಾಡಿದ್ದರು. ಈ ಚಿತ್ರವನ್ನು ಅವರೇ ನಿರ್ಮಾಣ ಕೂಡ ಮಾಡಿದ್ದರು. ಈ ಸಿನಿಮಾ ಎಲ್ಲಾ ಕಡೆಗಳಿಂದ ಮೆಚ್ಚುಗೆ ಪಡೆಯಿತು. ಈ ಸಿನಿಮಾದ ಬಿಸ್ನೆಸ್ 2 ಸಾವಿರ ಕೋಟಿ ರೂಪಾಯಿಗೂ ಅಧಿಕ. ಚಿತ್ರದ ಬಜೆಟ್ ಕೇವಲ 70 ಕೋಟಿ ರೂಪಾಯಿ ಅಂದರೆ ನೀವು ನಂಬಲೇಬೇಕು. ಆಮಿರ್ ಖಾನ್ ಅವರು 'ದಂಗಲ್' ಸಿನಿಮಾ ವಿಚಾರದಲ್ಲಿ ಆದ ಒಂದು ಘಟನೆ ವಿವರಿಸಿದ್ದರು.ದಂಗಲ್' ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಗೀತಾ ಫೋಗಟ್ (ಫಾತಿಮಾ ಸನಾ ಶೇಖ್) ಕುಸ್ತಿ ಗೆಲ್ಲುತ್ತಾಳೆ. ಈ ವೇಳೆ ಭಾರತದ ರಾಷ್ಟ್ರಗೀತೆ ಪ್ರಸಾರ ಆಗುತ್ತದೆ. ಭಾರತದ ಧ್ವಜ ಮೇಲಕ್ಕೆ ಹಾರುತ್ತದೆ. ಈ ಸಿನಿಮಾ ಒಟಿಟಿಯಲ್ಲಿ ಬಿಡುಗಡೆ ಕಾಣುವಾಗ ಪಾಕಿಸ್ತಾನದ ಸೆನ್ಸಾರ್ ಬೋರ್ಡ್ ನವರು ಕಿರಿಕ್ ಮಾಡಿದರಂತೆ.'ನನಗೆ ಡಿಸ್ನಿ ಅವರು ಕರೆ ಮಾಡಿ ನಿಮ್ಮ ಸಿನಿಮಾ ಪಾಕಿಸ್ತಾನದಲ್ಲಿ ಪ್ರಸಾರ ಕಾಣಲು ಸೆನ್ಸಾರ್‌ನವರು ಸಮಸ್ಯೆ ಮಾಡುತ್ತಿದ್ದಾರೆ ಎಂದರು.



ಕ್ಲೈಮ್ಯಾಕ್ಸ್‌ನಲ್ಲಿ ಬರೋ ಭಾರತದ ರಾಷ್ಟ್ರ ಗೀತೆ ತೆಗೆಯಬೇಕು ಮತ್ತು ಭಾರತದ ಬಾವುಟ ತೋರಿಸಬಾರದು ಎನ್ನುತ್ತಿದ್ದಾರೆ ಎಂದರು. ನಾನು ಮರುಕ್ಷಣವೇ ಬೇಡ ಎಂದೆ. ಇದರಲ್ಲಿ ಯೋಚಿಸುವ ವಿಚಾರವೇ ಇಲ್ಲ' ಎಂದಿದ್ದರು ಆಮಿರ್ ಖಾನ್.ನಮ್ಮ ಸಿನಿಮಾ ಪಾಕಿಸ್ತಾನದಲ್ಲಿ ಪ್ರಸಾರ ಕಾಣೋದು ಬೇಡ ಎಂದೆ. ಇದರಲ್ಲಿ ಯೋಚಿಸುವ ವಿಚಾರವೇ ಇಲ್ಲ. ಬಿಸ್ನೆಸ್ ಮೇಲೆ ಪ್ರಭಾವ ಬೀರುತ್ತದೆ,ಲಾಸ್ ಆಗುತ್ತದೆ ಎಂದರು. ನಮ್ಮ ರಾಷ್ಟ್ರಗೀತೆ ತೆಗೆಯಬೇಕು.

# ತುಮಕೂರು ದಸರಾಗೆ ರಮ್ಯಾ , ರವಿಚಂದ್ರನ್





ತುಮಕೂರು ದಸರಾ ಹಿನ್ನೆಲೆ ಸೆ.30 ರಂದು ಸಂಜೆ ನಡೆಯುವ ಸಾಂಸ್ಕೃತಿಕ ವೈಭವ ಕಾರ್ಯಕ್ರಮಕ್ಕೆ ಖ್ಯಾತ ಚಲನಚಿತ್ರ ನಟರಾದ ವಿ ರವಿಚಂದ್ರನ್ (ಹಾಗೂ ನಟಿ ರಮ್ಯಾ ಆಗಮಿಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ನ್ಯಾಯಿಕ ಸಭಾಂಗಣದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉತ್ಸವದ ಅಂಗವಾಗಿ ಅಕ್ಟೋಬರ್ 2ರಂದು ನಡೆಯಲಿರುವ ವೈಭವಯುತ ಮೆರವಣಿಗೆಯಲ್ಲಿ ಜಂಬೂ ಸವಾರಿಯೊಂದಿಗೆ ಸಾರೋಟಿನಲ್ಲಿ 50 ಗ್ರಾಮ ದೇವತೆಗಳು ಸಾಗಲಿವೆ.

ಈ ಬಾರಿ ಜಿಲ್ಲೆಯ ಸಾಂಸ್ಕೃತಿಕ, ಸಾಹಿತ್ಯ, ಕಲಾ ಪರಂಪರೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಎರಡನೇ ಬಾರಿ ತುಮಕೂರು ದಸರಾ ಉತ್ಸವವನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ಹೇಳಿದರು. ದಸರಾ ಉತ್ಸವವು ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ 11 ದಿನಗಳ ಕಾಲ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆಯಲಿದ್ದು, ಉತ್ಸವವನ್ನು ನೋಡಲು ಸಾರ್ವಜನಿಕರಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಪ್ರತೀ ದಿನ 250 ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ದಸರಾ ಪ್ರಯುಕ್ತ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಸೆಪ್ಟೆಂಬರ್ 22ರಂದು ಬೆಳಿಗ್ಗೆ 9:30ಕ್ಕೆ ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ ಪರಮೇಶ್ವರ್ ಅವರು ಧಾರ್ಮಿಕ ಉತ್ಸವ, ನವರಾತ್ರಿ ಉತ್ಸವ, ಧ್ವಜಾರೋಹಣ, ದುರ್ಗಾಪೂಜೆಯನ್ನು ನೆರವೇರಿಸಲಿದ್ದಾರೆ.

## ಮತ್ತೆ ಜಿಮ್‌ನಲ್ಲಿ ಬೆವರಿಳಿಸ್ತಿರೋ ಬಘೀರ

# ಶ್ರೀಮುರಳಿ ಹೊಸ ಲುಕ್


ರೋರಿಂಗ್ ಸ್ಟಾರ್ ಶ್ರೀಮುರಳಿ ಒಂದು ಚಿತ್ರ ಅಂತ ಫಿಕ್ಸ್ ಆದ್ರೆ ಮುಗಿತು. ಆ ಚಿತ್ರದ ಮೂಡ್ ಅಲ್ಲಿಯೇ ಇರ್ತಾರೆ. ಬೇರೆ ಚಿತ್ರವನ್ನ ಮಾಡೋಕೆ ಹೋಗೋದೇ ಇಲ್ಲ. ಒಂದೇ ಚಿತ್ರಕ್ಕೆ ಡೆಡಿಕೇಟೆಡ್ ಆಗಿಯೇ ಉಳಿದು ಬಿಡ್ತಾರೆ. ಈ ಹಿಂದಿನ ಬಘೀರ ಚಿತ್ರಕ್ಕಾಗಿಯೇ ಇನ್ನಿಲ್ಲದಂತೆ ತಯಾರಿ ನಡೆಸಿದ್ದರು.

ಜಿಮ್ ಅಲ್ಲಿ ಬೆವರಿಳಿಸಿದ್ದರು. ದೇಹವನ್ನ ತುಂಬಾನೆ ಚೆನ್ನಾಗಿಯೇ ಮಾಡಿಕೊಂಡಿದ್ದರು. ಲುಕ್ ಮೇಲೂ ವರ್ಕ್ ಮಾಡಿದ್ದರು. ಆದರೆ, ಈಗ ಮತ್ತೆ ದೇಹ ದಂಡಿಸುತ್ತಿದ್ದಾರೆ. ಲಾಂಗ್ ಬಿಯರ್ಡ್ ಬಿಟ್ಟಿದ್ದಾರೆ. ಲಾಂಗ್ ಹೇರ್ ಮೆಂಟೇನ್ ಮಾಡ್ತಿದ್ದಾರೆ. ಇದರ ಮಧ್ಯೆ ತಮ್ಮ ಇನ್‌ಸ್ಟಾಗ್ರಾಮ್ ಪೇಜ್ ಅಲ್ಲಿ ಜಿಮ್ ಅಲ್ಲಿ ತೆಗೆದ ಒಂದು ಫೋಟೋ ಹಂಚಿಕೊಂಡಿದ್ದಾರೆ. . ಶ್ರೀಮುರಳಿ ಹೊಸ ಲುಕ್ ಅಲ್ಲಿಯೇ ಕಂಗೊಳಿಸುತ್ತಿದ್ದಾರೆ. ಲಾಂಗ್ ಹೇರ್ ಬಿಟ್ಟಿದ್ದಾರೆ. ಆ ಹೇರ್ ಕೊಂಚ ಕರ್ಲಿ ಕೂಡ ಅನಿಸುತ್ತವೆ. ಅದಕ್ಕೆ ಸೂಕ್ತ ಅನಿಸೋ ಹಾಗೆ ಲಾಂಗ್ ಬಿಯರ್ಡ್ ಕೂಡ ಬಿಟ್ಟಿದ್ದಾರೆ.

ಎರಡೂ ಸೇರಿ ರೋರಿಂಗ್ ಸ್ಟಾರ್ ಶ್ರೀಮುರಳಿ ವಿಭಿನ್ನವಾಗಿಯೇ ಕಾಣಿಸುತ್ತಿದ್ದಾರೆ. ಇತ್ತೀಚಿನ ಗಣೇಶ್ ಹಬ್ಬದಂದು ಶ್ರೀಮುರಳಿ ಈ ಲುಕ್ ಅಲ್ಲಿ ವಿಶೇಷವಾಗಿಯೇ ಕಾಣಿಸುತ್ತಿದ್ದರು. ಮಕ್ಕಳ ಜೊತೆಗೆ ಹಬ್ಬದ ಸಡಗರದಲ್ಲಿಯೇ ಇದ್ದ ಸಮಯದಲ್ಲಿಯೇ ತೆಗೆದ ಕೆಲವು ಫೋಟೋಗಳು ಸ್ಪೆಷಲ್ ಆಗಿದ್ದವು. ಶ್ರೀಮುರಳಿ ಲುಕ್ ಕೂಡ ವಿಶೇಷವಾಗಿಯೇ ಅನಿಸೋ ರೀತಿನೇ ಈ ಎಲ್ಲಾ ಫೋಟೋಗಳು ಇದ್ದವು. ಜಿಮ್ ಅಲ್ಲಿ ತೆಗೆದ ಹೊಸ ಫೋಟೋ ಶ್ರೀಮುರಳಿ ಮತ್ತೆ ತಯಾರಿ ಶುರು ಮಾಡಿದ್ದಾರೆ. ದೇಹದಂಡಿಸೋಕೆ ಸಜ್ಜಾಗಿದ್ದಾರೆ. ಜಿಮ್ ಅಲ್ಲಿ ಬೆವರಿಳಿಸೋ ಪ್ಲಾನ್ ಹಾಕಿಕೊಂಡಿದ್ದಾರೆ. ಅದರ ಆರಂಭಿಕ ಹಂತ ಅನ್ನುವ ಹಾಗೆ ಹೆವಿ ವರ್ಕೌಟ್ ಮುಂಚೆ ಜಿಮ್‌ನ ಮಿರರ್ ಅಲ್ಲಿ ಒಂದು ಫೋಟೋ ತೆಗೆದುಕೊಂಡಿದ್ದಾರೆ.



# ಶಕ್ತಿ ಶಾಲಿನಿಯಾಗ್ತಿದ್ದಾರೆ ಸೈಯಾರಾ ಚೆಲುವೆ..!



ಅನೀತ್ ಪಡ್ಡಾ.. ಸಿನಿಮಾದ ಕ್ಯೂಟ್ ಬ್ಯೂಟಿ.. ತನ್ನ ಮುದ್ದು ಮೊಗದಿಂದ.. ಸ್ನಿಗ್ಧ ಸೌಂದರ್ಯದಿಂದ.. ಗ್ಲಾಮರಸ್ ಅವತಾರದಿಂದ ಚಿತ್ರರಸಿಕರ ಎದೆಗೆ ಕಿಚ್ಚು ಹಚ್ಚಿದ ಬ್ಯೂಟಿ. ನ್ಯಾಷನಲ್ ಕ್ರಶ್ ಅಂದ್ರೆ ಅದು ರಶ್ಮಿಕಾ ಅಲ್ಲ.. ಇನ್ಯಾರು ಅಲ್ಲ.. ಅನೀತ್ ಪಡ್ಡಾ ಎಂಬ ಮಟ್ಟಿಗೆ ಅಭಿಮಾನಿಗಳನ್ನ ಗಳಿಸಿಕೊಂಡಿರೋ ಅನೀತ್ ಪಡ್ಡಾ ಮತ್ತೊಂದು ಬಂಪರ್ ಅವಕಾಶ ಪಡೆದಿದ್ದಾರೆ. ಸ್ತ್ರೀ2, ಛಾವ ಸಿನಿಮಾಗಳನ್ನ ನಿರ್ಮಿಸಿರೋ ಮಾಡೋಕ್ ಫಿಲಂಸ್ ಬ್ಯಾನರ್ ನಡಿ ಶಕ್ತಿ ಶಾಲಿನಿ ಎಂಬ ಸಿನಿಮಾ ಬರಲಿದ್ದು, ಈ ಸಿನಿಮಾದಲ್ಲಿ ಈ ಹಿಂದೆ ಕಿಯಾರಾ ಅಡ್ವಾಣಿ ನಾಯಕಿ ಅಂತ ಹೇಳಲಾಗಿತ್ತು. ಆದರೆ ಈಗ ಕಿಯಾರಾರನ್ನ ರಿಪ್ಲೇಸ್ ಮಾಡಿರೋ ಚಿತ್ರತಂಡ ಅನೀತ್ ಪಡ್ಡಾಗೆ ಅವಕಾಶ ನೀಡಿದೆ ಎನ್ನಲಾಗ್ತಿದೆ.ಸ್ತ್ರೀ2, ಛಾವ ಸಿನಿಮಾಗಳನ್ನ ನಿರ್ಮಿಸಿರೋ ಮಾಡೋಕ್ ಫಿಲಂಸ್ ಬ್ಯಾನರ್ ನಡಿ ಶಕ್ತಿ ಶಾಲಿನಿ ಎಂಬ ಸಿನಿಮಾ ಬರಲಿದ್ದು, ಈ ಸಿನಿಮಾದಲ್ಲಿ ಈ ಹಿಂದೆ ಕಿಯಾರಾ ಅಡ್ವಾಣಿ ನಾಯಕಿ ಅಂತ ಹೇಳಲಾಗಿತ್ತು. ಕಿಯಾರಾರನ್ನ ರಿಪ್ಲೇಸ್ ಮಾಡಿರೋ ಚಿತ್ರತಂಡ ಅನೀತ್ ಪಡ್ಡಾಗೆ ಅವಕಾಶ ನೀಡಿದೆ ಎನ್ನಲಾಗ್ತಿದೆ. ಮತ್ತೊಂದು ದೊಡ್ಡ ಸಿನಿಮಾ ಮೂಲಕ ಕಮಾಲ್ ಮಾಡಲು ಸಜ್ಜಾಗಿದ್ದಾರೆ ಕ್ಯೂಟ್, ಹಾಟ್ ಬ್ಯೂಟಿ ಅನೀತ್ ಪಡ್ಡಾ. ಮ್ಯಾಡಾಕ್ ಅವರ ಶಕ್ತಿ ಶಾಲಿನಿ ಚಿತ್ರಕ್ಕೆ ಅನೀತ್ ಅವರನ್ನು ಅಂತಿಮಗೊಳಿಸಲಾಗಿದೆ. ಈ ಹಿಂದೆ, ಕಿಯಾರಾ ಅಡ್ವಾಣಿ ಈ ಪಾತ್ರವನ್ನು ಪಡೆದರು ಎಂದು ವರದಿಗಳು ತಿಳಿಸಿವೆ. ಚಿತ್ರದಲ್ಲಿ ಕಿಯಾರಾ ಬದಲಿಗೆ ಅನೀತ್ ಇರೋದು ಈಗ ಬಹುತೇಕ ಪಕ್ಕಾ ಆಗಿದೆ.ಪೋರ್ಟಲ್‌ನ ಮೂಲಗಳ ಪ್ರಕಾರ, ಅನೀತ್ ಈ ಚಿತ್ರಕ್ಕಾಗಿ ತನ್ನ ಲುಕ್ ಟೆಸ್ಟ್ ಅನ್ನು ಪೂರ್ಣಗೊಳಿಸಿದ್ದು, ಶೀಘ್ರದಲ್ಲೇ ಅವರ ಅಧಿಕೃತ ಘೋಷಣೆ ಮಾಡಲಾಗುವುದು ಎನ್ನಲಾಗಿದೆ. ಶಕ್ತಿ ಶಾಲಿನಿ 2025 ರ ಅಂತ್ಯದ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆಯಿದೆ.

ನಿರ್ದೇಶಕರ ಹೆಸರನ್ನು ಸದ್ಯಕ್ಕೆ ಗೌಪ್ಯವಾಗಿಡಲಾಗಿದ್ದರೂ, ದಿನೇಶ್ ವಿಜನ್ ಈ ಪಾತ್ರಕ್ಕಾಗಿ ಆದಿತ್ಯ ಸರ್ಪೋತ್‌ದಾರ್ ನನ್ನು ಆಯ್ಕೆ ಮಾಡಲು ಉತ್ಸುಕರಾಗಿದ್ದಾರೆ.ನಿರ್ದೇಶನದ ಕುರಿತು ಅಂತಿಮ ನಿರ್ಧಾರವನ್ನು ಹದಿನೈದು ವಾರಗಳಲ್ಲಿ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ನಿರ್ದೇಶಕ ಅಜಿತ್‌ಪಾಲ್ ಸಿಂಗ್ ಅವರನ್ನೂ ಸಹ ಪರಿಗಣಿಸಲಾಗುತ್ತಿದೆ ಎನ್ನಲಾಗಿದೆ. ಈ ಹಿಂದೆ, ಈ ಚಿತ್ರಕ್ಕಾಗಿ ಕಿಯಾರಾ ಅಡ್ವಾಣಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ವರದಿಗಳು ತಿಳಿಸಿವೆ. ಈ ಚಿತ್ರಕ್ಕೆ ಶಕ್ತಿ ಮತ್ತು ದುರ್ಬಲತೆಯನ್ನು ಏಕಕಾಲದಲ್ಲಿ ಸಾಕಾರಗೊಳಿಸಬಲ್ಲ ಪ್ರಮುಖ ಮಹಿಳೆಯ ಅಗತ್ಯವಿದೆ ಎಂದು ನಿರ್ಮಾಣಕ್ಕೆ ಹತ್ತಿರವಿರುವ ಮೂಲವನ್ನು ಇಂಡಿಯಾ ಟುಡೇ ಉಲ್ಲೇಖಿಸಿದೆ.ಕಳೆದ ಎರಡು ತಿಂಗಳಿನಿಂದ ಅನೀತ್ ಪಡ್ಡಾ ಶಕ್ತಿ ಶಾಲಿನಿ ಸಿನಿಮಾ ಸಂಬಂಧವಾಗಿ ಚರ್ಚೆಯಲ್ಲಿದ್ದಾರೆ.

## 50 ವರ್ಷ ಆದರೂ ಅಮೀಷಾ ಪಟೇಲ್

# ಮದುವೆಯಾಗಿಲ್ಲ..!

ಸಿನಿಮಾ ಉದ್ಯಮದಲ್ಲಿ ಸೆಲೆಬ್ರಿಟಿ ಜೋಡಿಗಳು ಮಾತ್ರವಲ್ಲ, ಅನೇಕ ಹೀರೋ ಮತ್ತು ಹೀರೋಯಿನ್ಸ್ ಸಹ ಒಂಟಿ ಜೀವನ ನಡೆಸುತ್ತಿದ್ದಾರೆ. ಆದಾಗ್ಯೂ, ಅವರಿಗೆ ಮದುವೆಯಲ್ಲಿ ಆಸಕ್ತಿ ಇಲ್ಲ, ಮಕ್ಕಳ ಬಗ್ಗೆಯೂ ಆಸಕ್ತಿ ಇಲ್ಲ ಎಂದು ಭಾವಿಸುವುದು ತಪ್ಪಾಗುತ್ತದೆ. ಏಕೆಂದರೆ 50 ವರ್ಷ ವಯಸ್ಸಿನ ನಂತರವೂ ಮದುವೆಯಾಗದ ಹೀರೋಯಿನ್ ಮಕ್ಕಳನ್ನು ತುಂಬಾ ಪ್ರೀತಿಸುತ್ತಾರೆ. ಅದಕ್ಕಾಗಿಯೇ ಅವರ ಕೆಲವು ಮಕ್ಕಳನ್ನು ರಹಸ್ಯವಾಗಿ ದತ್ತು ಪಡೆದಿದ್ದಾರೆ. ಅವರು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಹಾಗಾದರೆ ಆ ನಟಿ ಯಾರು? ಅವರ ಕಥೆ ಏನು? ಈಗ ನೋಡೋಣ.ಅವರು ಮಕ್ಕಳನ್ನು ತುಂಬಾ ಪ್ರೀತಿಸುತ್ತಾರೆ. ಬಾಲಿವುಡ್ ನಾಯಕಿ ಅಮೀಷಾ ಪಟೇಲ್ ಬಗ್ಗೆ ಮಾತನಾಡುತ್ತಿದ್ದೇವೆ. ಇನ್ನೂ ಅವಿವಾಹಿತರು.'ರಣವೀರ್ ಅಲಹಾಬಾದ್‌ಗೆ ನೀಡಿದ ಸಂದರ್ಶನದಲ್ಲಿ, ಅವರು ತಮ್ಮ ಮದುವೆ, ಮಕ್ಕಳು ಮತ್ತು ವೈಯಕ್ತಿಕ ಜೀವನದ ಬಗ್ಗೆ ಆಸಕ್ತಿದಾಯಕ ವಿಷಯಗಳನ್ನು ಹಂಚಿಕೊಂಡರು. ಅನೇಕ ಜನರನ್ನು ಆಶ್ಚರ್ಯಗೊಳಿಸಿದ್ದ ಅವರು ರಹಸ್ಯವಾಗಿ ಮಕ್ಕಳನ್ನು ದತ್ತು ತೆಗೆದುಕೊಳ್ಳುತ್ತಾರೆ. ಅವರು ಯಾರಿಗೂ ಹೇಳದೆ ಅವರನ್ನು ನೋಡಿಕೊಳ್ಳುತ್ತಿದ್ದಾರೆ.ಅಮೀಷಾ ಅವರು ಮಕ್ಕಳನ್ನು ಎಷ್ಟು ಪ್ರೀತಿಸುತ್ತಾರೆಂದು ಹಂಚಿಕೊಂಡರು. 'ನನಗೆ ಮಕ್ಕಳು ತುಂಬಾ ಇಷ್ಟ. ನಾನು ನನ್ನ ಸೋದರಳಿಯರು ಮತ್ತು ಸೊಸೆಯಂದಿರ ಡೈಪರ್‌ಗಳನ್ನು ಸಹ ಬದಲಾಯಿಸುತ್ತೇನೆ. ಅವರಿಗೆ ಆಹಾರ ನೀಡುವುದು, ಮಲಗಿಸುವುದು ಮತ್ತು ಅವರನ್ನು ನೋಡಿಕೊಳ್ಳುವುದು ನನಗೆ ತುಂಬಾ ಇಷ್ಟ. ನನ್ನ ಜೀವನದಲ್ಲಿ ಕ್ರಿಕೆಟ್ ತಂಡಕ್ಕೆ ಜನ್ಮ ನೀಡುವ ಕನಸು ಕಾಣುತ್ತಿದ್ದೆ. ಮಗುವನ್ನು ಬೆಳೆಸುವುದು ಎಷ್ಟು ಕಷ್ಟ ಎಂದು ನನ್ನ ತಾಯಿ ನನಗೆ ಆಗಾಗ್ಗೆ ಹೇಳುತ್ತಿದ್ದರು. ಆದಾಗ್ಯೂ, ಮಕ್ಕಳ ಮೇಲಿನ ನನ್ನ ಪ್ರೀತಿ ಎಂದಿಗೂ ಕಡಿಮೆಯಾಗಲಿಲ್ಲ ಎಂದು ಅವರು ಹೇಳಿದರು.


ರಹಸ್ಯವಾಗಿ ಮಕ್ಕಳನ್ನು ದತ್ತು ಪಡೆಯುವುದು. ಅಮೀಷಾ ಅವರು ಮೊದಲ ಬಾರಿಗೆ ಕೆಲವು ಮಕ್ಕಳನ್ನು ದತ್ತು ಪಡೆದಿದ್ದಾರೆ ಎಂದು ಬಹಿರಂಗಪಡಿಸಿದರು. ಆದರೆ ಅವರಿಗೂ ಅದರ ಬಗ್ಗೆ ತಿಳಿದಿರಲಿಲ್ಲ. 'ಕೆಲವು ಅನಾಥ ಮಕ್ಕಳಿಗೆ ಮನೆ ಮತ್ತು ಹೊಸ ಜೀವನವನ್ನು ಏಕೆ ನೀಡಬಾರದು ಎಂದು ನಾನು ಯೋಚಿಸಿದೆ. ಆದ್ದರಿಂದ ನಾನು ಮೌನವಾಗಿ ಕೆಲವು ಮಕ್ಕಳನ್ನು ದತ್ತು ತೆಗೆದುಕೊಂಡೆ. ಅವರಿಗೂ ಅದರ ಬಗ್ಗೆ ತಿಳಿದಿರಲಿಲ್ಲ. ಆದರೆ ನಾನು ಅವರನ್ನು ದತ್ತು ತೆಗೆದುಕೊಂಡೆ.



ಆಂಧ್ರ ಪ್ರದೇಶ ಉಪ ಮುಖ್ಯಮಂತ್ರಿ, ನಟ ಪವನ್ ಕಲ್ಯಾಣ್ ಅವರ 'ಓಜಿ' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾದ ಟ್ರೈಲರ್ ಭಾನುವಾರ ಬೆಳಿಗ್ಗೆ ಬಿಡುಗಡೆ ಆಗಬೇಕಿತ್ತು, ಟ್ರೈಲರ್ ಬಿಡುಗಡೆಯನ್ನು ಮುಂದೂಡಲಾಗಿದೆ. ಹಾಗೆಂದು ಟ್ರೈಲರ್ ಬಿಡುಗಡೆ ಬಹಳ ತಡವಾಗುತ್ತಿಲ್ಲ, ಇಂದೇ ಬಿಡುಗಡೆ ಆಗಲಿದೆ ಆದರೆ ಇನ್ನಷ್ಟು ಅದ್ಧೂರಿಯಾಗಿ ಟ್ರೈಲರ್ ಅನ್ನು ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. 'ಓಜಿ ಕಾನ್ಸರ್ಟ್' ಅನ್ನು ಆಯೋಜಿಸಲಾಗಿದ್ದು, ಕಾನ್ಸರ್ಟ್‌ನ ಭಾಗವಾಗಿ

## ಪವನ್ ಕಲ್ಯಾಣ್ ನಟನೆ 'ಓಜಿ' ಟ್ರೈಲರ್ ಬಿಡುಗಡೆ ತಡ, ಆದರೆ ಅದ್ದೂರಿ

ಟ್ರೈಲರ್ ಬಿಡುಗಡೆ ಸಹ ನಡೆಯಲಿದೆ. ಹೈದರಾಬಾದ್‌ನಲ್ಲಿ ಪವನ್ ಕಲ್ಯಾಣ್ ನಟನೆಯ 'ಓಜಿ' ಸಿನಿಮಾದ ಪ್ರೀರಿಲೀಸ್ ಕಾರ್ಯಕ್ರಮವನ್ನು ಬಲು ಅದ್ಧೂರಿ ಯಾಗಿ ಆಯೋಜನೆ ಮಾಡಲಾದೆ. ಹೈದರಾಬಾದ್‌ನ ಎಲ್‌ಬಿ ಸ್ಟೇಡಿಯಂನಲ್ಲಿ ಪ್ರೀ ರಿಲೀಸ್ ಕಾರ್ಯಕ್ರಮ ಆಯೋಜಿಸಲಾಗಿದ್ದು, ಪವನ್ ಕಲ್ಯಾಣ್ ಸೇರಿದಂತೆ ಇನ್ನೂ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದಾರೆ. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ 'ಓಜಿ ಕಾನ್ಸರ್ಟ್' ಆಯೋಜನೆ ಮಾಡಲಾಗಿದ್ದು, ಸಂಗೀತ ನಿರ್ದೇಶಕ ತಮನ್ ಅವರು ಲೈವ್ ಸಂಗೀತ ಪ್ರದರ್ಶನ ನೀಡಲಿದ್ದಾರೆ. ಪ್ರೀ ರಿಲೀಸ್ ಕಾರ್ಯಕ್ರಮದಲ್ಲಿ ಪವನ್ ಕಲ್ಯಾಣ್ ಜೊತೆಗೆ ಬಾಲಿವುಡ್ ನಟ ಇಮ್ರಾನ್ ಹಶ್ಮಿ ಸಹ ಭಾಗಿ ಆಗಲಿದ್ದಾರೆ. ಮಾತ್ರವಲ್ಲದೆ ತೆಲಂಗಾಣದ ಕೆಲವು ಪ್ರಮುಖ ರಾಜಕಾರಣಿಗಳು ಸಹ ಈ ಕಾರ್ಯಕ್ರಮದಲ್ಲಿ ಭಾಗಿ ಆಗಲಿದ್ದಾರೆ ಎನ್ನಲಾಗುತ್ತಿದೆ. ಕಳೆದ ಬಾರಿ ಪವನ್ ನಟನೆಯ 'ಹರಿ ಹರ ವೀರ ಮಲ್ಲು' ಸಿನಿಮಾದ ಪ್ರೀ ರಿಲೀಸ್ ಇವೆಂಟ್ ನಡೆದಾಗ ಆ ಕಾರ್ಯಕ್ರಮದಲ್ಲಿ ಕರ್ನಾಟಕದ ಸಚಿವ ಈಶ್ವರ್ ಖಂಡ್ರೆ ಅವರು ವಿಶೇಷ ಅತಿಥಿಯಾಗಿ ಭಾಗಿ ಆಗಿದ್ದರು.



**ಸಂಗೀತ ನಿರ್ದೇಶಕ ತಮನ್ ಲೈವ್ ಸಂಗೀತ ಪ್ರದರ್ಶನ**

# ಒಂದೇ ವಾರದಲ್ಲಿ 2 ಫೈನಲ್ ಸೋಲು..!

ಒಂದೇ ವಾರದಲ್ಲಿ ಎರಡು ಆಘಾತ ಹೀಗೆ ವಾರದೊಳಗೆ ಎರಡು ಫೈನಲ್ ಸೋಲಿನ ಆಘಾತ ಎದುರಿಸಿದ್ದು ಹ್ಯಾಂಪ್‌ಶೈರ್ ತಂಡ. ಸೆಪ್ಟೆಂಬರ್ 13 ರಂದು ವಿಟಾಲಿಟಿ ಟಿ20 ಬ್ಲಾಸ್ಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಸೋಲನುಭವಿಸಿದ್ದ ಹ್ಯಾಂಪ್‌ಶೈರ್ ಪಡೆ ಇದೀಗ ರಾಯಲ್ ಲಂಡನ್ ಒನ್‌ಡೇ ಕಪ್ ಟೂರ್ನಿಯ ಅಂತಿಮ ಪಂದ್ಯದಲ್ಲಿ ಮುಗ್ಗರಿಸಿದೆ.ಇಂಗ್ಲೆಂಡ್‌ನ ನ್ಯಾಟಿಂಗ್‌ಹ್ಯಾಮ್‌ನ ಟ್ರೆಂಟ್‌ಬ್ರಿಡ್ಜ್ ಸ್ಟೇಡಿಯಂನಲ್ಲಿ ನಡೆದ ರಾಯಲ್ ಒನ್‌ಡೇ ಕಪ್ ಫೈನಲ್ ಪಂದ್ಯದಲ್ಲಿ ಹ್ಯಾಂಪ್‌ಶೈರ್ ಹಾಗೂ ವೋರ್ಸೆಸ್ಟರ್‌ಶೈರ್ ತಂಡಗಳು ಮುಖಾಮುಖಿಯಾಗಿದ್ದವು. ಮಳೆ ಬಾಧಿತ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಹ್ಯಾಂಪ್‌ಶೈರ್ 45 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 237 ರನ್ ಕಲೆಹಾಕಿದ್ದರು. ಈ ವೇಳೆ ಮಳೆ ಬಂದಿದ್ದರಿಂದ ಪಂದ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.ಆ ಬಳಿಕ ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ, ವೋರ್ಸೆಸ್ಟರ್‌ಶೈರ್ ತಂಡಕ್ಕೆ 27 ಓವರ್‌ಗಳಲ್ಲಿ 188 ರನ್‌ಗಳ ಗುರಿ ನೀಡಲಾಯಿತು. ಈ ಗುರಿಯನ್ನು 26.4 ಓವರ್‌ಗಳಲ್ಲಿ ಚೇಸ್ ಮಾಡಿ ವೋರ್ಸೆಸ್ಟರ್‌ಶೈರ್ ತಂಡವು 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ. ಈ ಮೂಲಕ ಇಂಗ್ಲೆಂಡ್‌ನ ರಾಯಲ್ ಒನ್‌ಡೇ ಕಪ್‌ನ ನೂತನ ಚಾಂಪಿಯನ್ ಆಗಿ ವೋರ್ಸೆಸ್ಟರ್‌ಶೈರ್ ತಂಡ ಹೊರಹೊಮ್ಮಿದೆ.ಇದಕ್ಕೂ ಮುನ್ನ, ಕಳೆದ ವಾರ ನಡೆದ ವಿಟಾಲಿಟಿ ಟಿ20 ಬ್ಲಾಸ್ಟ್‌ಫೈನಲ್ ಪಂದ್ಯದಲ್ಲಿ ಹ್ಯಾಂಪ್‌ಶೈರ್ ತಂಡವು ಸೋಲನುಭವಿಸಿತು. ಬ್ಯಾಟ್ ಮಾಡಿದ ಹ್ಯಾಂಪ್‌ಶೈರ್ 20 ಓವರ್‌ಗಳಲ್ಲಿ 194 ರನ್ ಕಲೆಹಾಕಿದ್ದರು.



# ಐಪಿಎಲ್‌ನಲ್ಲಿ ಸಿಎಸ್ ಕೆ ಪರ ಆಡಿದ ಈ ಆಟಗಾರ ಬಿಸಿಸಿಐ ಹೊಸ ಅಧ್ಯಕ್ಷ

ಬೆಂಗಳೂರು : ದೆಹಲಿಯ ಮಾಜಿ ನಾಯಕ ಮಿಥುನ್ ಮನ್ಹಾಸ್ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನೂತನ ಅಧ್ಯಕ್ಷರಾಗುವುದು ಬಹುತೇಕ ಖಚಿತವಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ನಡೆದ ದೀರ್ಘ ಮತ್ತು ಪ್ರಮುಖ ಸಭೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆದಾಗ್ಯೂ, ಭಾರತೀಯ ಕ್ರಿಕೆಟ್ ಮಂಡಳಿ ಅಧಿಕೃತ ಘೋಷಣೆ ಮಾಡಿಲ್ಲ. ದೇಶೀಯ ಸರ್ಕ್ಯೂಟ್‌ನಲ್ಲಿ ವ್ಯಾಪಕವಾಗಿ ಆಡಿದ್ದರೂ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪ್ರವೇಶಿಸದ ಮನ್ಹಾಸ್ ಅಧ್ಯಕ್ಷರಾದ ಮೊದಲ ಅನ್‌ಕ್ಯಾಪ್ಡ್ ಆಟಗಾರನಾಗಲಿದ್ದಾರೆ.

ಅವರು ಈ ಹಿಂದೆ ಜೆಕೆಸಿಎ (ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೇಷನ್) ಪರವಾಗಿ ಬಿಸಿಸಿಐನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ (ಎಜಿಎಂ) ಭಾಗವಹಿಸಿದ್ದರು ಎಂಬುದು ಗಮನಿಸಬೇಕಾದ ಸಂಗತಿ.ಮಿಥುನ್ ಮನ್ಹಾಸ್ ಕಳೆದ ಕೆಲವು ವರ್ಷಗಳಿಂದ ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೇಷನ್‌ನ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಮನ್ಹಾಸ್ ಅಂತರರಾಷ್ಟ್ರೀಯ ಕ್ರಿಕೆಟ್ ಆಡದೇ ಇರಬಹುದು, ಆದರೆ ಅವರು ದೇಶೀಯ ಕ್ರಿಕೆಟ್ ಮತ್ತು ಐಪಿಎಲ್ ಆಡಿದ್ದಾರೆ. 45 ವರ್ಷದ ಮಿಥುನ್ ಮನ್ಹಾಸ್ 2008 ರಲ್ಲಿ ಐಪಿಎಲ್‌ಗೆ ಪಾದಾರ್ಪಣೆ ಮಾಡಿದರು. ಅಂದಿನಿಂದ 2014ರವರೆಗೆ ಅವರು ಒಟ್ಟು 55 ಪಂದ್ಯಗಳನ್ನು ಆಡಿ 514 ರನ್ ಗಳಿಸಿದ್ದಾರೆ. ಐಪಿಎಲ್‌ನಲ್ಲಿ ಮನ್ಹಾಸ್ ದೆಹಲಿ ಕ್ಯಾಪಿಟಲ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪುಣೆ ವಾರಿಯರ್ಸ್ ಇಂಡಿಯಾ ಪರವೂ ಆಡಿದ್ದಾರೆ. ಮಿಥುನ್ ಮನ್ಹಾಸ್ ದೆಹಲಿ ಪರ ದೇಶೀಯ ಕ್ರಿಕೆಟ್ ಆಡಿದ್ದಾರೆ. ಅವರು 157 ಪ್ರಥಮ ದರ್ಜೆ ಪಂದ್ಯಗಳು, 130 ಲಿಸ್ಟ್ ಎ ಪಂದ್ಯಗಳು ಮತ್ತು 91 ಟಿ20 ಪಂದ್ಯಗಳನ್ನು ಆಡಿದ್ದಾರೆ.





## ಕಾಂಗರೂ ನಾಡಿನಲ್ಲಿ ಅಬ್ಬರಿಸಿದ ಸೂರ್ಯವಂಶಿ, ವೇದಾಂತ್, ಅಭಿಗ್ಯಾನ್!

ಭಾರತೀಯ ಅಂಡರ್-19 ಕ್ರಿಕೆಟ್ ತಂಡವು ಆಸ್ಟ್ರೇಲಿಯಾ ಪ್ರವಾಸದಲ್ಲಿ ಉತ್ತಮ ಆರಂಭ ಪಡೆದುಕೊಂಡಿದೆ. ಆಸೀಸ್ ಯುವ ತಂಡದ ವಿರುದ್ಧದ ಮೊದಲ ಯೂತ್ ಏಕದಿನ ಪಂದ್ಯವನ್ನ ಭಾರತ ಕಿರಿಯರ ತಂಡ ಏಳು ವಿಕೆಟ್‌ಗಳಿಂದ ಯಾವುದೇ ಆಯಾಸವಿಲ್ಲದೆ ಸುಲಭವಾಗಿ ಗೆದ್ದುಕೊಂಡಿದೆ. ಆಯುಷ್ ಮಾತ್ರೆ ನಾಯಕತ್ವದಲ್ಲಿ ಭಾರತೀಯ ತಂಡವು ಮೂರು ಯೂತ್ ಮತ್ತು ಎರಡು ಯೂತ್ ಟೆಸ್ಟ್‌ಗಳನ್ನು ಆಡಲು ಆಸ್ಟ್ರೇಲಿಯಾಕ್ಕೆ ತೆರಳಿದ್ದು, ಮೊದಲ ಪಂದ್ಯದಲ್ಲೇ ಗೆಲುವಿನ ಸಿಹಿ ಅನುಭವಿಸಿದೆ. ಭಾನುವಾರ ಬ್ರಿಸ್ಬೇನ್‌ನಲ್ಲಿ ಉಭಯ ತಂಡಗಳ ನಡುವೆ ಮೊದಲ ಏಕದಿನ ಪಂದ್ಯ ನಡೆಯಿತು. ಇಯಾನ್ ಹೀಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ಅಂಡರ್-19 ತಂಡ ಮೊದಲು ಬ್ಯಾಟಿಂಗ್ ಮಾಡಿತು. ಭಾರತೀಯ ಬೌಲರ್‌ಗಳ ದಾಳಿಗೆ ಸಿಲುಕಿದ ಆಸೀಸ್ ತಮ್ಮ ಖಾತೆಯನ್ನು ತೆರೆಯುವ ಮೊದಲೇ, ಆರಂಭಿಕ ಆಟಗಾರರಾದ ಅಲೆಕ್ಸ್ ಟರ್ನರ್ (0) ಮತ್ತು ಸೈಮನ್ ಬಡ್ಜ್ (0) ವಿಕೆಟ್‌ಗಳನ್ನು ಕಳೆದುಕೊಂಡರು. ಕಿಶನ್ ಕುಮಾರ್ ಅವರಿಬ್ಬರನ್ನೂ ಔಟ್ ಮಾಡಿದರು.200ರ ಗಡಿ ದಾಟಿಸಿದ ಜೇಮ್ಸ್ ಉಳಿದ ಆಸೀಸ್ ಆಟಗಾರರಲ್ಲಿ, ಸ್ಟೀವನ್ ಹೋಗನ್ 39 (82 ಎಸೆತ) ಮತ್ತು ಟಾಮ್ ಹೋಗನ್ 41 (81 ಎಸೆತ) ರನ್ ಗಳಿಸಿದರೆ, ಜಾನ್ ಜೇಮ್ಸ್ 68 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 77 ರನ್ ಗಳಿಸಿ ಅಜೇಯರಾಗಿ ಉಳಿದರು.

# ಕೊಹ್ಲಿಯನ್ನೇ ಮೀರಿಸಿದ ಮಂಧಾನ...!

## ಏಕದಿನ ಕ್ರಿಕೆಟ್‌ನಲ್ಲಿ ವೇಗದ ಶತಕ ಸಿಡಿಸಿ ವಿಶ್ವದಾಖಲೆ

ಭಾರತ ಮತ್ತು ಆಸ್ಟ್ರೇಲಿಯಾ ಮಹಿಳಾ ತಂಡಗಳ ನಡುವಿನ 3ನೇ LBM ಪಂದ್ಯದಲ್ಲಿ ಭಾರತೀಯ ಓಪನರ್ ಸ್ಮೃತಿ ಮಂಧಾನ ಐತಿಹಾಸಿಕ ಸಾಧನೆ ಮಾಡಿದ್ದಾರೆ.



ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸರಣಿಯ ನಿರ್ಣಾಯಕ ಪಂದ್ಯದಲ್ಲಿ ಸ್ಮೃತಿ ಕೇವಲ 50 ಎಸೆತಗಳಲ್ಲಿ ಶತಕ ಪೂರೈಸಿ, ಭಾರತೀಯ LBM ಕ್ರಿಕೆಟ್‌ನಲ್ಲಿ ಅತ್ಯಂತ ವೇಗದ ಶತಕದ ದಾಖಲೆಯನ್ನು ನಿರ್ಮಿಸಿದ್ದಾರೆ. ಈ ಸಾಧನೆಯೊಂದಿಗೆ ಅವರು ವಿರಾಟ್ ಕೊಹ್ಲಿ (52 ಎಸೆತಗಳ ಶತಕ, 2013ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಜೈಪುರ್) ದಾಖಲೆಯನ್ನು ಮುರಿದಿದ್ದಾರೆ. 29 ವರ್ಷದ ಈ ಎಡಕೈ ಬ್ಯಾಟರ್ ಈಗ ಭಾರತದ ಪರ LBM ಪಂದ್ಯಗಳಲ್ಲಿ ಅತ್ಯಂತ ವೇಗದ ಶತಕ ಸಿಡಿಸಿದ ಕ್ರಿಕೆಟರ್ ಎಂಬ ವಿಶ್ವದಾಖಲೆ ನಿರ್ಮಿಸಿದ್ದಾರೆ. 413 ರನ್‌ಗಳ ವಿಶ್ವದಾಖಲೆಯ ಸ್ಮೃತಿ ಮಂಧಾನಾ ಓಪನರ್‌ನಾಗಿ ಬ್ಯಾಟಿಂಗ್ ಮಾಡಿ, ಆಸ್ಟ್ರೇಲಿಯಾ ಬೌಲರ್‌ಗಳನ್ನು ಧೂಳಿಪಡಿಸಿದರು. ಈ ಶತಕವು ಸ್ಮೃತಿಯ 13ನೇ LBM ಶತಕವಾಗಿದ್ದು, ಅವರನ್ನು ಮಹಿಳಾ LBMಯಲ್ಲಿ ಅತ್ಯಂತ ಹೆಚ್ಚು ಶತಕ ಸಿಡಿಸಿದ ಆಟಗಾರ್ತಿಯರ ಪೈಕಿ 3ನೇ ಸ್ಥಾನಕ್ಕೆ ತಂದಿದೆ. ಪಂದ್ಯದಲ್ಲಿ ಮಂಧಾನ 63 ಎಸೆತಗಳಲ್ಲಿ 17 ಬೌಂಡರಿ 5 ಸಿಕ್ಸರ್‌ಗಳ ಸಹಿತ 125 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಸ್ಮೃತಿಯ ಶತಕವು ಆಸ್ಟ್ರೇಲಿಯಾ ವಿರುದ್ಧದಲ್ಲಿ ಮಹಿಳಾ ಔBMಯಲ್ಲಿ ಅತ್ಯಂತ ವೇಗದ ಶತಕವಾಗಿದೆ, ಇದಕ್ಕೂ ಮೊದಲು ಅವರೇ ಕಳೆದ ಪಂದ್ಯದಲ್ಲೇ 77 ಎಸೆತಗಳಲ್ಲಿ ಶತಕ ಸಿಡಿಸಿ ವಿಶ್ವದಾಖಲೆ ನಿರ್ಮಿಸಿದ್ದರು.



### ಮಹಿಳಾ LBMಯಲ್ಲಿ ಅತ್ಯಂತ ವೇಗದ ಶತಕಗಳು

ಮೆಗ್ ಲ್ಯಾನಿಂಗ್ (ಆಸ್ಟ್ರೇಲಿಯಾ): 45 ಎಸೆತಗಳು, ನ್ಯೂಜಿಲೆಂಡ್ ವಿರುದ್ಧ, ಸಿಡ್ನಿ, 2012

ಸ್ಮೃತಿ ಮಂಧಾನಾ (ಭಾರತ) : 50 ಎಸೆತಗಳು, ಆಸ್ಟ್ರೇಲಿಯಾ ವಿರುದ್ಧ, ದೆಹಲಿ, 2025

ಬೆತ್ ಮೂನಿ (ಆಸ್ಟ್ರೇಲಿಯಾ) : 57 ಎಸೆತಗಳು, ಭಾರತ ವಿರುದ್ಧ, ದೆಹಲಿ, 2025

ಕರೆನ್ ರೋಲ್ಟನ್ (ಆಸ್ಟ್ರೇಲಿಯಾ) : 57 ಎಸೆತಗಳು, ದಕ್ಷಿಣ ಆಫ್ರಿಕಾ ವಿರುದ್ಧ, ಲಿಂಕನ್, 2000

ಸೋಫಿ ಡಿವೈನ್ (ನ್ಯೂಜಿಲೆಂಡ್) : 59 ಎಸೆತಗಳು, ಐರ್ಲೆಂಡ್ ವಿರುದ್ಧ, ಡಬ್ಲಿನ್, 2018

ಚಮಾರಿ ಅಟಪತ್ತು (ಶ್ರೀಲಂಕಾ) : 60 ಎಸೆತಗಳು, ನ್ಯೂಜಿಲೆಂಡ್ ವಿರುದ್ಧ, ಗಲ್ಲೆ, 2023

ಮ್ಯಾಡಿ ಗ್ರೀನ್ (ನ್ಯೂಜಿಲೆಂಡ್) : 62 ಎಸೆತಗಳು, ಐರ್ಲೆಂಡ್ ವಿರುದ್ಧ, ಡಬ್ಲಿನ್, 2018

ನ್ಯಾಟ್ ಸ್ಕಿವರ್-ಬ್ರಂಟ್ (ಇಂಗ್ಲೆಂಡ್) : 66 ಎಸೆತಗಳು, ಶ್ರೀಲಂಕಾ ವಿರುದ್ಧ, ಲೆಸ್ಟರ್, 2023

ಮೈಯಾ ಲೆವಿಸ್ (ನ್ಯೂಜಿಲೆಂಡ್) : 68 ಎಸೆತಗಳು, ಪಾಕಿಸ್ತಾನ ವಿರುದ್ಧ, ಕ್ರೈಸ್ಟ್‌ಚರ್ಚ್, 1997

ಚಾರ್ಲಟ್ ಎಡ್ವರ್ಡ್ಸ್ (ಇಂಗ್ಲೆಂಡ್) : 70 ಎಸೆತಗಳು, ನ್ಯೂಜಿಲೆಂಡ್ ವಿರುದ್ಧ, ಲಿಂಕನ್, 2011

**ವಿರಾಟ್ ಕೊಹ್ಲಿ : 52 ಎಸೆತಗಳು, ಆಸ್ಟ್ರೇಲಿಯಾ ವಿರುದ್ಧ, ಜೈಪುರ್, 2013 ವಿರೇಂದ್ರ ಸೆಹ್ವಾಗ್ : 60 ಎಸೆತಗಳು, ನ್ಯೂಜಿಲೆಂಡ್ ವಿರುದ್ಧ, ಹ್ಯಾಮಿಲ್ಟನ್, 2009 ವಿರಾಟ್ ಕೊಹ್ಲಿ : 61 ಎಸೆತಗಳು, ಆಸ್ಟ್ರೇಲಿಯಾ ವಿರುದ್ಧ, ನಾಗ್‌ಪುರ್, 2013 ಮೊಹಮ್ಮದ್ ಅಜ್ಹರುದ್ದೀನ್; 62 ಎಸೆತಗಳು, ನ್ಯೂಜಿಲೆಂಡ್ ವಿರುದ್ಧ, ಬಾರೋಡಾ, 1988**


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**